ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೩-೧೪ನೇ ಸಾಲಿನ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

"ಕ್ಯಾತನಹಳ್ಳಿ ರಾಮಣ್ಣನವರ ಕಥಾಸಾಹಿತ್ಯ"

ನಿಬಂಧಕಾರರು

ನೋಂದಣಿ ಸಂಖ್ಯೆ : KVTMKS – 00671

ಕನ್ನಡ ಎಂ.ಫಿಲ್ ವಿದ್ಯಾರ್ಥಿ (ಹಂಪಿ, ಕ.ವಿ.ವಿ.)

೨೦೧೩ – ೧೪

ಕನ್ನಡ ವಿಶ್ವವಿದ್ಯಾಲಯ
ಹಂಪಿ

ೞ೦೧೩–೧೪ನೇ ಸಾಲಿನ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

"ಕ್ಯಾತನಹಳ್ಳಿ ರಾಮಣ್ಣನವರ ಕಥಾಸಾಹಿತ್ಯ"

ನಿಬಂಧಕಾರರು
ನೋಂದಣಿ ಸಂಖ್ಯೆ : KVTMKS – 00671
ಕನ್ನಡ ಎಂ.ಫಿಲ್ ವಿದ್ಯಾರ್ಥಿ (ಹಂಪಿ, ಕ.ವಿ.ವಿ.)

೨೦೧೩ – ೧೪

"ಕ್ಯಾತನಹಳ್ಳಿ ರಾಮಣ್ಣನವರ ಕಥಾಸಾಹಿತ್ಯ"

ಪರಿವಿಡಿ

* * * * *

ಪ್ರಸ್ತಾವನೆ

ಕನ್ನಡ ಸಾಹಿತ್ಯ ಪರಂಪರೆಯು ತನ್ನದೇ ಅದ ಐತಿಹಾಸಿಕ ನೆಲೆಯನ್ನು ಹೊಂದಿದೆ. ಸಾಹಿತ್ಯ ಎಂದರೆ ಒಂದು ಭಾಷೆಯಲ್ಲಿನ ಗ್ರಂಥಗಳ ಸಮೂಹವನ್ನು, ಸಾಹಿತ್ಯವೆಂದು ಕರೆಯುತ್ತೇವೆ. ಮನುಷ್ಯನ ಮನಸ್ಸಿಗೆ ಸಂತೋಷವನ್ನು ನೀಡುವುದರಲ್ಲಿ ನಮ್ಮ ಸಾಹಿತ್ಯ ಲೋಕ ಮುಂದಿದೆ. ಆಯಾ ಭಾಷೆಯ ಸಾಹಿತ್ಯ ಚರಿತ್ರೆಗೆ ತನ್ನದೇ ಆದ ಸ್ವರೂಪ ಇರುತ್ತದೆ. ಪ್ರವೃತ್ತಿ, ಪ್ರಭಾವ ಮತ್ತು ವಿಕಾಸ ಅದರ ಸಾಮಾನ್ಯ ಸ್ವರೂಪವನ್ನು ತಿಳಿಸಿದರೆ ಕಾಲ, ದೇಶ, ಪರಿಸ್ಥಿತಿ, ರಾಜಕೀಯ, ಚರಿತ್ರೆ, ಸಾಮಾಜಿಕ-ಧಾರ್ಮಿಕ ಜೀವನ, ಸಾಹಿತ್ಯ ಪರಿಸರ ಅದರ ವಿಶಿಷ್ಟ ಸ್ವರೂಪವನ್ನು ತಿಳಿಸುತ್ತದೆ. "ಒಂದು ಭಾಷೆಯ ಸಾಹಿತ್ಯ ಚರಿತ್ರೆಯನ್ನು ವಿವೇಚನೆ ಮತ್ತು ವ್ಯಾಸಂಗದ ಸೌಕರ್ಯಕ್ಕಾಗಿ ಅದನ್ನು ವಿಭಾಗಕ್ರಮ ಮಾಡಿಕೊಳ್ಳುತ್ತೇವೆ. ಸಾವಿರಾರು ವರ್ಷಗಳ ಇತಿಹಾಸವುಳ್ಳ ಕನ್ನಡ ಸಾಹಿತ್ಯಕ್ಕೂ ಈ ವಿಂಗಡನೆ ಅನಿವಾರ್ಯ ಮತ್ತು ಅಗತ್ಯವಾದುದು".[೧] ಈ ವಿಭಾಗ ಕ್ರಮಕ್ಕೆ ಒಂದು ತಳಹದಿ ತತ್ವದ ಆಧಾರವಿದೆ, ಆದರೆ, ಇದರಲ್ಲಿ ಸಾಕಷ್ಟು ಮತಬೇಧಗಳಿವೆ.

ಸಣ್ಣಕಥೆಯು ಆಧುನಿಕ ಕನ್ನಡ ಸಾಹಿತ್ಯದ ಒಂದು ಶ್ರೇಷ್ಟ ಪ್ರಕಾರವಾಗಿದ್ದು, ಆಧುನಿಕ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದ ಕಾವ್ಯ, ಕಾದಂಬರಿ, ಕಥನ ಕಾವ್ಯ, ಸಂಗೀತ, ನಾಟಕ, ಪ್ರಬಂಧ, ಆತ್ಮಕಥನ ಇನ್ನು ಮೊದಲಾದ ಸಾಹಿತ್ಯ ವಾಹಿನಿಗಳಂತೆ ಸಣ್ಣಕಥೆಯೂ ಕೂಡ ಒಂದು ಹೊಚ್ಚ ಹೊಸ ಸಾಹಿತ್ಯ ಪ್ರಕಾರವಾಗಿದೆ. ಈ ಪರಿಕಲ್ಪನೆಯ ಸಣ್ಣ ಕತೆಗಳು ಕನ್ನಡ ಪ್ರಾಚೀನ ಸಾಹಿತ್ಯ ಪರಂಪರೆಯಲ್ಲಿಯೇ ಇದ್ದರೂ ಅದು ಆಧುನಿಕ ಕನ್ನಡ ಸಣ್ಣಕಥೆಗಿಂತ ತೀರ ಭಿನ್ನವಾದುದೆಂಬುದು ಗಮನಾರ್ಹವಾಗಿದೆ.

ಅಲ್ಲದೆ ಕಾದಂಬರಿ ಪ್ರಕಾರವನ್ನೇ ಬಲುಮಟ್ಟಿಗೆ ಹೋಲುವ ಸಣ್ಣಕಥೆಯೂ ಕಾದಂಬರಿಯಂತೆ ವಿಶಾಲವಾದ, ಉದಾರವಾದ, ವಾಸ್ತವ ಮತ್ತು ಅದರಾಚೆಗಿನ ಪ್ರಪಂಚವನ್ನೆಲ್ಲಾ ತನ್ನ ತೆಕ್ಕೆಗೆ ತಂದುಕೊಳ್ಳುವ ಒಂದು ಪ್ರಮುಖ ಪ್ರಕಾರವಾಗಿದೆ. ಕಥೆಯ ಬಗ್ಗೆ ಮನುಷ್ಯನಿಗಿರುವ ಜನ್ಮ ಜಾತಕದಿಂದ ಕುತೂಹಲ ಅಲ್ಲದೆ ಸಣ್ಣಕಥೆ, ಭಾವಗೀತೆಯೊಡನೆ ಹೊಸದಾಗಿ ಬಂದ ಸಾಹಿತ್ಯ ಪ್ರಕಾರವಾಗಿರುವುದು ಇದಕ್ಕೆ

---

೧. ಕನ್ನಡ ಸಾಹಿತ್ಯ ಸಂಸ್ಕೃತಿಕೋಶ, ಪು. ೨.

ಕಾರಣವಾಗಿದೆ. ಅಲ್ಲದೆ ಕನ್ನಡದಲ್ಲಿ ಕಾದಂಬರಿಯ ತರುವಾಯ ಸಣ್ಣಕಥೆಯೇ ಅತ್ಯಂತ ಲೋಕಪ್ರಿಯ ಮಾಧ್ಯಮವಾಗಿ ಜನಮನ್ನಣೆ ಪಡೆದುಕೊಂಡಿತು. ಇಂಥ ಕಥೆಗಳ ಬಗ್ಗೆ ನನಗೆ ಮೊದಲಿನಿಂದಲೂ ಆಸಕ್ತಿ ಇದ್ದುದರಿಂದ ಶ್ರೀ ಕ್ಯಾತನಹಳ್ಳಿ ರಾಮಣ್ಣನವರ ಕಥೆಗಳನ್ನು ನಾನು ಅಧ್ಯಯನದ ವಿಷಯವಾಗಿ ಆರಿಸಿಕೊಂಡಿದ್ದೇನೆ.

ಗ್ರಾಮ್ಯ ಜನಜೀವನದ ವಾತಾವರಣದಲ್ಲಿ ಬೆಳೆದ ರಾಮಣ್ಣನವರು ಹೆಚ್ಚಾಗಿ ಬಯಲುಸೀಮೆಯ ಕಥೆಗಳನ್ನು ಬರೆದಿದ್ದಾರೆ. ಒಂದು ಹಳ್ಳಿಯ ಜನಜೀವನ, ದಿನನಿತ್ಯದ ಅವರ ಬದುಕು ಬವಣೆಯನ್ನು ಬಹಳ ಹತ್ತಿರದಿಂದ ಗುರುತಿಸಿದ್ದಾರೆ. ತಾನು ಕೇಳಿದ ಕಂಡ ಅನುಭವಗಳನ್ನು ಕಥೆಯಾಗಿ ಹೆಣೆದಿದ್ದಾರೆ. ಗ್ರಾಮೀಣ ಜನರ ಜೀವನದಲ್ಲಿ ಬಹಳವಾಗಿ ಕಂಡುಬರುವಂತಹ ಸಾಮಾನ್ಯ ವಿಷಯಗಳನ್ನು ಕಥೆಯಾಗಿಸಿದ್ದಾರೆ. ಇವರ ಕಥೆಗಳಲ್ಲಿ ಬದಲಾಗುತ್ತಿರುವ ಕೌಟುಂಬಿಕ ಸಂಬಂಧಗಳು, ಮಹಿಳೆಯರ ಪಾತ್ರಚಿತ್ರಣ, ಗ್ರಾಮ್ಯ ಬದುಕು ಬವಣೆ, ಸಂಪ್ರದಾಯ ಆಚಾರ-ವಿಚಾರ, ಮೂಢನಂಬಿಕೆ, ಸಹೋದರತ್ವ ಇನ್ನೂ ಅನೇಕ ಅಂಶಗಳನ್ನು ಗುರುತಿಸಿದ್ದೇನೆ.

ಇವರ ಒಂದೊಂದು ಕಥೆಯಲ್ಲಿಯೂ ವಿಭಿನ್ನ ರೀತಿಯ ನೆಲೆಗಳನ್ನು ಗುರುತಿಸಬಹುದು. ಬಾಲ್ಯವಿವಾಹದ ಒಂದು ಹೆಣ್ಣಿನ ಮನಃಸ್ಥಿತಿ ಅಲ್ಲಿ ನಡೆಸಿಕೊಳ್ಳುವ ರೀತಿ ಅವಳ ಅಸಹನೆ ಹೀಗೆ ಹತ್ತು ಹಲವು ರೀತಿಯ ಹೆಣ್ಣಿನ ಮನಃಸ್ಥಿತಿಯನ್ನು ಕಾಣಬಹುದು. ಗ್ರಾಮ್ಯಜೀವನ ಬದುಕಿನಲ್ಲಿ ಸಹೋದರತ್ವ ಭಾವನೆಗಳನ್ನು ಹೆಚ್ಚಾಗಿ ಕಾಣಬಹುದು. **"ಹುಟ್ಟುತ್ತ ಅಣ್ಣತಮ್ಮಂದಿರು ಬೆಳೆಬೆಳೆಯುತ್ತಾ ದಾಯಾದಿಗಳು"** ಎನ್ನುವ ಗಾದೆಯಂತೆ ಜೀವನ ಸಾಗುತ್ತಿದ್ದಂತೆಯೇ ಸಂಬಂಧಕ್ಕೆ ಬೆಲೆ ಕೊಡದೆ ಅವರವರ ನೆಲೆಗಳನ್ನು ಕಂಡುಕೊಳ್ಳುವಲ್ಲಿ ಸಾಗುವ ಒಂದು ಚಿತ್ರಣ ಕಂಡುಬರುತ್ತದೆ. ಈಗಲೂ ಗ್ರಾಮಗಳು ಅನೇಕ ಸಾಮಾಜಿಕ ಪಿಡುಗುಗಳಿಂದ ಕೂಡಿದ್ದು ಅದನ್ನು ಹೋಗಲಾಡಿಸಲು ಜನರು ಮುಂದಾಗಬೇಕು ಎಂಬ ಕರೆ ಇದೆ. ಅನೇಕರು **"ಅಪ್ಪಹಾಕಿದ ಆಲದ ಮರ"** ಎಂಬಂತೆ ಅನೇಕ ಕಂದಾಚಾರ ಮೂಢನಂಬಿಕೆಗಳಲ್ಲಿ ಜನರು ಇನ್ನು ನಂಬಿಕೆ ಇಟ್ಟುಕೊಂಡು ಅದನ್ನು ಪಾಲಿಸಿಕೊಂಡು ಬರುವ ಬಗೆ ಕಾಣಬಹುದು. ಇಲ್ಲಿ ವ್ಯಕ್ತಿ-ವ್ಯಕ್ತಿಗಳ ನಡುವೆ ಇರುವಂತಹ ತಾರತಮ್ಯ ಕಾಣಬಹುದು. ಯಾರಾದರೂ ಮುಂದುವರೆಯುತ್ತಿದ್ದರೆ ಅದಕ್ಕೆ ನಾನೇ ಸಂಪೂರ್ಣ ಕಾರಣ ಎನ್ನುವ, ಜನಗಳ ಏಳಿಗೆ ಸಹಿಸದೆ ಹೊಟ್ಟೆಕಿಚ್ಚುಪಡುವ ಜನರನ್ನು ಈ ಸಂದರ್ಭದಲ್ಲಿ ಗುರುತಿಸಲಾಯಿತು. ಹಾಗೆಯೇ **"ಕಾಯಕವೇ ಕೈಲಾಸ"** ಎಂಬ ಬಸವಣ್ಣನವರ ವಚನಗಳಂತೆ ಒಬ್ಬ ಮನುಷ್ಯ ತನಗೆ ಕೈಗೆಟುಕದಿರುವುದನ್ನು ಕನಸ್ಸಿನಲ್ಲಿ ಕಂಡು ಸಂತೋಷ ಪಡುವ ಒಂದು ಪ್ರಕೃತಿ

[illegible]

ವರ್ಣನೆ ಸಹಿತ ಇರುವ ಕಥೆಯಿದೆ. ಗಂಡನ ಬರುವಿಕೆಗಾಗಿ ಕಾದು ಕುಳಿತ ಹೆಣ್ಣು ಪರಿತಪಿಸಿ ಅನುಮಾನಿಸುವ ಕತೆಯು ಕಂಡುಬರುತ್ತದೆ. ಒಬ್ಬ ಆದರ್ಶ ಹಳ್ಳಿಯ ಮುಗ್ಧ ಹುಡುಗನು ತನ್ನ ಆಸೆಯನ್ನು ಮನಸ್ಸಿನಲ್ಲಿಯೇ ಇಟ್ಟುಕೊಂಡು ಮುಖವಾಡ ಧರಿಸಿ ನಡೆಸುವ ಜೀವನ ಮನಃಶಾಸ್ತ್ರದಿಂದ ಆತನ ಮನಸ್ಸಿಗೆ ಹೊಕ್ಕಿ ಹೆಕ್ಕಿ ತೆಗೆಯುವ ಪ್ರಯತ್ನವಿರುವ, ಬಹಳ ಅಚ್ಚುಕಟ್ಟಾಗಿ ಮೂಡಿಬಂದಿರುವ ಕಥೆಯನ್ನು ಕಾಣಬಹುದು.

'ಮನುಷ್ಯನ ಅತಿ ಆಸೆಯ ಫಲ' ಪತ್ರಿಕೆಯಲ್ಲಿ ಓದಿದ್ದ ಕಥೆ ಕೇಳಿ ನಿಜ ಎಂದು ಬೆಚ್ಚಿಬಿದ್ದದ್ದು. ಅದೇ ತರಹದ ಘಟನೆಯ ಅವರ ಊರಿನಲ್ಲಿಯೇ ನಡೆದ ಸಂಗತಿ ಕಾಣಬಹುದು. ಊರಿನಲ್ಲಿ ನಡೆಯುವ ಸಂಪ್ರದಾಯಗಳು, ಆಚರಣೆಗಳು ಆಳುಗಳ ಮೇಲೆ ಯಜಮಾನರ ದಬ್ಬಾಳಿಕೆ ಬಡವರ ಶೋಷಣೆಯನ್ನು ಕಾಣಬಹುದು. **"ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕು"** ಎಂಬ ಮಾತಿನಂತೆ ಅನೇಕ ಸಂದರ್ಭ ಪರಿಸ್ಥಿತಿಯನ್ನು ಹಳ್ಳಿ ಜನರ ಜೀವನದಲ್ಲಿ ಕಾಣಬಹುದು. ಸಾಮಾಜಿಕ ಸಮಸ್ಯೆ ಈ ವ್ಯವಸ್ಥೆಯು ಕುಟುಂಬದ ಮೇಲೆ ಬೀರುವ ಪ್ರಭಾವ ಮಕ್ಕಳ ಮನಸ್ಥಿತಿಯಿಂದಾಗಿ ಹಿರಿಯರು ಅನುಭವಿಸಿದ ನೋವು ಮನೆ ಒಡೆದು ಹೋಗುವ ಚಿತ್ರಣ ರಾಮಣ್ಣನವರ ಕತೆಗಳಲ್ಲಿದೆ.

ವಯಸ್ಸಿಗೆ ಬಂದ ಮಕ್ಕಳ ಬಗ್ಗೆ ತಾಯಿತಂದೆಗಳ ಕಾಳಜಿ ಇರುವ ಕತೆ ಇದೆ. ಗಾಳಿಸುದ್ದಿ ಹಬ್ಬಿಸುವುದರಿಂದ ಆಗುವ ಅನಾಹುತಗಳು ನಾಯಕ ತಾಯಿಯ ಚಾಡಿ ಮಾತಿನಿಂದ ಒಂದು ಕುಟುಂಬ ಜೀವನ ಹಾಳುಮಾಡಿದ ಒಂದು ಅನಿರೀಕ್ಷಿತ ಆಘಾತವನ್ನುಂಟು ಮಾಡಿದ ಕತೆಯು ಬರುತ್ತದೆ. ವಯಸ್ಸಿಗೆ ಬಂದಂತಹ ಮಕ್ಕಳ ಮನಸ್ಸು ಮಂಗನಂತೆ ಒಂದು ಕೊಂಬೆಯಿಂದ ಮತ್ತೊಂದು ಕೊಂಬೆಗೆ ಹಾರುವಂತ ಪ್ರಸಂಗವನ್ನು ಬಹಳ ಅಚ್ಚುಕಟ್ಟಾಗಿ ವಿವರಿಸಿದ್ದಾರೆ.

ಅಸಮಾನತೆ ಮೂಢನಂಬಿಕೆ, ಶ್ರೀಮಂತರ ದಬ್ಬಾಳಿಕೆ, ಹೆಣ್ಣಿನ ಶೋಷಣೆ, ಕೌಟುಂಬಿಕ ವ್ಯವಸ್ಥೆ, ಆ ಕೌಟುಂಬಿಕ ವ್ಯವಸ್ಥೆಗಳಲ್ಲಿ ಇಂದಿಗೂ ಸಹ ನಡೆದುಕೊಂಡು ಬರುತ್ತಿರುವ ಆಚಾರ-ವಿಚಾರ, ಸಂಪ್ರದಾಯಗಳ ಪ್ರತಿರೂಪದ ಅನಾವರಣ ಇವರ ಕಥೆಗಳಲ್ಲಿ ಅಭಿವ್ಯಕ್ತವಾಗುತ್ತ ಸಾಗುತ್ತದೆ. ಶಾಂತಿ ಮಾಡುವ ನೆಪದಲ್ಲಿ ಒಡೆದು ಹೋದ ಸಂಬಂಧ ಮತ್ತೆ ಬೆಸೆದುಕೊಳ್ಳುವ ಒಂದು ಹಳ್ಳಿಯ ನೈಜ ಬದುಕನ್ನು ಪ್ರತಿಬಿಂಬಿಸುವ ಕತೆಯನ್ನು ಕಾಣಬಹುದು.

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹಲವು ಕಾರಣದಿಂದಾಗಿ ಸಣ್ಣಕಥೆ ವಿಶಿಷ್ಟವಾದ ವಿಭಿನ್ನ ನೆಲೆಗಳಿಂದ ಕೂಡಿದ ಪ್ರಮುಖ ಸಾಹಿತ್ಯ ಪ್ರಕಾರ ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ ಮತ್ತು ದಲಿತ ಬಂಡಾಯ ಎಂಬ ಎಲ್ಲ ಮಜಲುಗಳಲ್ಲಿಯೂ ಸಣ್ಣಕತೆ ಪ್ರಕಾರ ವಸ್ತು, ಭಾಷೆ, ಪಾತ್ರಧೋರಣೆ ಎಲ್ಲದರಲ್ಲೂ ವಿಭಿನ್ನತೆಯನ್ನು ರೂಪಿಸಿಕೊಂಡಿದೆ.

ಗ್ರಾಮೀಣ ಪರಿಸರದಲ್ಲಿ ಕಂಡುಕೊಳ್ಳುವ ನಿಟ್ಟಿನಲ್ಲಿ ಅತಿಸೂಕ್ಷ್ಮ ಸಮಸ್ಯೆಗಳನ್ನು ಕಂಡು ಹಿಡಿದು ಅದನ್ನು ಸರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಜನಸಾಮಾನ್ಯರು ನಡೆದುಕೊಳ್ಳಬೇಕಾದ ರೀತಿಯನ್ನು ಇವರ ಕತೆಗಳು ಪ್ರತಿಧ್ವನಿಸುತ್ತವೆ.

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಕ್ಕೂ ಮಿಗಿಲು ಅಖಂಡ ಪರಂಪರೆ ಇದೆ. ಕನ್ನಡ ಎಂದರೆ ಕೇವಲ ಭಾಷೆಯಾಗಿರದೆ ನಾಡು–ನುಡಿ, ಸಂಸ್ಕೃತಿ, ಪರಿಸರ, ಸ್ವಭಾವ ಮತ್ತು ಅಭಿರುಚಿಯನ್ನು ಒಳಗೊಂಡಿರುವ ಅನನ್ಯವಾದುದೇನೋ ಇದೆ. ಜನಪದರಿಂದ ಹಿಡಿದು ವಿದ್ವತ್ಪೂರ್ಣ ಮಹಾಕಾವ್ಯಗಳವರೆಗೆ ಕನ್ನಡ ಭಾಷಾಸಂಪತ್ತು ಹೆಮ್ಮೆಪಡುವಂತಿದೆ. ಕನ್ನಡ ಸಾಹಿತ್ಯ ಚರಿತ್ರೆಯ ಸಮಗ್ರ ದರ್ಶನವಾಗಬೇಕಾದರೆ ಈ ಎಲ್ಲಾ ಮಗ್ಗುಲಿನತ್ತ ದೃಷ್ಟಿಹರಿಸಬೇಕಾಗುತ್ತದೆ. ಕನ್ನಡ ಸಾಹಿತ್ಯ ಎಂದಾಕ್ಷಣ ಮನಸ್ಸಿಗೆ ಏನೋ ಒಂದು ತರಹದ ಸಂತೋಷವು ಕಂಡುಬರುತ್ತದೆ. ಏಕೆಂದರೆ ಕನ್ನಡ ಸಾಹಿತ್ಯ ಓದುಗನಿಗೆ ಅಂದರೆ ಸಹೃದಯರಿಗೆ ರಸವನ್ನು ಉಣಬಡಿಸುತ್ತದೆ. ಸಾಹಿತ್ಯ ರಸಾಸ್ವದನೆಯಿಂದ ಹರ್ಷೋದ್ಘಾರವಾಗುತ್ತದೆ. ಹೇಗೆ ಒಬ್ಬ ಮದುಮಗಳಿಗೆ ಅಲಂಕಾರ ಮಾಡಿದರೆ ಸುಂದರವಾಗಿ ಕಾಣುತ್ತಾಳೋ ಹಾಗೆಯೇ ನಮ್ಮ ಕವಿಗಳು ಲೇಖಕರು ಎಲ್ಲರೂ ಶಬ್ದಗಳ ಚಮತ್ಕಾರದಿಂದ ಕನ್ನಡ ಸಾಹಿತ್ಯವನ್ನು ಸುಂದರಗೊಳಿಸಿದ್ದಾರೆ. ಎಲ್ಲರನ್ನೂ ಮೈಮರೆಸುವಂತಹ ಶಕ್ತಿ ನಮ್ಮ ಕನ್ನಡ ಸಾಹಿತ್ಯ ಲೋಕಕ್ಕಿದೆ. ಆಯಾ ಕಾಲದ ಸನ್ನಿವೇಶ ಸಂದರ್ಭಕ್ಕೆ ತಕ್ಕಂತೆ ವಿಷಯದ ವೈವಿಧ್ಯತೆಯಿಂದ ಸೃಜನಾತ್ಮಕ ಬರವಣಿಗೆಯ ಜೊತೆಜೊತೆಗೆ ಹೊಸತನವು ಮೂಡಿಬಂದಿದೆ.

ಆಯಾ ಭಾಷೆಯ ಸಾಹಿತ್ಯ ಚರಿತ್ರೆಗೆ ತನ್ನದೇ ಆದ ಸ್ವರೂಪ, ಪ್ರವೃತ್ತಿ, ಪ್ರಭಾವ ಮತ್ತು ವಿಕಾಸವಿದೆ. ಸಾಮಾನ್ಯ ಸ್ವರೂಪವನ್ನು ತಿಳಿಸಿದರೆ ಕಾಲ, ದೇಶ, ಪರಿಸ್ಥಿತಿ, ರಾಜಕೀಯ ಚರಿತ್ರೆ, ಸಾಮಾಜಿಕ, ಧಾರ್ಮಿಕ ಜೀವನ ಮತ್ತು ಸಾಹಿತ್ಯ ಪರಿಸರ ಅದರ ವಿಶಿಷ್ಟ ಸ್ವರೂಪವನ್ನು ತಿಳಿಸುತ್ತದೆ. ಮಾನವನ ಪ್ರತಿಯೊಂದು ಅನುಭವಕ್ಕೂ ಒಂದು ಇತಿಹಾಸವಿರುತ್ತದೆ. ಸಮಕಾಲೀನ ಸಾಹಿತ್ಯವನ್ನು ಅರಿತರೆ ಮಾತ್ರ ಸಾಲದು. ಆ ಸಾಹಿತ್ಯಕ್ಕಿರುವ ಚರಿತ್ರೆಯನ್ನು ಅರಿಯಬೇಕು. ಇದನ್ನು ಅರಿಯಲು ಆಧಾರಗಳು ಅವಶ್ಯಕ. ನಮ್ಮ ಕನ್ನಡ ಸಾಹಿತ್ಯ ಲೋಕದಲ್ಲಿ ಅನೇಕ ಲೇಖಕರು, ಕವಿಗಳು, ವಿಮರ್ಶಕರು ನಮ್ಮ ಸಾಹಿತ್ಯ ಚರಿತ್ರೆಯನ್ನು ಉತ್ತುಂಗ ಶಿಖರಕ್ಕೆ ಏರಿಸಿದ್ದಾರೆ. ಅಂತಹವರ ಸಾಲಿನಲ್ಲಿ ಎಲೆಮರೆಕಾಯಿಯಂತಿರುವ ಶ್ರೀ ಕ್ಯಾತನಹಳ್ಳಿ ರಾಮಣ್ಣನವರು ಒಬ್ಬರು "ಜಾನಪದ ಜಗತ್ತಿನ ಕಿಟೆಲ್" ಎಂಬ ಕೀರ್ತಿಗೆ ಪಾತ್ರರಾಗಿರುವ ಶ್ರೀಕ್ಯಾತನಹಳ್ಳಿ ರಾಮಣ್ಣ ಅವರು ಬಹುಮುಖ ಪ್ರತಿಭೆಯುಳ್ಳ ವಿದ್ವಾಂಸರು ಜಾನಪದ ಕ್ಷೇತ್ರದಲ್ಲಿ ಕಳೆದ

ಮೂರು ದಶಕಗಳಿಂದ ಅವಿರತವಾಗಿ ದುಡಿಯುತ್ತ ಬಂದಿರುವ ಸತ್ವವುಳ್ಳ ಸೃಜನಶೀಲ ಬರಹಗಾರರು. ಶ್ರೇಷ್ಠ ಕಥೆಗಾರರಾಗಿ, ನಾಟಕಕಾರರಾಗಿ, ಸಂಶೋಧಕರಾಗಿ ಜಾನಪದ ತಜ್ಞರಾಗಿ ಇವರು ಹೆಸರು ಗಳಿಸಿದ್ದಾರೆ.

"ರೈತನೇ ದೇಶದ ಬೆನ್ನೆಲುಬು" ಎಂಬ ಮಾತಿನಂತೆ ಗ್ರಾಮ್ಯ ಜೀವನದ ಸಾಮಾನ್ಯ ರೈತ ಕುಟುಂಬದಲ್ಲಿ ಹುಟ್ಟಿಬೆಳೆದ ಶ್ರೀ ಕ್ಯಾತನಹಳ್ಳಿ ರಾಮಣ್ಣ ಅವರಿಗೆ ಹಳ್ಳಿಯ ಜೀವನವು ಬಾಲ್ಯದಲ್ಲಿ ಅನುಭವ ಶ್ರೀಮಂತಿಕೆ. ಗ್ರಾಮೀಣ ಸೊಗಡನ್ನು ಉಣಬಡಿಸಿದೆ. ಗ್ರಾಮ್ಯ ಜೀವನಾನುಭವ, ಆಳವಾದ ವ್ಯಾಸಂಗ, ಅಪಾರವಾದ ಜೀವಾನದರ್ಶನಗಳು, ವ್ಯಾಪಕ ಚಿಂತನೆಗಳು, ಕ್ಷೇತ್ರಕಾರ್ಯಾನುಭವ ಶ್ರೀಯುತರ ವಿಶಿಷ್ಟ ವ್ಯಕ್ತಿತ್ವದ ಅಭಿವ್ಯಕ್ತಿಯಲ್ಲಿ ಜೀವತುಂಬಿ, ಸಾಹಿತ್ಯ ಕೃತಿಗಳಾಗಿ ಜನ್ಮತಳೆದಿದೆ. ಹೊಗಳಿಕೆಗೆ ಕುಗ್ಗದೆ, ತಮ್ಮಷ್ಟಕ್ಕೆ ತಾವು ತಮ್ಮ ಕರ್ತವ್ಯದಲ್ಲಿ ತನ್ಮಯರಾಗಿ ಬಂದದ್ದನ್ನು ತಿರಸ್ಕರಿಸದೆ ಬಾರದದ್ದಕ್ಕೆ ಕೊರಗದೆ ಸ್ಥಿರವಾಗಿ ನಿಂತ ಸ್ಥಿತಿಪ್ರಜ್ಞ ತಪಸ್ವಿಯಂತೆ ರಾಮಣ್ಣನವರು ಸಾಹಿತ್ಯ ಕೃಷಿಯಲ್ಲಿ ಕಾಣಿಸಿಕೊಂಡಿದ್ದಾರೆ.

ಗ್ರಾಮ್ಯ ಜೀವನದಲ್ಲಿ ಬೆಳೆದ ಇವರು ಗ್ರಾಮೀಣ ಬದುಕು-ಬವಣೆ ಸಂಪ್ರದಾಯ ಆಚರಣೆ, ಆಚಾರ-ವಿಚಾರ, ಮೂಢನಂಬಿಕೆ, ಸಾಮಾಜಿಕ ಸಮಸ್ಯೆ, ಸ್ತ್ರೀ ಪುರುಷ ಸಮಾನತೆ ಮನುಷ್ಯನ ಮಾನಸಿಕ ಪ್ರಜ್ಞೆ, ಧಾರ್ಮಿಕ ವಿಧಿವಿಧಾನ, ಕೌಟುಂಬಿಕ ಪ್ರಜ್ಞೆ ಸಂಬಂಧದ ಬೆಲೆ ಹೀಗೆ ಹತ್ತು ಹಲವು ವಿಷಯಗಳನ್ನು ತಮ್ಮ ಸುತ್ತಮುತ್ತಲಿನ ಕಥೆಗಳನ್ನು ಅಂದರೆ ನೈಜ ಸತ್ಯಕಥೆಗಳು ಮತ್ತು ಜಾನಪದವಾಗಿ ಬಂದಂತಹ, ಕಂಡು ಕೇಳಿದಂತಹ ಕಥೆಗಳನ್ನು ತಮ್ಮ ಇಂದ್ರೀಯಗಳ ಅನುಭವಕ್ಕೆ ಬಂದಂತಹ ಕಥೆಗಳನ್ನು ಇವರು ಬರೆದಿದ್ದಾರೆ. ಗ್ರಾಮೀಣ ಜನರ ಮನಃಸ್ಥಿತಿ ಅವರ ಆಸೆಆಕಾಂಕ್ಷೆಗಳು ಬಡತನದಲ್ಲಿ ಬೆಂದುಹೋದ ನಿರೀಕ್ಷೆಗಳು ಜನಗಳ ಮಾನಸಿಕ ಪರಿಸ್ಥಿತಿ ಯಾವ ರೀತಿ ಹೊಟ್ಟೆಕಿಚ್ಚಾಗಿ ಮಾರ್ಪಾಡಾಗುತ್ತದೆ ಎಂಬುದನ್ನು ಗುರುತಿಸಬಹುದು. "ಹುಟ್ಟುತ್ತ ಅಣ್ಣ-ತಮ್ಮ ಬೆಳೆ ಬೆಳೆಯುತ್ತ ದಾಯಾದಿಗಳು' ಎಂಬ ಗಾದೆಯಂತೆ ಸೋದರ ವಾತ್ಸಲ್ಯ ಯಾವ ರೀತಿ ಮುರಿದುಬೀಳುತ್ತದೆಂಬುದನ್ನು ಇಲ್ಲಿ ಕಾಣಬಹುದು.

ಅಕ್ಷರಭ್ಯಾಸ ಜೀವಿಸಲು ಎಷ್ಟು ಬುದ್ದಿಬೇಕೋ ಅದಕ್ಕೆ ಅಲ್ಪಮಟ್ಟದಲ್ಲಿ ವಿದ್ಯೆ ಕಲಿಸುವ ತಂದೆಯ ಮನಃಸ್ಥಿತಿ, "ಪ್ರತ್ಯಕ್ಷ ಕಂಡರೂ ಪ್ರಾಮಾಣಿಸಿ ನೋಡಬೇಕು" ಎಂಬ ಮಾತಿನಂತೆ ಮನುಷ್ಯನ ಕೈವಾಡವಿಲ್ಲದೇ ಒಂದು ಜೀವಿಯಿಂದ ಆದ ಅಚಾತುರ್ಯದಿಂದ ಸಂಬಂಧ ಕಳಚಿಬಿದ್ದ ಬಗೆ ಹೀಗೆ ಹತ್ತು ಹಲವು ವಿಷಯಗಳ ಬಗ್ಗೆ ಕಥೆಗಳನ್ನು ಬರೆದಿದ್ದಾರೆ. ವಿಷಯದ ಆಯ್ಕೆಯಿಂದ ಮೊದಲ್ಗೊಂಡು ಸಂಭಾಷಣೆಯ

ರಚನೆಯವರೆಗೆ ಅವರ ಸತತ ಚಿಂತನೆ, ಜೊತೆಗೆ ಗ್ರಾಮೀಣ ಪದಗಳನ್ನು ಬಳಸಿಕೊಂಡು ವಿನೂತನ ಬಗೆಯ ಸಾಹಿತ್ಯರಚನೆ ಸಣ್ಣಕಥಾ ಪ್ರಪಂಚದಲ್ಲಿ ವಿಶಿಷ್ಟವಾಗಿ ಮೂಡಿಬಂದಿದೆ.

ನಮ್ಮ ದೇಶ ಮುಂದುವರೆಯಲು ಬಹಳ ಮುಖ್ಯವಾದ ಅಡಿಪಾಯ ಹಳ್ಳಿಗಳು. ಪಟ್ಟಣದವರು ನಕ್ಕು ನಲಿಯಲು ಆರೋಗ್ಯದಿಂದ ಇರಲು ಸುಖಶಾಂತಿ ನೆಮ್ಮದಿ ಜೀವನ ನಡೆಸಲು ಬಹುಮುಖ್ಯ ಕಾರಣಕರ್ತರು ನಮ್ಮ ರೈತರು. ಅವರ ಬೆವರ ಹನಿಯೇ ನಮ್ಮ ನೆಮ್ಮದಿ ಜೀವನ. ನಮ್ಮ ರೈತರಿಗೆ ತನ್ನ ತಾಯಿ ಮೇಲೆ ಇರುವಷ್ಟೆ ಮಮಕಾರ, ಪ್ರೀತಿ, ತನ್ನ ನೆಲ, ಜಲ, ಗ್ರಾಮಗಳ ಬಗ್ಗೆಯೂ ಇದೆ. ಯಾವುದೇ ಕಾರಣಕ್ಕೂ ತನ್ನ ಭೂತಾಯಿಗೆ ಅನ್ಯಾಯವಾಗುವುದಕ್ಕೆ ಬಿಡುವುದಿಲ್ಲ ನಮ್ಮ ರೈತರು. ಸಹನೆಯ ಮೂರ್ತಿಯಂತಿರುವ ಈ ಭೂಮಿಯಲ್ಲಿ ಜನಿಸಿದ ಪ್ರತಿಯೊಬ್ಬರು ಕೂಡ ಧನ್ಯರು. ಈ ಮಣ್ಣಿನ ಮಹತ್ವಕ್ಕೆ ಬೆಲೆಕಟ್ಟಲು ಅಸಾಧ್ಯ. ಹಳ್ಳಿಗಾಡಿನ ಜನರು ತಾವು ಉಂಡು ಪರರಿಗೂ ನೀಡುವಂತಹ ಸ್ವಭಾವವುಳ್ಳವರು. ನಮ್ಮ ಕನ್ನಡ ನಾಡುನುಡಿ ತನ್ನದೇಆದ ವಿಶಿಷ್ಟ ರೀತಿಯ ಸಂಸ್ಕೃತಿಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿದೆ. ನಮ್ಮ ಕನ್ನಡ ಸಂಸ್ಕೃತಿ ಎಲ್ಲರನ್ನೂ ಆಕರ್ಷಿಸಿದೆ. ಬೇರೆ ದೇಶದವರು ನಮ್ಮ ಸಂಸ್ಕೃತಿಗೆ ಮಾರುಹೋಗಿದ್ದಾರೆ. ಈ ವಿಶಿಷ್ಟವಾದ ಸಂಸ್ಕೃತಿಯು ಕನ್ನಡ ನಾಡಿಗೆ ಕಳಸವಿಟ್ಟಂತೆ. ನಮ್ಮ ಸಂಸ್ಕೃತಿ ತನ್ನದೇ ಆದ ಹಿರಿಮೆಯನ್ನು ಗರಿಮೆಯನ್ನು ಉಳಿಸಿಕೊಂಡಿದೆ.

ನಮ್ಮ ಕನ್ನಡನಾಡಿನ ನಿಜವಾದ ನೆಲೆಯಿರುವುದು ಹಳ್ಳಿಗಳಲ್ಲಿ. ಆ ಹಳ್ಳಿಯ ಜನರಲ್ಲಿ ಮುಗ್ಧತೆಯನ್ನು ನಾವು ಕಾಣಬಹುದು. ಅದರಲ್ಲೂ ಪಾವಿತ್ರ್ಯತೆ ಉಳಿಸಿಕೊಂಡು, ಮಮಕಾರದ ಮಡಿಲಾಗಿ ಬಾಂಧವ್ಯದ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವುದು ಗ್ರಾಮಗಳೇ. ಶ್ರಮಜೀವಿಗಳು ಎಂದರೆ ನಮ್ಮ ಹಳ್ಳಿ ಜನ. ಅವರಿಗೆ ಮೋಸ ವಂಚನೆ ಯಾವುದು ತಿಳಿಯುವುದಿಲ್ಲ. ಭೂತಾಯಿಯನ್ನು ನಂಬಿ ಜೀವಿಸುತ್ತಾರೆ. ಅವರು ನಿಯತ್ತಿಗೆ ಪ್ರಾಣಬೇಕಾದರೂ ನೀಡುತ್ತಾರೆ. ಇಂದಿಗೂ ನಮ್ಮ ಸಂಸ್ಕೃತಿ ಇನ್ನು ಉಳಿದಿರುವುದೆಂದರೆ ಹಳ್ಳಿಗಳಲ್ಲಿ ಮಾತ್ರ ಸಾಧ್ಯ. ಅವರು ವರ್ಷಪೂರ್ತಿ ದುಡಿದು ಸುಗ್ಗಿಕಾಲದಲ್ಲಿ ಮಾತ್ರ ಮನರಂಜನೆಯನ್ನು ಪಡೆಯುತ್ತಾರೆ. ಗ್ರಾಮಗಳಲ್ಲಿ ಇಂದಿಗೂ ಉಳಿಸಿಕೊಂಡು ಬಂದಿರುವ ಒಂದು ವ್ಯವಸ್ಥೆ ಎಂದರೆ ಹಬ್ಬಗಳ ಆಚರಣೆ. ತಮ್ಮ ಯೋಗ್ಯತೆಗೆ ತಕ್ಕಂತೆ ತಮ್ಮ ಕೈಲಾದ ರೀತಿಯಲ್ಲಿ ಹಬ್ಬಗಳನ್ನು ಆಚರಿಸುತ್ತಾ ಬರುತ್ತಿದ್ದಾರೆ. ಹಳ್ಳಿ ಎಂದಾಕ್ಷಣ ಅವರಿಗೆ ಮಕ್ಕಳ

ಮದುವೆಯನ್ನು ಬಹಳ ಬೇಗ ಮಾಡಲು ಮುಂದಾಗಿ ಮಕ್ಕಳಿಗೆ ತಿಳುವಳಿಕೆ ಬರುವ ಮೊದಲು ಅವರಿಗೆ ಬಾಲ್ಯವಿವಾಹ ಮಾಡಿ ಮೂಢನಂಬಿಕೆಗಳನ್ನು ಆಚರಿಸಿಕೊಂಡು ಬರುತ್ತಿದ್ದದ್ದು ಕಂಡುಬರುತ್ತದೆ.

ಹಿಂದೆ ಜನರು ತಮ್ಮ ಕಷ್ಟಸುಖಗಳನ್ನು ಬೇರೆಯವರಿಗೆ ಹೇಳಿಕೊಳ್ಳಲು ಸಾಧ್ಯವಾದಾಗ ಅವರು ಕೆಲಸ ಕಾರ್ಯಗಳನ್ನು ಮಾಡುವಾಗ ಅಂದರೆ ಭತ್ತ ಕುಟ್ಟುವಾಗ, ರಾಗಿ ಬೀಸುವಾಗ ತಮ್ಮ ಜೀವನದ ಕಷ್ಟಸುಖಗಳನ್ನು ಪದ ಕಟ್ಟಿ ಹಾಡು ಹೇಳುತ್ತಿದ್ದರು. ಅದಕ್ಕೆ ತನ್ನದೇ ಆದ ಲಯವಿದೆ. ನಂತರ ಅದು ಬಾಯಿಂದ ಬಾಯಿಗೆ ತಲೆಮಾರಿನಿಂದ ತಲೆಮಾರಿಗೆ ಹರಿದು ಅದು ಜನಪದವಾಯಿತು. ಯಾವುದೇ ಒಂದು ಜನಸಮುದಾಯದಲ್ಲಿನ ಜೀವನ ಪದ್ಧತಿ, ಆಚರಣೆ, ನಂಬಿಕೆ, ಸಂಪ್ರದಾಯಗಳೂ ಸೇರಿದಂತೆ ಅಲ್ಲಿನ ಆಟ, ಪಾಠ, ಕರಕುಶಲ ಕಲೆ ವಸ್ತುಗಳೆಲ್ಲವನ್ನೂ ಜಾನಪದವೆಂದು ಕರೆಯಲಾಗಿದೆ. ಆದಿಮಾನವನ ಕಾಲದಿಂದ ಹಿಡಿದು ಆಧುನಿಕ ಕಾಲದ ನಾಗರಿಕ ಮಾನವ ಸಮುದಾಯಗಳಲ್ಲಿ ಜಾನಪದ ಅಳಿಯದೇ ಉಳಿದುಕೊಂಡು ಬಂದಿದೆ. ಭಾಷೆಗೆ ಲಿಪಿ ಕಾಣಿಸಿಕೊಳ್ಳದ ಪೂರ್ವಕಾಲದಲ್ಲಿ ಮಾನವ ಸಮಾಜದ ಎಲ್ಲಾ ವರ್ತನೆಗಳು ಮೌಖಿಕವಾಗಿಯೇ ಅಭಿವ್ಯಕ್ತವಾಗುತ್ತಿದ್ದವು. ಹಾಡು, ಕುಣಿತ, ಆಚಾರವಿಚಾರಗಳೆಲ್ಲವೂ ಆಯಾ ಸಮುದಾಯಗಳಲ್ಲಿ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿಯೇ ಸಾಗಿಬರುತ್ತಿದ್ದವು. ಹೀಗಾಗಿ ಇದೆಲ್ಲ ಸಾಮೂಹಿಕವಾಗಿ ಸೃಷ್ಟಿಗೊಂಡದ್ದಾಗಿದೆ.

ಜನರಿಂದ ಬೆಳೆದ ಈ ಸಾಹಿತ್ಯ ಮುಂದೆ ಆಧುನಿಕ ಸ್ವರೂಪ ಪಡೆಯುತಾ ಹೋಯಿತು. ಕಥೆ, ಕಾದಂಬರಿ, ಸಣ್ಣಕತೆ, ನಾಟಕ, ಪ್ರಬಂಧ, ಲಲಿತ ಪ್ರಬಂಧ, ಪ್ರವಾಸಸಾಹಿತ್ಯ ಮುಂತಾದ ಹಲವು ಬಗೆಗಳು ಸಾಹಿತ್ಯದಲ್ಲಿ ಕಂಡುಬಂದವು. ಹತ್ತೊಂಬತ್ತನೆಯ ಶತಮಾನ ನಮ್ಮ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಅನೇಕ ದೃಷ್ಟಿಯಿಂದ ಪುನರುಜ್ಜೀವನದ ಮತ್ತು ಸೃಜನಾತ್ಮಕ ಚಿಂತನೆಯ ಮುಖ್ಯ ಕಾಲಘಟ್ಟವಾಗಿದೆ. ಈ ಸಂದರ್ಭದಲ್ಲಿಯೇ ಸಣ್ಣಕತೆಯ ಚರಿತ್ರೆ ಆರಂಭವಾದುದು. ಕನ್ನಡದಲ್ಲಿ ಕಾದಂಬರಿಯ ತರುವಾಯ ಸಣ್ಣಕತೆಯೇ ಅತ್ಯಂತ ಲೋಕಪ್ರಿಯವಾದ ಸಾಹಿತ್ಯ ಪ್ರಕಾರವಾಗಿದೆ. ಈ ಮಾತು ಭಾರತದ ಉಳಿದೆಲ್ಲ ಪ್ರಾಂತ್ಯಗಳ, ಸಾಹಿತ್ಯಗಳಿಗೂ ಅನ್ವಯಿಸುತ್ತದೆ. ಮನುಷ್ಯನಿಗಿರುವ ಸಹಜವಾದ ಕುತೂಹಲವು ಕತೆಯನ್ನು ಮೆಚ್ಚಿಕೊಳ್ಳುವಂತೆ ಮಾಡಿದೆ.

"ಹೊಸಗನ್ನಡದಲ್ಲಿ ಅನೇಕ ಬಗೆಯ ಸಣ್ಣಕತೆಗಳು ಮೂಡಿಬಂದಿವೆ. ದಿನಪತ್ರಿಕೆ ಮತ್ತು ಮಾಸಪತ್ರಿಕೆಗಳಲ್ಲಿ ಸಣ್ಣಕತೆಗಳು ಸ್ಥಾನಪಡೆದುಕೊಂಡಿವೆ".[೧] ಹಿಂದಿನ ಯಾವ ಕಾಲಘಟ್ಟದಲ್ಲಿಯೂ ಈ ಬಗೆಯ ಸಾಹಿತ್ಯ ಸೃಷ್ಟಿ ನಡೆದಿರಲಿಲ್ಲ. ಸರಳ, ನೇರ ನಿರೂಪಣೆಯ ಕತೆಗಳು ಚಿಕ್ಕದಾಗಿ ಚೊಕ್ಕವಾಗಿ ಮೂಡಿಬಂದು ಹೊಸ ಓದುಗ ವರ್ಗ ಈ ಸಂದರ್ಭದಲ್ಲಿ ಸೃಷ್ಟಿಯಾಯಿತು. ಇಲ್ಲಿ ಭ್ರಮೆ, ವಾಸ್ತವಿಕತೆ ಮತ್ತು ಸಹಜತೆ ಹೀಗೆ ಯಾವ ಮಾರ್ಗದಲ್ಲಿ ಬೇಕಾದರೂ ರಚಿಸಬಹುದು. ಅರ್ಥಪೂರ್ಣ ಆರಂಭ ಮತ್ತು ಸಮಂಜಸ ಅಂತ್ಯ ಮುಖ್ಯವೆಂದು ವಿಮರ್ಶಕರು ಅಭಿಪ್ರಾಯಪಡುತ್ತಾರೆ. ಸಣ್ಣಕತೆಯು ಕನ್ನಡ ಸಾಹಿತ್ಯದ ಕೃಷಿಯಲ್ಲಿ ತನ್ನದೇ ಆದಂತಹ ಉನ್ನತ ಸ್ಥಾನವನ್ನು ಹೊಂದಿದೆ. ಕಾವ್ಯ, ಸಂಗೀತ, ನಾಟಕ, ಕಥನಕಾವ್ಯ, ಪ್ರಬಂಧ, ಆತ್ಮಕಥನ, ಕಾದಂಬರಿ, ಲಲಿತಕಲೆ ಇನ್ನೂ ಮೊದಲಾದ ಸಾಹಿತ್ಯ ರೂಪಗಳಂತೆ ಸಣ್ಣಕತೆಯು ಕನ್ನಡ ಸಾಹಿತ್ಯದ ವಿಶಿಷ್ಟ ಪ್ರಕಾರವಾಗಿ ಬೆಳೆದುಬಂದಿವೆ.

ಪ್ರಾಚೀನ ಸಾಹಿತ್ಯದ ಸಣ್ಣಕತೆಗಳಿಗೂ ಹಾಗೂ ಆಧುನಿಕ ಸಾಹಿತ್ಯದ ಸಣ್ಣಕತೆಗಳಿಗೂ ಹೋಲಿಕೆ ಮಾಡಿದಾಗ ವಿವಿಧ ಬಗೆಯ ವ್ಯತ್ಯಾಸಗಳನ್ನು ಗುರುತಿಸಬಹುದು. ಪ್ರಾಚೀನ ಸಾಹಿತ್ಯ ಕಥಾಪ್ರಪಂಚದಲ್ಲಿ ಪಂಚತಂತ್ರ, ವಡ್ಡಾರಾಧನೆ, ಧರ್ಮಾಮೃತ, ಕಾದಂಬರಿ, ರಾಮಾಯಣ, ಮಹಾಭಾರತ ಇನ್ನೂ ಅನೇಕ ಕೃತಿಗಳಲ್ಲಿ ಕಥಾ ಇತಿಹಾಸವನ್ನು ನೋಡಬಹುದಾಗಿದೆ.

ಸಣ್ಣಕಥೆಯು ಆಧುನಿಕ ಕನ್ನಡ ಸಾಹಿತ್ಯದ ಒಂದು ಶ್ರೇಷ್ಟ ಪ್ರಕಾರವಾಗಿದ್ದು ಆಧುನಿಕ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದ ಕಾವ್ಯ, ಕಾದಂಬರಿ, ಕಥನಕಾವ್ಯ, ಸಂಗೀತ ನಾಟಕ, ಪ್ರಬಂಧ, ಆತ್ಮಕಥನ ಇನ್ನೂ ಮೊದಲಾದ ಸಾಹಿತ್ಯ ವಾಹಿನಿಗಳಂತೆ ಸಣ್ಣಕಥೆಯೂ ಕೂಡ ಒಂದು ಹೊಚ್ಚ ಹೊಸ ಸಾಹಿತ್ಯ ಪ್ರಕಾರವಾಗಿದೆ. ಈ ಪರಿಕಲ್ಪನೆಯು ಕನ್ನಡ ಪ್ರಾಚಿನ ಸಾಹಿತ್ಯ ಪರಂಪರೆಯಲ್ಲಿ ಇದ್ದು ಅದು ಆಧುನಿಕ ಕನ್ನಡ ಸಣ್ಣಕಥೆಗಿಂತ ತೀರಾಭಿನ್ನವಾದುದೆಂಬುದು ಗಮನಾರ್ಹ. ಹೀಗಾಗಿ ಈ ಎಳೆಯನ್ನು ನಾವು 'ಐತಿಹಾಸಿಕ' ತಾಯಿ ಬೇರೆಂದು ಗುರುತಿಸಬಹುದಾಗಿದೆ. ಅವುಗಳಲ್ಲಿ 'ವಡ್ಡಾರಾಧನೆ', 'ಪಂಚತಂತ್ರ' 'ಕಾದಂಬರಿ' ಮತ್ತು 'ಧರ್ಮಾಮೃತ' ಹೀಗೆ ಇನ್ನೂ ಮೊದಲಾದ ಕೃತಿಗಳು ಇಲ್ಲಿ ಗಮನಾರ್ಹ. ಆದರೆ ಇವು ಸಂವಹನ ದೃಷ್ಟಿಯಿಂದ

---

೧. ಡಾ. ಡಿ. ಸುಮಂಗಳ, ಆಧುನಿಕ ಮಹಿಳಾ ಸಣ್ಣಕತೆಗಳಲ್ಲಿ ಪ್ರತಿಭಟನೆಯ ವಿನ್ಯಾಸಗಳು, ಪು. ೪೦.

ಗದ್ಯ ಮಾಧ್ಯಮವಾಗಿದ್ದರೂ ಕಾವ್ಯದ ಸೊಗಡಿನಿಂದ ಹೊರ ಬಂದಿಲ್ಲದಿರುವುದು ಗಮನಾರ್ಹ. ಅದಲ್ಲದೆ ಈ ಕಥೆಗಳ ತಾತ್ವಿಕ ನೆಲೆಯು ಧಾರ್ಮಿಕವಾಗಿದ್ದು ಆ ಮೂಲಕ ಅನಾವರಣಗೊಳ್ಳುವ ವಸ್ತು ಪಾತ್ರ, ತಂತ್ರ, ಭಾಷೆ ಆಶಯಗಳು ಆ ಧರ್ಮದ ಮನೋಧರ್ಮಕ್ಕೆ ಒಳಪಟ್ಟವೆಂಬುದು ಗಮನಾರ್ಹ. ಆದುದರಿಂದ 'ಕ್ರಿಯೆ'ಯ ಪರಿಣಾಮವು ಒಂದು ಸೀಮಿತ ಅವಧಿಯಲ್ಲಿ ಮುಗಿಯದೆ ಹಲವು (ವಿಸ್ತೃತ) ತಿರುವುಗಳಲ್ಲಿ "ಏಕಾಗ್ರತೆ" ಪಡೆದುಕೊಳ್ಳುವುದು. ಹಾಗೆಯೇ ಈ ಕಥೆಗಳು ಮಾನವೀಯತೆಯಿಂದ ಕೂಡಿದ್ದರೂ ಮನುಷ್ಯನ ವ್ಯಕ್ತಿತ್ವವನ್ನು ವಿಶಿಷ್ಟವಾಗಿ ಮತ್ತು ಸ್ವತಂತ್ರವಾಗಿ ಅರಳಿಸುವಲ್ಲಿ ಆತನ ಪ್ರತಿಭೆಯನ್ನು ಕಟ್ಟಿಹಾಕುವ "ತಾತ್ವಿಕತೆ"ಯು ಪರಿಮಿತಿಯಿಂದ ಕೂಡಿದ್ದು, ಈ ಚೌಕಟ್ಟಿನ ಹಿನ್ನೆಲೆಯಲ್ಲಿ ಈ ಕಥೆಗಳು ಹೆಚ್ಚು ಮಹತ್ವವನ್ನು ಪಡೆದುಕೊಂಡಿವೆಯೆಂಬುದು ಗಮನಾರ್ಹ.

ಆದ್ದರಿಂದ ಈ ಹಿನ್ನೆಲೆಯಲ್ಲಿ ಹೊರಡುವ ಸ್ವರ್ಗ, ನರಕ, ಕೈಲಾಸ–ವೈಕುಂಠ, ಜೀವ–ಪರಮಾತ್ಮ, ದೇಹ–ಆತ್ಮ, ಪಾಪ–ಪುಣ್ಯ, ಸತ್ಯ–ಅಸತ್ಯ, ನ್ಯಾಯ–ಅನ್ಯಾಯ, ಶೀಲ–ಅಶ್ಲೀಲ, ನೈತಿಕತೆ–ಅನೈತಿಕತೆ, ಹಿಂಸೆ–ಅಹಿಂಸೆ, ಇಹ–ಪರ ಎಂಬಿತ್ಯಾದಿ ತಾತ್ವಿಕ ಪರಿಕಲ್ಪನೆಗಳು ಗಮನಾರ್ಹವಾಗಿದ್ದು ಈ ಸಂವೇದನೆಗಳಿಗೆ ನುಡಿಕೊಡುವ ಭಾಷೆಯು ಕೂಡ ಅಷ್ಟೇ ಸಮರ್ಥತೆಯಿಂದ ಕೂಡಿದುದ್ದಾಗಿದೆ. ಹಾಗೆಯೇ ಇದರೊಂದಿಗೆ ಸಂವಾದಿತವಾಗುವ ಬದುಕಿನ ಸ್ತರವು ಕೂಡ ಸಾಮೂಹಿಕ ಬದುಕಿನ ಸಂದರ್ಭದಲ್ಲಿ ಸಾಂಸ್ಕೃತಿಕ ದೃಷ್ಟಿಯಿಂದ ಮೌಖಿಕವಾಗಿದೆಯೆಂಬುದು ಗಮನಾರ್ಹ. ಹೀಗೆ ಇಂಥ ವಿಭಿನ್ನ ಧೋರಣೆ ನಿಲುವುಗಳನ್ನು ಹೊಂದಿರುವ ಪರಂಪರೆಯ ಪ್ರಾಚೀನ ಕಥೆಯ ಸ್ವರೂಪ ಮತ್ತು ಲಕ್ಷಣವು ಆಧುನಿಕ ಕನ್ನಡ ಸಣ್ಣಕಥೆಗಳಿಗಿಂತ ಹೆಚ್ಚಿನ ಗಮನಾರ್ಹತೆ ಪಡೆದುಕೊಳ್ಳುವುವು. ಹಾಗೆಯೇ ಈ ಪರಂಪರೆಯ ಹಿನ್ನೆಲೆಯಲ್ಲಿ ಮೂಡಿದ "ಆಧುನಿಕ ಸಣ್ಣಕಥೆ"ಯು ಪಶ್ಚಿಮದ "Short Story" ಗೆ ಸಂವಾದಿಯಾಗಿದ್ದು ಆಧುನಿಕ ಬದುಕಿನ ಹತ್ತು ಹಲವು ಸಂಕೀರ್ಣ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಕಲಾತ್ಮಕವಾಗಿ ಒಂದು ಸತ್ವಪೂರ್ಣ ಸಾಹಿತ್ಯವಾಹಿನಿಯಾಗಿ ಗಮನಾರ್ಹತೆ ಪಡೆದುಕೊಂಡಿದೆ.

ಈ ದಿಸೆಯ ಆಧುನಿಕ ಭಾರತೀಯನ ಮನಸ್ಸು ಕೂಡ ಅದುವರೆಗಿನ ಹಿನ್ನೆಲೆಯಲ್ಲಿ ಜಡಗಟ್ಟಿದ ಪರಂಪರೆಯ ಬದುಕಿನ ಚರ್ವಿತಚರ್ವಣ ಗತಿಸ್ಥಿತಿಯನ್ನು ಕಂಡು ಒಂದು ಹೊಸ ಆವಿಷ್ಕಾರದ ಬದುಕಿಗೋಸ್ಕರ ಅದು ಹಾತೊರೆಯುತ್ತಿತ್ತು. ಈ ಅವಧಿಯ ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದಲ್ಲಿ ನಮ್ಮ ಭಾರತವನ್ನು

ಒಂದು ವ್ಯಾಪಾರ ಕೇಂದ್ರವನ್ನಾಗಿ ಮಾಡಿಕೊಳ್ಳಲು ಹರಸಿ ಬಂದ ಬ್ರಿಟಿಷರು, ಫ್ರೆಂಚರು ಮತ್ತು ಡಚ್ಚರಂಥ ಇನ್ನೂ ಮೊದಲಾದ ಯುರೋಪಿನ ರಾಷ್ಟ್ರಗಳು ಮೊದಲು ನಮ್ಮ ವಸಾಹತುಶಾಹಿಗಳಾಗಿ ಭಾರತಕ್ಕೆ ಬಂದು ಕ್ರಮೇಣ ಸಾಮ್ರಾಜ್ಯ ಪ್ರಭುಗಳಾದರು. ಆ ಮೂಲಕ ನಮ್ಮ ಮೇಲೆ ಅವರು ತಂತಮ್ಮ ಸಂಸ್ಕೃತಿ, ಭಾಷೆ, ಧರ್ಮ, ರೂಢಿ-ಸಂಪ್ರದಾಯ, ಆಡಳಿತ, ಶಿಕ್ಷಣ, ಬದುಕಿನ ಆಚಾರ-ವಿಚಾರಗಳು, ವೈಚಾರಿಕತೆ, ವೈಜ್ಞಾನಿಕತೆ ಹೀಗೆ ಇನ್ನೂ ಮೊದಲಾದವನ್ನು ಹೇರುವ ಮೂಲಕ ಪ್ರತಿಯಾಗಿ ನಮ್ಮ ಭಾಷೆ, ಇತಿಹಾಸ ಸಂಸ್ಕೃತಿ, ಧರ್ಮ ಸಾಹಿತ್ಯ, ರೂಢಿ-ಸಂಪ್ರದಾಯ ಆಚಾರ-ವಿಚಾರ ಮೊದಲಾದ ಸಾಂಸ್ಕೃತಿಕ ನಾಡಿಮಿಡಿತಗಳನ್ನು ಸಮರ್ಥವಾಗಿ ಅರಿಯುವ ಮತ್ತು ಕೊಡುಕೊಳ್ಳುವ ಹಿನ್ನೆಲೆಯಲ್ಲಿ ಇಡೀ ನಮ್ಮ ಬದುಕನ್ನು ಪುನರ್‌ಮೌಲ್ಯೀಕರಿಸಿದರು. ಇದರಿಂದ ಸಂವೇದಿತವಾದ ಅಂದಿನ ನಮ್ಮ ಸಮಾಜದಲ್ಲಿ ಒಂದು ಹೊಸ ಜೀವನ ಕ್ರಮ ಸಿದ್ಧವಾಗತೊಡಗಿತು. ಹಾಗೆಯೇ ಇದನ್ನು ನಾವು ಅಂದಿನ ಆಧುನಿಕತೆಯ ತುಡಿತವೆಂದು ಕರೆಯಬಹುದಾಗಿದ್ದು ಈ ನಿಟ್ಟಿನಲ್ಲಿ ಇಡೀ ಹೊಸ ಸಮಾಜವನ್ನು ಕಟ್ಟುವ ವಿಶಿಷ್ಟವಾದ ಹೊಚ್ಚ ಹೊಸ ಪರಿಕಲ್ಪನೆಗಳು ಆವಿರ್ಭವಿಸಿದವು. ಅವುಗಳಲ್ಲಿ ಸಾಹಿತ್ಯಿಕ ಪರಿಕಲ್ಪನೆಯು ಒಂದಾಗಿದ್ದು ಅನುವಾದ, ಭಾಷಾಂತರ, ರೂಪಾಂತರ, ಸುನೀತ, ಸಾನೆಟ್, ಪ್ರಬಂಧ ಹಾಗೂ ನಿಘಂಟು ರಚನೆ, ಶಿಶುಗೀತೆಗಳು, ಭಾವಗೀತೆ, ಪ್ರವಾಸ ಸಾಹಿತ್ಯ, ಕಥನಕಾವ್ಯ ವೈಜ್ಞಾನಿಕ ಬರಹಗಳು, ಪರಂಪರೆಯ ಕೃತಿಗಳನ್ನು ಮರುವ್ಯಾಖ್ಯಾನ, ತೌಲನಿಕ ಸಾಹಿತ್ಯ, ವಿಚಾರ ವಿಮರ್ಶೆ, ಕಾದಂಬರಿ, ನಾಟಕ, ಆತ್ಮಕಥನ ಹೀಗೆ ಇನ್ನೂ ಮೊದಲಾದ ಸಾಹಿತ್ಯದ ಪ್ರಕಾರಗಳು ಸೃಷ್ಟಿಯಾದವು.

ಈ ಹಿನ್ನೆಲೆಯಲ್ಲಿ "ಸಣ್ಣಕಥೆ"ಯ ಪಾತ್ರವು ಹಿರಿದಾಗಿದ್ದು, ಆಧುನಿಕ ಕನ್ನಡ ಸಾಹಿತ್ಯದ ಇನ್ನಿತರ ಪ್ರಕಾರಗಳಂತೆ ಆಧುನಿಕ ಬದುಕಿನ ಸಂಕೀರ್ಣ ಸಮಸ್ಯೆ ಮತ್ತು ಸವಾಲುಗಳನ್ನು ತನ್ನದೇ ಆದಂತಹ ಸ್ವರೂಪದ ಮಿತಿಯಲ್ಲಿ ಬಿಡಿಬಿಡಿಯಾದ ಬಂಧದ ಮೂಲಕ ಪಾತ್ರ, ಘಟನೆ, ಸಂವಿಧಾನ, ಪರಿಣಾಮದ ಪ್ರಧಾನತೆಯ ಹಿನ್ನೆಲೆಯಲ್ಲಿ ಸಂಕ್ಷಿಪ್ತತೆ, ಏಕಾಗ್ರತೆ, ಸೃಜನಾತ್ಮಕತೆ ದೃಷ್ಟಿಯಿಂದ ಒಂದು ಸತ್ವಯುತ ಮಾಧ್ಯಮವಾಗಿ ಗುರುತಿಸಿಕೊಂಡಿತು. ಅಲ್ಲದೆ ಎಲ್ಲಕ್ಕಿಂತ ಹೆಚ್ಚಾಗಿ, ಹೊಸಗನ್ನಡ ಸಾಹಿತ್ಯ ಹುಟ್ಟಿದುದೇ ಸಣ್ಣಕಥೆಗಳಲ್ಲಿ ವಾಸ್ತವಿಕವಾದ ಜೀವನ ಚಿತ್ರಣ ಮತ್ತು ಸರಳ ಸುಂದರ ಗದ್ಯಶೈಲಿ ಸಣ್ಣಕಥೆಯಲ್ಲಿ ಮೊದಲು ಸಾಧಿತವಾದುವು. ಬಹುಕಾಲ ಉತ್ತಮ ಗದ್ಯ ಸಾಹಿತ್ಯವೆಂದರೆ ಸಣ್ಣಕಥೆಯೇ ಎನ್ನಬೇಕಿತ್ತು. ಬಳಿಕ ಈ ಸ್ಥಾನವನ್ನು ಕಾವ್ಯ, ಕಾದಂಬರಿ, ನಾಟಕ ಮೊದಲಾದ ಸೃಜನಶೀಲ ಬರಹಗಳು ಹೆಚ್ಚು ಆಕ್ರಮಿಸಿಕೊಂಡವು.

"ಸಣ್ಣಕಥೆ"ಯು ಭಾವಗೀತೆಯಂತೆ ಮೂರ್ತಿ ಚಿಕ್ಕದಾದರೂ ಅದರ ಕೀರ್ತಿ ದೊಡ್ಡದು".[೧] ಏಕೆಂದರೆ ಸೂಕ್ಷ್ಮ ಸಾಹಿತ್ಯ ರೂಪದಲ್ಲಿ ಪ್ರಯೋಗ ನಾವೀನ್ಯಕ್ಕೆ ಹೆಚ್ಚಿನ ಆಸ್ಪದ. ಅನುಕೂಲವಿದ್ದು, 'ಕಾಲ ಕಾಲಕ್ಕೆ ಜೀವನವೂ, ಜ್ಞಾನವೂ, ಮನೋಧರ್ಮವೂ, ಧರ್ಮವೂ ಬದಲಾವಣೆ ಪಡೆದುಕೊಂಡಂತೆ ಕಥನಕಲೆಯೂ ಶೈಲಿಯು ಬದಲಾಯಿಸುತ್ತವೆ ಎಂಬ ಮಾತು ಪ್ರಾಚೀನ ಆಧುನಿಕ ಕಥಾಪರಂಪರೆಯು ಹಿನ್ನೆಲೆಯಲ್ಲಿ ತುಂಬ ಮಹತ್ವದ್ದು.

ಅಲ್ಲದೇ ಕಾದಂಬರಿ ಪ್ರಕಾರವನ್ನೇ ಬಲುಮಟ್ಟಿಗೆ ಹೋಲುವ ಕಾದಂಬರಿಯಂತೆ ಸಣ್ಣಕಥೆಯೂ ವಿಶಾಲವಾದ, ಉದಾರವಾದ, ವಾಸ್ತವ ಮತ್ತು ಅದರಾಚೆಗಿನ ಪ್ರಪಂಚವನ್ನೆಲ್ಲ ತನ್ನ ತೆಕ್ಕೆಗೆ ತಂದುಕೊಳ್ಳುವ ಒಂದು ಪ್ರಮುಖ ಪ್ರಕಾರವಾಗಿದ್ದು 'ಸಣ್ಣಕಥೆ' ಎಂಬ ಪರಿಭಾಷೆಯ ಫಲಿತವಾದದ್ದು ಎಂಬುದು ನಿದರ್ಶಿತ. ಹಾಗೆಯೇ 'ಕಥೆಯ ಬಗ್ಗೆ ಮನುಷ್ಯನಿಗಿರುವ ಜನ್ಮಜಾತವಾದ ಕುತೂಹಲವು ಅಲ್ಲದೆ ಸಣ್ಣಕಥೆ, ಭಾವಗೀತೆಯೊಡನೆ ಹೊಸದಾಗಿ ಬಂದ ಸಾಹಿತ್ಯ ಪ್ರಕಾರವಾಗಿರುವುದೂ ಇದಕ್ಕೆ ಕಾರಣವಾಗಿದೆ" ಅಲ್ಲದೇ ಕನ್ನಡದಲ್ಲಿ ಕಾದಂಬರಿಯ ತರುವಾಯ ಸಣ್ಣಕಥೆಯೇ ಅತ್ಯಂತ ಲೋಕಪ್ರಿಯ ಸಾಹಿತ್ಯ ಮಾಧ್ಯಮವಾಗಿ ಗಮನಾರ್ಹತೆ ಪಡೆದುಕೊಂಡಿತು.

ಇಲ್ಲಿ "ಕಾದಂಬರಿಯನ್ನು ಒಂದು ಮೇಜರ್ ಸಾಹಿತ್ಯವೆಂದು ಹೆಸರಿಸಿ ಸಣ್ಣಕಥೆಯನ್ನು ಒಂದು ಮೈನರ್ ಸಾಹಿತ್ಯ ಪ್ರಕಾರ"[೨]ವೆಂದು ವಿದ್ವಾಂಸರು ಗುರುತಿಸಿದ್ದಾರೆ. ಆದರೆ ಈ ಮಾತನ್ನು ಒಪ್ಪಲು ಕಷ್ಟ. ಇದಕ್ಕೆ ಅಪವಾದವಾಗಿ ನಿಲ್ಲುವ ಮಾಸ್ತಿ ಅವರ ಸಣ್ಣಕಥೆಯ ಸೃಷ್ಟಿಗೆ ಒಂದು ಗಟ್ಟಿಯಾದ ಸ್ಥಾನಮಾನವನ್ನು ತಂದುಕೊಡುವ ಮೂಲಕ ಒಬ್ಬ ಪ್ರಮುಖ ಗದ್ಯ ಬರಹಗಾರರಾಗಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ತುಂಬ ಮಹತ್ವದ ಸ್ಥಾನವನ್ನು ಪಡೆದುಕೊಂಡಿದ್ದರೆಂಬುದನ್ನು ನಿದರ್ಶಿಸಬಹುದು. ಹಾಗಾಗಿ ಕೆಲವರು ಕಾವ್ಯಗಳನ್ನು ಬರೆದು ದೊಡ್ಡ ಕವಿಗಳಾಗಿ ಗುರುತಿಸಿಕೊಂಡಂತೆ ಸಣ್ಣಕಥೆಯ ವಿಷಯದಲ್ಲೂ ಅಂಥ ಮಾತನ್ನು ಧೈರ್ಯವಾಗಿ ಹೇಳಬಹುದು. ಏಕೆಂದರೆ ಮಾಸ್ತಿ ಅವರ ಅನಂತರ ಅನಕೃ, ನಿರಂಜನ, ಚದುರಂಗ, ಯಶವಂತ ಚಿತ್ತಾಲ, ವ್ಯಾಸರಾಯ ಬಲ್ಲಾಳ, ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್, ತೇಜಸ್ವಿ ದೇವನೂರು, ಮಹಾದೇವ, ಕುಂ.ವೀರಭದ್ರಪ್ಪ, ಅಬ್ದುಲ್ ರಶೀದ್, ಬೆಸಗರಹಳ್ಳಿ

---

೧. ಆಧುನಿಕ ಸಣ್ಣಕಥೆಗಳು, ಮುಕ್ತ ವಿಶ್ವವಿದ್ಯಾನಿಲಯ, ಪು. ೬.
೨. ಅದೇ.,

ರಾಮಣ್ಣ, ಕಾಳೇಗೌಡ ನಾಗವಾರ, ವೈದೇಹಿ, ಸಾರಾ ಅಬೂಬಕರ್ ಹೀಗೆ ಇನ್ನು ಮೊದಲಾದ ಶ್ರೇಷ್ಠ ಕಥೆಗಾರರು ಇಲ್ಲಿ ಗಮನಾರ್ಹರು.

ಕನ್ನಡ ಕಥಾಪರಂಪರೆಯ ಹಿನ್ನೆಲೆಯಲ್ಲಿ ಪಶ್ಚಿಮದ Short Storyಗೆ ಸಂವಾದಿಯಾಗಿ ಮೂಡಿದ ಈ ಆಧುನಿಕ "ಸಣ್ಣಕಥೆ"ಯು ಶ್ರೇಷ್ಠ ಪ್ರಕಾರವಾಗಿದ್ದು ವಾಸ್ತವತೆ, ಕಲಾತ್ಮಕತೆ, ಸೂಕ್ಷ್ಮತೆ, ಮೊನಚು ಭಾಷೆ, ಅನುಭವದ ಅನನ್ಯತೆ, ಸಂಕ್ಷಿಪ್ತತೆ, ತೀವ್ರಪರಿಣಾಮ, ಗುರಿಯ ಏಕಾಗ್ರತೆ, ಅಲ್ಪಸಂಭಾಷಣೆ ಪಾತ್ರದ ಒಂದು ಮುಖವಾಗಿ ಹಾಗೂ ಐಕ್ಯತತ್ವ, ಒಂದು ಭಾವನೆಯ ಒಂದೇ ಸಲಕ್ಕೆ ಓದು ಮುಗಿಸಬಹುದಾದ ವಿಭಿನ್ನ ಸಂಸ್ಕೃತಿಯ ಮುಖಾ-ಮುಖಿ ಸಂಘರ್ಷಾತ್ಮಕವಾದ ವಿಭಿನ್ನ ತಾತ್ವಿಕ ಸಂವೇದನೆಗಳ ಹಿನ್ನೆಲೆಯಲ್ಲಿ ಮೂಡಿದ ಪ್ರಕಾರವಾಗಿದೆ. ಹಾಗೆಯೇ ಇದು ಪರಂಪರೆಯ ಕಥನ ಪರಂಪರೆಯನ್ನು ಅರಗಿಸಿಕೊಂಡು ಕಥನಶೈಲಿಗಿಂತ ಭಿನ್ನವಾದ ಹೊಸ ಪ್ರಕಾರವಾಗಿ ಭಾರತದಲ್ಲಿ ಪ್ರವೇಶ ಕಥಾಸಾಹಿತ್ಯವು ೧೮ನೇ ಶತಮಾನದಲ್ಲಿ ಆಗಿನ ಪತ್ರಿಕೋದ್ಯಮದ ಬೆಳವಣಿಗೆ ಪೂರಕ ಅಂಶವಾಯಿತು.

ಇದನ್ನು ಕುರಿತು " 'ಬ್ರೂಕ್ಸ್ ಮತ್ತು ವಾರನ್' ಎಂಬ ಪಾಶ್ಚಾತ್ಯ ವಿದ್ವಾಂಸರು ಸಣ್ಣಕಥೆಯು "ಕೆಡಕಿನ ಶೋಧ"ವೆಂದು ಅದರಲ್ಲಿ ಒಂದು ವಿಶಿಷ್ಟಗುಣವನ್ನು ಗುರುತಿಸುವ ಮೂಲಕ "ದಿಗ್ಭ್ರಮೆಯಲ್ಲಿ ಏನನ್ನೋ ಅಮೂಲ್ಯವಾದುದನ್ನು ಕಳೆದುಕೊಂಡು ನೋವಿನಲ್ಲಿ ಬೇಡವಾದ ಇನ್ನೇನನ್ನೋ ಪಡೆದುಕೊಂಡ ವಿಷಾದದಲ್ಲಿ ಕೊನೆಗೊಳ್ಳುವುದು ಕುತೂಹಲಕಾರಿಯಾದುದೆಂದು"[೧] ಸಣ್ಣಕಥೆಯ ಸ್ವರೂಪದ ಮೇಲೆ ಬೆಳಕನ್ನು ಚೆಲ್ಲುವನು.

ಮೂರ್ತಿ ಚಿಕ್ಕದಾದರೂ ಸಾಧನೆ ದೊಡ್ಡದು ಈ ದಿಸೆಯಲ್ಲಿ ಸಣ್ಣಕತೆ ಚಿಕ್ಕದಾಗಿ ಕಂಡರೂ ಅದರಲ್ಲಿರುವ ವಾಸ್ತವಿಕ ಸತ್ಯ, ಬದುಕಿನ ಶೈಲಿ, ನಂಬಿಕೆ ಮೂಢನಂಬಿಕೆ, ಧರ್ಮ, ಮನೋಧರ್ಮ ಆಡಂಬರದ ಜೀವನ ಏಕಾಂತತೆ ತಂತ್ರಗಳು ಬದುಕಿನ ಶೈಲಿಯನ್ನು ಬದಲಾಯಿಸುವ ದಿಸೆಯಲ್ಲಿ ಸಣ್ಣಕತೆ ಅಮೂಲಾಗ್ರವಾಗಿ ನಿಲ್ಲುತ್ತದೆ.

ಬರ್ಗೋಂಡೆ ಎಂಬ ಪಶ್ಚಿಮದ ಮತ್ತೊಬ್ಬ ಪ್ರಸಿದ್ದ ವಿದ್ವಾಂಸರು "ಸಣ್ಣಕಥೆಗೆ ಶಿಷ್ಟವೆಂದು ಪ್ರಸಿದ್ಧಿ ಪಡೆದಿರುವ "ಆಕಸ್ಮಿಕ" ತಿರುವಿನ ಅಥವಾ "ಅನಿರೀಕ್ಷಿತ"[೨] ಮುಕ್ತಾಯವನ್ನು ನೋಡಬಹುದು. ಇದು ತನ್ನೆಲ್ಲ ವಿವರಗಳ ಮೂಲಕ ಒಂದು ನಿರ್ದಿಷ್ಟ ನಿರೀಕ್ಷತೆಯನ್ನು ಬೆಳೆಸುತ್ತ ಹೋಗಿ ಕೊನೆಗೆ ಅನಿರೀಕ್ಷತೆಗೆ ಆಘಾತಕೊಟ್ಟು,

೧. ಆಧುನಿಕ ಸಣ್ಣಕಥೆಗಳು, ಮುಕ್ತ ವಿಶ್ವವಿದ್ಯಾನಿಲಯ, ಪು. ೬.
೨. ಅದೇ.,

ನಿರೀಕ್ಷೆಗೆ ವಿರುದ್ಧವಾದ ಸ್ಥಿತಿಯಲ್ಲಿ ಮುಕ್ತಾಯವನ್ನು ಕಂಡುಕೊಳ್ಳುವುದು. ಆದರೆ ಕಲಾತ್ಮಕವಾಗಿ ಇದು ಕೇವಲ ಚಮತ್ಕಾರದ ಬೆಳೆವಣಿಗೆಯಲ್ಲ. ಇಂಥ ಕಥೆ ಒಂದು ನಿರೀಕ್ಷೆಯನ್ನು ಹುಟ್ಟಿಸುತ್ತಾ ಹೋಗುವಾಗಲೇ ಅದಕ್ಕೆ ವಿರುದ್ಧವಾದ ತಿರುವಿಗೆ ಅಗತ್ಯವಾದ ಅಂಶಗಳನ್ನು ಗುಪ್ತವಾಗಿ, ಸೂಕ್ಷ್ಮವಾಗಿ ಒಳಗೊಂಡಿರುತ್ತದೆ. ಅಂತೆಯೇ ತಿರುವು ಆಶ್ಚರ್ಯಕರವೆನಿಸಿದರೂ ಅಸಹಜವೆನಿಸುವುದಿಲ್ಲ. ಸಣ್ಣಕತೆಯ ನಾಡಿಮಿಡಿತವನ್ನು ಹಿಡಿದು ಹೇಳಿದ ಮಹತ್ವದ ಮಾತುಗಳು ಇವಾಗಿವೆ.

ನಂತರ 'ಮಾರ್ಕ್ಸ್‌ಕೋರರ್' ಎಂಬ ಪಶ್ಚಿಮದ ಮತ್ತೊಬ್ಬ ಮಹತ್ವದ ವಿದ್ವಾಂಸನು ಸಣ್ಣಕತೆಯನ್ನು ಕುರಿತು ಅದು "ನೈತಿಕ ಸಾಕ್ಷಾತ್ಕಾರದ ಕಲೆ, ಅದನ್ನು ಮಿಂಚಿನಂತೆ ಒಂದು ಅನಿಸಿಕೆಯನ್ನಾಗಿ ಮೂಡಿಸುವ ಮೂಲಕ ಸಂಕ್ಷಿಪ್ತತೆಯ ದೃಷ್ಟಿಯಿಂದ ಸಣ್ಣಕಥೆಯ ಜೀವನದರ್ಶನದ ಸ್ವರೂಪವನ್ನು ನಿರ್ಧರಿಸುತ್ತದೆ"[೧] ಎಂದು ಅದರ ಒಂದು ಮಹತ್ವದ ಮುಖವನ್ನು ಒತ್ತಿ ತಿಳಿಸಿದ್ದಾನೆ.

ಹೀಗೆ ಪಾಶ್ಚಿಮಾತ್ಯದ ಮತ್ತೊಬ್ಬ ಶ್ರೇಷ್ಠ ವಿದ್ವಾಂಸ "ಒ.ಕಾನರ್'ನು ತನ್ನ 'ಒಂಟಿ ದನಿ' ಕೃತಿಯಲ್ಲಿ "ಸಣ್ಣಕಥೆ ಜನಾಂಗದಿಂದ ಜನಸಮೂಹದಿಂದ ದೂರವಾದದ್ದು ಅದರ ಪರಾಮರ್ಶೆಯ ಚೌಕಟ್ಟು ಸಮಗ್ರ ಮಾನವ ಜೀವನವಾಗಲಾಗದು. ಮೀಮಾಂಸೆಯ ದೃಷ್ಟಿಯಿಂದ ಇಲ್ಲಿನ ನಾಯಕ ಯಾವ ಪ್ರಕಾರದ ನಾಯಕನಿಗೂ ಸೇರುವಂತವನಲ್ಲ. ಮುಳುಗಿ ಹೋದ ಜನರ ಗುಂಪಿನ ಪ್ರತಿನಿಧಿಯಷ್ಟೆ. ಹಾಗೆಯೇ ಇಲ್ಲಿನ ಪಾತ್ರಗಳು ಬದುಕಿನ ಬಲಿಪಶುಗಳು, ಅವಮಾನಿತರು, ನೊಂದವರು, ಹತಾಶರು ಮತ್ತು ಅನಾಥರು"[೨] ಎಂದು ಉಲ್ಲೇಖಿಸುವುದು ಗಮನಾರ್ಹ.

ಒಟ್ಟಿನಲ್ಲಿ ಸಣ್ಣಕಥೆಯ ಸ್ವರೂಪವನ್ನು ನಿಶ್ಚಿತವಾಗಿ ಹಿಡಿದಿರುವುದು ಇಲ್ಲಿ ಸಾಧ್ಯವಿಲ್ಲವಾದರೂ ಸಣ್ಣಕಥೆ ಭಾವಗೀತೆಯಂತೆ ಸಂಕ್ಷಿಪ್ತ, ಭಾವದೀಪ್ತಿ, ವಿವರಗಳ ನಿರ್ದಿಷ್ಟತೆ ಸಾಧನಗಳ ಮಿತವ್ಯಯ ಪರಿಣಾಮದ ಏಕಾಗ್ರತೆ, ಹೊಳೆಯುವ ನೀರಿನ ಹನಿಯಲ್ಲಿ ಸೂರ್ಯನ ಕಲ್ಪನೆ ಮೂಡಿಸುವ ಪ್ರತಿಬಿಂಬ, ಸೂಕ್ಷ್ಮತೆ, ತೀವ್ರಾಕರ್ಷಣೆ, ವಾಸ್ತವತೆ, ಮಿದುಭಾಷೆ, ಸರಳ ಸುಂದರ ಶೈಲಿ ಹಿನ್ನೆಲೆಯಲ್ಲಿ ಮೂಡಿದ ಸಣ್ಣಕಥೆಯ ಸ್ವರೂಪವು ಒಂದು ಸತ್ವಯುತ ಮತ್ತು ಮಹತ್ವದ ಪ್ರಕಾರವಾಗಿ ಗಮನಾರ್ಹತೆ ಪಡೆದುಕೊಂಡಿದೆ.

---

೧. ಆಧುನಿಕ ಸಣ್ಣಕಥೆಗಳು, ಮುಕ್ತ ವಿಶ್ವವಿದ್ಯಾನಿಲಯ, ಪು. ೬.
೨. ಅದೇ.,

"ಚಿಕ್ಕ ಘಟನೆಯನ್ನು ಒಳಗೊಂಡ ಸಣ್ಣಕತೆಗಳಿಂದ ಅಂದಂದಿನ ಸಾಮಾಜಿಕ, ಭೌಗೋಳಿಕ, ಮನುಷ್ಯನ ಆಂತರಿಕ ಭಾವನೆಗಳು ಮಾನವೀಯ ಮೌಲ್ಯಗಳನ್ನು ಅಭಿವ್ಯಕ್ತಿಸುತ್ತವೆ. ಸಮಸ್ಯೆಗಳ ವಿವರಗಳ ಜೊತೆಜೊತೆಗೆ ನಿವಾರಣೋಪಾಯಗಳನ್ನು ಕತೆಗಾರರು ಪ್ರಕಟಿಸಿರುತ್ತಾರೆ. ಎಲ್ಲರೂ ಅನುಸರಿಸಬಹುದಾದ ಸರಳ ಕಥಾ ಸಂವಿಧಾನಗಳು ಮೊದಲ ತಲೆಮಾರಿನ ಲೇಖಕರಲ್ಲಿ ಬಳಕೆಯಾಗಿವೆ. ಅನಕೃರವರ ಅಭಿಪ್ರಾಯದಲ್ಲಿ ಕಥನಕಲೆ ಇಷ್ಟು ಪ್ರಸಿದ್ಧಿಯಾಗಲು ಕಾರಣ ಹೇಳದೆ ಧರ್ಮವ ಕಲಿಸುವ ಗುರುತ್ವ' ಅವರ ಪ್ರಕಾರ "ಕಥೆಯಿಲ್ಲದ ಕಾವ್ಯ ಕಣ್ಣಿಲ್ಲದ ಮನುಷ್ಯನಿದ್ದಂತೆ"[೧] ಮಾಸ್ತಿಯಿಂದ ಹೆಚ್ಚು ಪ್ರಚಾರಕ್ಕೆ ಬಂದ ಸಣ್ಣಕತೆಗಳು ಇಂದಿನವರೆಗೂ ಅಡೆತಡೆ ಇಲ್ಲದೆ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿವೆ. ಅನಂತರ ಸಣ್ಣಕತೆಗಳ ಆಕರ್ಷಣೆಗೆ ಲೇಖಕಿಯರು ಆಕರ್ಷಿತರಾಗಿ ವಿಫುಲವಾಗಿ ಕತೆಗಳನ್ನು ರಚಿಸತೊಡಗಿ ಕನ್ನಡ ಸಾಹಿತ್ಯವನ್ನು ಸಮೃದ್ಧಿಗೊಳಿಸಿದ್ದಾರೆ.

ತುಂಬಾ ಸರಳ, ನೇರ, ನಿರೂಪಣೆಯ ಪರಿಮಿತ ಬಂಧದ ಕತೆಗಳು ಲೇಖಕಿಯರಿಗೆ ಆಕರ್ಷಣೀಯವಾಗಿ ಕಂಡು, ಕಥಾ ಬರವಣಿಗೆಗೆ ಮಹಿಳೆಯರು ಮುಂದಾಗಿರುವುದನ್ನು ಗಮನಿಸಬಹುದು.

ಇಟಲಿಯ ಬೋಕ್ಯಾಚಿಯೋ ಬರೆದ 'ಡೆಕಾಮರಾನ್' ಕತೆಗಳು ಸರಳಶೈಲಿಯ ಹೃದಯಂಗಮ ಕೃತಿಗಳು. ಹದಿನಾರನೆಯ ಶತಮಾನದಲ್ಲಿ ಭಾಷಾಂತರಗೊಂಡು ಷೇಕ್ಸ್‌ಪಿಯರ್ ಮತ್ತು ಇತರರಿಗೆ ಮೂಲವಸ್ತುಗಳನ್ನು ಒದಗಿಸಿತು. ಪೇಂಟರ್‌ನ "ಪ್ಯಾಲೇಸ್ ಆಫ್ ಪ್ಲೆಷರ್ಸ್" ಇಂಥ ಸಣ್ಣಕಥೆಗಳ ಸಂಗ್ರಹ.

ಕಥೆಗಳನ್ನು ಅಧ್ಯಯನ ಮಾಡಿದಾಗ ಪ್ರತಿಯೊಬ್ಬ ಬರಹಗಾರನ ಭಾಷಾಶೈಲಿ, ಯೋಚನಾಲಹರಿ, ಅನನ್ಯ. ವಿಶಿಷ್ಟವಾಗಿ ಗೋಚರಿಸುತ್ತದೆ. ಶ್ರೀ ಕ್ಯಾತನಹಳ್ಳಿ ರಾಮಣ್ಣನವರ ಕತೆಗಳಲ್ಲಿ ಹೊಸತನ ಗ್ರಾಮೀಣ ಜನರ ಜೀವನ ಶೈಲಿ, ಭಾಷಾಶೈಲಿ ತುಂಬ ದಟ್ಟವಾಗಿ ಕಂಡುಬಂದಿದೆ.

ಹಳ್ಳಿಗಾಡಿನ ಮುಗ್ಧ ಜನರ ನೈಜ ಬದುಕಿನ ಸುತ್ತ ಇರುವಂತಹ ಅನೇಕ ಸೂಕ್ಷ್ಮಾನು ಸೂಕ್ಷ್ಮಸಮಸ್ಯೆಗಳನ್ನು ಕತೆಗಾರರು ಗಮನಿಸಿದ್ದಾರೆ. ವಯಸ್ಸಿಗೆ ಬಂದ ಒಬ್ಬ ಹಳ್ಳಿ ಮುಗ್ಧ ಹುಡುಗನ ಮನಸ್ಸಿನಲ್ಲಿ ನಡೆಯುವ ತೊಳಲಾಟ, ಮುಖವಾಡ ಧರಿಸಿದ

---

೧. ಡಾ. ಡಿ. ಸುಮಂಗಳ, ಆಧುನಿಕ ಸಣ್ಣಕತೆಗಳ ಮಹಿಳಾ ಪ್ರತಿಭಟನಾ ವಿನ್ಯಾಸಗಳು, ಪು. ೫೦.

ಜೀವನ ನಡೆಸುವ ಅವನನ್ನು ಪ್ರಯೋಗಿಸಿ ಅವನ ಸಮಸ್ಯೆಯನ್ನು ತಿಳಿದು ಮನಸ್ಸಿನಲ್ಲಿ ಹೊಕ್ಕಿ ಹೆಕ್ಕಿ ತೆಗೆಯುವ ಪ್ರಯತ್ನವನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಅನಿರೀಕ್ಷಿತ ಆಘಾತಗಳಿಂದುಂಟಾಗುವ ಅನಾಹುತಗಳನ್ನು ಅದರಿಂದ ಆಗುವ ತೊಂದರೆಗಳು ಹೀಗೆ ಮನುಷ್ಯನ ಸುತ್ತ ಮುತ್ತಲಿನ ಅನೇಕ ಸೂಕ್ಷ್ಮ ಸಮಸ್ಯೆಗಳು ತಿಳಿದು ಅದರಿಂದ ಅವರು ಹೊರಬರುವ ಬಗ್ಗೆ ತುಂಬ ಆಶ್ಚರ್ಯಕರವಾಗಿದೆ. ಇವರ ಒಂದೊಂದು ಕಥೆಯು ಹೆಚ್ಚಿನ ಆಸಕ್ತಿಯನ್ನು ಮೂಡಿಸುತ್ತದೆ. ಮೊದಲಿನಿಂದಲೂ ನನಗೆ ಸಣ್ಣಕತೆಗಳು ಎಂದರೆ ಬಹಳ ಅಚ್ಚುಮೆಚ್ಚು. ಅದರಿಂದ ಏಕಾಗ್ರತೆಯು ಸಿಗುತ್ತದೆ. ಅದನ್ನು ಅಭ್ಯಸಿಸಲು ಎಲ್ಲಿಲ್ಲದ ಆಸಕ್ತಿ. ಆದಕಾರಣ ನಾನು, ಶ್ರೀ ಕ್ಯಾತನಹಳ್ಳಿ ರಾಮಣ್ಣನವರ ಕಥೆಗಳನ್ನು ಎಂ.ಫಿಲ್. ಪದವಿಯ ನಿಬಂಧ ರಚನೆಗಾಗಿ ಆಯ್ದುಕೊಂಡಿದ್ದೇನೆ.

ಅಧ್ಯಾಯ – ೨

ಸಣ್ಣಕಥೆಗಳ ಉಗಮ ಮತ್ತು ಬೆಳವಣಿಗೆ

ಸಣ್ಣ ಕಥೆಯು ಆಧುನಿಕ ಕನ್ನಡ ಸಾಹಿತ್ಯ ಪರಂಪರೆಯ ಪ್ರಮುಖ ಪ್ರಕಾರಗಳಲ್ಲೊಂದಾಗಿದೆ. ಕಾವ್ಯ, ಕಾದಂಬರಿ, ನಾಟಕ, ಪ್ರಬಂಧ, ಆತ್ಮಕಥನ, ವಿಚಾರ–ವಿಮರ್ಶೆ ಇನ್ನು ಮೊದಲಾದ ಪ್ರಮುಖ ಸಾಹಿತ್ಯ ಪ್ರಕಾರಗಳಿಗಿಂತ ಕಥೆಯು ವಿಭಿನ್ನವಾಗಿ ನಿಂತುಕೊಳ್ಳುವ ಒಂದು ಜನಪ್ರಿಯ ಮಾಧ್ಯಮವೆಂಬುದು ಗಮನಾರ್ಹ. ಇದನ್ನು ಮೊತ್ತಮೊದಲು "ಬ್ರಹ್ಮಾಂಡ ಸೃಷ್ಟಿಯ ಹಿನ್ನೆಲೆಯಲ್ಲಿ ಮಾತು ಕಲಿತ ಮನುಷ್ಯ ತನ್ನ ಮಾತಿನೊಂದಿಗೆ ದೇವರು ಧರ್ಮ, ದೇವ–ದಾನವರು, ಯಕ್ಷ–ಯಕ್ಷಿಯರು, ರಾಜ–ರಾಣಿಯರು, ಅತಿಮಾನುಷ, ಮನುಷ್ಯ, ಪ್ರಾಣಿ–ಸಸ್ಯ, ಸಂಕುಲ ಹೀಗೆ ಇನ್ನು ಮೊದಲಾದ ನೇತ್ಯಾತ್ಮಕ ಆಸಕ್ತಿ, ಕೇಳುವವನ ಕುತೂಹಲದೊಂದಿಗೆ ಕತೆ ಜೀವ ಪಡೆದುಕೊಂಡಿದೆ".[೧] ಅಂದರೆ ಜನಪದರು ಮೊತ್ತಮೊದಲು ತಾವು ತಮ್ಮ ನಾಲಿಗೆಯ ಮೇಲೆ ಕಥೆಯನ್ನು ಸೃಷ್ಟಿಸಿ, ಕುಣಿಸತೊಡಗಿದಂದಿನಿಂದಲೂ ಭಾಷೆಯ ಜತೆಗೆ ಕಥೆಯು ಅಭಿವೃದ್ಧಿಯಾಯಿತು.

ಕನ್ನಡದ ರಾಮಾಯಣ, ಮಹಾಭಾರತ, ಇತ್ತೀಚಿನದಲ್ಲ. ವಸ್ತು, ಪಾತ್ರ, ಭಾಷೆ, ಸಂವಿಧಾನ ಆಶಯಗಳ ದೃಷ್ಟಿಯಿಂದ ಹೊಸದಾದರೂ ಸುದೀರ್ಘ ಇತಿಹಾಸವಿದೆ. ಈ ಹಿನ್ನೆಲೆಯಲ್ಲಿ ಬೆಳಕಿಗೆ ಬಂದ " 'ಪಂಚತಂತ್ರ', 'ಕಾದಂಬರಿ', 'ಧರ್ಮಾಮೃತ', 'ಸಮಯ ಪರೀಕ್ಷೆ' ಹಾಗೂ 'ಬುದ್ಧನ ಜಾತಕ ಕಥೆ', 'ಪಂಚವಿಂಶತಿ ಕಥೆ'ಗಳಂಥ ಉತ್ತಮ ಕೃತಿರತ್ನಗಳು ಕಥಾಸಾಹಿತ್ಯ ಇತಿಹಾಸದ ಮೈಲಿಗಲ್ಲುಗಳು".[೨] ಕತೆಗಳ ಮೂಲಕ ಧರ್ಮಪ್ರಚಾರದ ಕಾರ್ಯಗಳನ್ನು ಬೌದ್ಧ, ಜೈನ, ಕ್ರೈಸ್ತಮಿಷಿನರಿಗಳು ಅಳವಡಿಸಿಕೊಂಡವು. ಶಿವಕೋಟ್ಯಾಚಾರ್ಯನ 'ವಡ್ಡಾರಾಧನೆ' ಕೃತಿಯು ಗದ್ಯ ಸಾಹಿತ್ಯವಾಗಿದ್ದರೂ ಆಂತರಿಕ ರಚನೆ, ಸ್ವರೂಪ ಕಥಾಶೈಲಿಯುಳ್ಳದ್ದು. ಒಂದರ ಒಳಗೆ ಮತ್ತೊಂದು, ಮಗದೊಂದು ಕತೆಗಳು, ಭವಾವಳಿಯ ಸಂದರ್ಭದಲ್ಲಿ ಮೂಡಿಬಂದಿವೆ.

ಒಂಬತ್ತನೆಯ ಶತಮಾನದಿಂದ ಹತ್ತೊಂಬತ್ತನೆಯ ಶತಮಾನದವರೆಗೂ ಸಮೃದ್ಧವಾಗಿ ಬೆಳಗಿದ ಮಹಾಕಾವ್ಯ ಪರಂಪರೆಯ ಹಿನ್ನೆಲೆಯಲ್ಲಿ "ವಿಕ್ರಮಾರ್ಜುನ

---

೧. ಆಧುನಿಕ ಸಣ್ಣಕಥೆಗಳು, ಮುಕ್ತ ವಿಶ್ವವಿದ್ಯಾನಿಲಯ, ಪು. ೩.
೨. ಅದೇ, ಪು. ೪.

ವಿಜಯ", 'ಸಾಹಸಭೀಮವಿಜಯ', 'ರಾಮಚಂದ್ರ ಚರಿತಪುರಾಣ' ಹಾಗೂ 'ಕರ್ನಾಟಕ ಕಾದಂಬರಿ', 'ಹರಿಶ್ಚಂದ್ರಕಾವ್ಯ' 'ಜೈಮಿನಿ ಭಾರತ', 'ಶ್ರೀರಾಮಶ್ವಮೇಧ'ಗಳಂಥ"[೧] ಇನ್ನು ಮೊದಲಾದ ಶ್ರೇಷ್ಠ ಕೃತಿಗಳ ಮನೋಧರ್ಮವು ಕೊಡುವ "ಕಥನ" ಪರಂಪರೆಯ ಪ್ರಧಾನಧಾರೆಯೇ ಆಗಿದ್ದು ಇದು ಗುಣಾತ್ಮಕ ಮತ್ತು ಅನುಷಂಗಿಕ ದೃಷ್ಟಿಯಿಂದ 'ಕಥೆ'ಯು ಇಲ್ಲಿ ತುಂಬಾ ಮಹತ್ವ ಸ್ಥಾನವನ್ನು ಪಡೆದುಕೊಂಡಿದೆ.

ಕಥಾಸಾಹಿತ್ಯದ ಬೆಳವಣಿಗೆ ಕುರಿತಂತೆ ಒಂಬತ್ತರಿಂದ ಇಪ್ಪತ್ತನೆಯ ಶತಮಾನದವರೆಗೆ ಬೆಳಗಿದ ಕನ್ನಡ ಕಥಾಸಾಹಿತ್ಯ ಪರಂಪರೆಯನ್ನು ನಾವು ನಾಲ್ಕು ವಿಧವಾಗಿ ಗುರುತಿಸಬಹುದು. ಅವುಗಳಲ್ಲಿ " 'ವಡ್ಡಾರಾಧನೆ', 'ಕರ್ನಾಟಕ ಕಾದಂಬರಿ', 'ಪಂಚತಂತ್ರ' ಮತ್ತು 'ಧರ್ಮಾಮೃತ' ಮೊದಲಾದ ಕೃತಿಗಳು. ಎರಡನೆಯ ಹಂತದಲ್ಲಿ 'ವಿಕ್ರಮಾರ್ಜುನ ವಿಜಯ' 'ಸಾಹಸ ಭೀಮ ವಿಜಯ', 'ರಾಮಚಂದ್ರಚರಿತ ಪುರಾಣ' ಹಾಗೂ 'ಹರಿಶ್ಚಂದ್ರಕಾವ್ಯ' "[೨] ಮೊದಲಾದವು. ಮೂರನೆ ಹಂತ ಹತ್ತೊಂಬತ್ತನೆಯ ಶತಮಾನದ ಆದಿಭಾಗವಾಗಿದ್ದು ಕಥೆಯು ಕಾವ್ಯದ ಪ್ರಧಾನ ನೆಲೆಯಿಂದ ಬಿಡಿಸಿಕೊಂಡು ಗದ್ಯಕ್ಕೆ ಹೊರಳುವ ಸಂಕ್ರಮಣಯುಗವೆಂದು ಹೇಳಬಹುದು. ನಂತರದಲ್ಲಿ ಬಂದ 'ಆಧುನಿಕ ಕನ್ನಡ ಸಣ್ಣಕಥೆ'ಯು ನಾಲ್ಕನೆಯ ಹಂತವಾಗಿ ಪಶ್ಚಿಮದ Short Storyಯ ಸಂವಾದಿಯಾಗಿ ಹುಟ್ಟಿಕೊಂಡಿದ್ದಾಗಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಾದಂಬರಿಯ ತರುವಾಯ ಸಣ್ಣಕಥೆಯೇ ಅತ್ಯಂತ ಲೋಕಪ್ರಿಯವಾದ ಸಾಹಿತ್ಯವಾಹಿನಿ ಆಗಿದ್ದು, ಕಾದಂಬರಿಯಂತೆ ಸಣ್ಣಕಥೆಯೂ ವಿಶಾಲವಾದ, ಉದಾರವಾದ, ವಾಸ್ತವತೆ ಮತ್ತು ಅದರಾಚೆಗಿನ ಪ್ರಪಂಚವನ್ನೆಲ್ಲ ತನ್ನ ತೆಕ್ಕೆಗೆ ತಂದುಕೊಳ್ಳುವ ಪರಿಮಿತ ದೀರ್ಘತೆಯ ಗದ್ಯನಿರೂಪಣೆ ಆಗಿದೆ. ಆದರೆ "ಕಥೆ"ಯು ಕಾದಂಬರಿಗೆ ಪ್ರತಿಸ್ಪರ್ಧಿಯಾಗಲಿ, ಪ್ರತಿನಿಧಿಯಾಗಲಿ ಅಲ್ಲದ, ಕಾದಂಬರಿ ಜತೆಯಲ್ಲಿ ಬೆಳೆದು ಸಾಹಿತ್ಯದಲ್ಲೀಗ ಮಾನ್ಯವೂ, ಮುಖ್ಯವೂ ಆದ ಸ್ಥಾನವನ್ನು ಪಡೆದುಕೊಂಡಿದೆ.

ಸಣ್ಣಕಥೆ, ಕಾದಂಬರಿ ಪ್ರಕಾರವನ್ನೇ ಬಲುಮಟ್ಟಿಗೆ ಹೋಲುವುದಾದರೂ ಅದೊಂದು ವಿಶಿಷ್ಟ ಪ್ರಕಾರವಾಗಿ ಮೂಡಿದ್ದು ಪಾಶ್ಚಾತ್ಯ ಪ್ರಭಾವದಿಂದ, ಆದರೆ

---

೧. ಕನ್ನಡ ಸಣ್ಣಕಥೆಗಳು (ಸಂ.), ಜಿ.ಎಚ್. ನಾಯಕ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಪು. ೩–೪.

೨. ಅನಕೃ, ಸಾಹಿತ್ಯ ಮತ್ತು ಜೀವನ, ಶಾರದ ಪ್ರಕಟನಾಲಯ, ೧೯೬೧, ಪು. ೮೮.

[illegible]

ಗದ್ಯಕಥೆಯ ರೂಪ ಕನ್ನಡ ಸಾಹಿತ್ಯಕ್ಕೆ ಪೂರ್ತಿ ಹೊಸದೇನೂ ಅಲ್ಲ. 'ಶಿವಕೋಟ್ಯಾಚಾರ್ಯರ ವಡ್ಡಾರಾಧನೆ' (೧೦ನೇ ಶತಮಾನ) ಕನ್ನಡದ ಅತ್ಯಂತ ಪ್ರಾಚೀನ ಗದ್ಯಕಥೆಗಳ ಸಂಕಲನವಾಗಿದ್ದು ತರುವಾಯ ಬಂದ ದುರ್ಗಸಿಂಹನ "ಪಂಚತಂತ್ರ' (೧೧ನೇ ಶತಮಾನ) ನಯಸೇನನ ಧರ್ಮಾಮೃತ (೧೨ನೇ ಶತಮಾನ) ಮೊದಲಾದ ಶ್ರೇಷ್ಠ ಪರಂಪರೆಯ ಹಿನ್ನೆಲೆಯಲ್ಲಿ ಆಧುನಿಕ ಸಂವೇದನೆಯಿಂದ ರೂಪಿತವಾದ ಆಧುನಿಕ ಕನ್ನಡ ಸಣ್ಣಕಥೆಯು ಈ ಗದ್ಯಕಥೆಗಳಿಗಿಂತ ವಸ್ತು ಮತ್ತು ತಂತ್ರಗಳೆರಡರಲ್ಲೂ ಮೂಲಭೂತವಾಗಿ ಭಿನ್ನವಾಗಿದೆ.

ಆಧುನಿಕ ಕಾಲದ ಪ್ರಾರಂಭದಲ್ಲಿ ಸಣ್ಣಕಥೆಗಳನ್ನು ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆಗಳು ಪ್ರಕಟಿಸುವ ಮೂಲಕ ಪ್ರೋತ್ಸಾಹಿಸಿದರು. 'ಜಯಕರ್ನಾಟಕ' 'ಶ್ರೀಕೃಷ್ಣ ಸೂಕ್ತಿ' ೧೯ನೇ ಶತಮಾನದ ಆದಿಭಾಗದ ಪತ್ರಿಕೆಗಳ ಮೂಲಕ ಪ್ರಕಟವಾಯಿತು.

ಸಣ್ಣಕಥೆಗಳ ಲಕ್ಷಣಗಳನ್ನು ಹೇಳುವುದಾದರೆ

- ಯಾವುದೇ ವೈವಿಧ್ಯಪೂರ್ಣ ಅನುಭವಗಳಿಂದ ಸಾಣಿಸಿ ತೆಗೆದುಕೊಂಡು ವಸ್ತುಗಳು ಕತೆಗೆ ಕಾರಣವಾಗುತ್ತದೆ.
- ವಸ್ತುವಿನ ಆಯ್ಕೆ ಸಂಕ್ಷಿಪ್ತತೆಯಿಂದ ಕೂಡಿದ್ದು, ಹಾಗೆ ಅದು ತೀವ್ರ ಪರಿಣಾಮದಿಂದ ಬದುಕನ್ನು ಕಲುಕುವಂತಿರಬೇಕು.
- ಸಣ್ಣಕಥೆಯ "ವಸ್ತು" ಕಥಾಪರಿಮಿತಿಯೊಳಗೆ ಸಮರ್ಪಕವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲು ಪಡೆದು ಕಥೆಗಾರ ಶ್ರಮಿಸುತ್ತಾನೆ.
- ಗುರಿಯ ಏಕಾಗ್ರತೆ ಮತ್ತು ಪರಿಣಾಮದ ಏಕಾಗ್ರತೆ ಸಾಧಿತಗುಣ ಹೊಂದಿದ್ದು, ವಸ್ತು, ಘಟನೆ, ಚಿಕ್ಕ ಚೊಕ್ಕವಾಗಿರುತ್ತದೆ.
- ಕಥೆಯಲ್ಲಿ ಸಂಭಾಷಣೆ ಇರಬಹುದು, ಇಲ್ಲದಿರಬಹುದು. ಅದು ವರ್ಣನೆಗೂ ಕೂಡ ಅನ್ವಯಿಸುತ್ತದೆ.
- 'ಸಂಕ್ಷಿಪ್ತತೆ' ಕಥನಜಾತಿಯ ಸ್ಪಷ್ಟಗುಣ ಮತ್ತು ಕೆಲವು ನಿಶ್ಚಿತವಾದ ಜೀವನ ಗುಣಗಳ ಬೆಳವಣಿಗೆಯಾಗಿರುತ್ತದೆ.
- 'ಸೂಕ್ಷ್ಮ ಕಲಾತ್ಮಕತೆ' ಸಣ್ಣಕಥೆಯ ಮುಖ್ಯ ಲಕ್ಷಣವಾಗಿದ್ದು, ಕತೆಗಾರನ ಕೌಶಲ್ಯದಿಂದ ಅದು ಪ್ರಭಾವಯುಕ್ತವಾಗಿ ಅಭಿವ್ಯಕ್ತಗೊಳ್ಳುತ್ತದೆ.

- ಒಂದು ನೆನಪು, ಒಂದು ಅನುಭವ, ಒಂದು ಮನೋಧರ್ಮದ ಆವಿಷ್ಕಾರ, ಸಂಕ್ಷಿಪ್ತತೆಯಲ್ಲಿ ಸರ್ವಶಕ್ತಿಯ ಗುಣವನ್ನು ಹೊಂದಿರುತ್ತದೆ.
- ಆಡಿದ ಒಂದು ಮಾತಿನಲ್ಲಿ ನಡೆದ ಒಂದು ಘಟನೆಯಲ್ಲಿ ಅಡಗಿರುವ ಗಂಭೀರತೆ, ಬೃಹತ್ ಕಾದಂಬರಿಯಲ್ಲಿ ಹೇಳಲಾಗದಿದ್ದದನ್ನು ಒಂದು ಪುಟದಲ್ಲಿ ಹೇಳುವ ಯತ್ನ ಸಣ್ಣಕಥೆಯ ಲಕ್ಷಣವಾಗಿದೆ.
- ಧ್ವನಿ-ಪ್ರತಿಮೆ ಮತ್ತು ಸಂಕೇತಗಳ ಮೂಲಕ ಅನುಭವಕ್ಕೆ ಮಾತಿನ ಶರೀರ ತೊಡಿಸಿ, ತನ್ನ ಸೀಮಿತ ಬರವಣಿಗೆಯ ಚೌಕಟ್ಟಿನಲ್ಲಿ ತೀವ್ರ ಪರಿಣಾಮದಿಂದ ಕೆಲಸವನ್ನು ಕತೆಗಾರ ಮಾಡಬಹುದಾಗಿದೆ.
- ಸಣ್ಣಕಥೆಯಲ್ಲಿನ ಬಹುಪಾಲು ಪಾತ್ರಗಳು ಬದುಕಿನ ಬಲಿಪಶುಗಳು, ಅವಮಾನಿತರು, ನೊಂದವರು, ಹತಾಷರು ಮತ್ತು ಅನಾಥರಾಗಿದ್ದು ಆರೋಗ್ಯದ ಜೀವನೋತ್ಸಾಹ ಬದುಕನ್ನು ಗೆಲ್ಲುವ ಛಲದ ಪಾತ್ರಗಳಾಗಿರುತ್ತವೆ.
- ಕತೆಗಳು ಚಿಕ್ಕ ಘಟನೆ, ಅನುಭವಗಳನ್ನು ಸಂಕ್ಷಿಪ್ತವಾಗಿ ಕಟ್ಟಿಕೊಡುವುದರಿಂದ, ಓದುಗನ ಕ್ಷಿಪ್ರ ಓದುವಿಕೆ ಇದರಿಂದ ಸಾಧ್ಯವಾಗಿ ಕತೆಗಳು ಬೇಗ ಜನಪ್ರಿಯಗೊಳ್ಳಲು ಕಾರಣವಾಯಿತು.
- ವ್ಯಂಗ್ಯ, ಧ್ವನಿ, ಕಲಾತ್ಮಕತೆ, ಆಕರ್ಷಣೆ, ವಿನೋದ, ಮಾನವೀಯತೆ ಇನ್ನು ಮುಂತಾದ ಪ್ರಮುಖ ಗುಣಗಳನ್ನು ಹೊಂದಿರುವುವು.
- ಸಣ್ಣಕತೆಗಳ ಪಾತ್ರಗಳು ಸಾಮಾನ್ಯವಾಗಿ ಶೋಷಿತ ವರ್ಗದವರು, ಮಹಿಳೆಯರು, ಅನಾಥರು, ಅನಾರೋಗ್ಯದವರು ಜೀವನದಲ್ಲಿ ಜುಗುಪ್ಸೆ ಹೊಂದಿರುವವರು, ಬದುಕಿನಲ್ಲಿ ಗುರಿಯೆಡೆಗೆ ನಡೆದು ವಿಜಯಶಾಲಿಗಳಾಗುವ ಪಾತ್ರಗಳಾಗಿರುತ್ತವೆ.
- ಸಣ್ಣ ಕಥೆ ಎಂಬುದನ್ನು ಎಲ್ಲರೂ ಓದಿ ಅರ್ಥೈಸಿಕೊಳ್ಳಬಹುದಾದ ಸುಲಭವಾದ ಗದ್ಯರೂಪ.
- ಭಾಷೆ ಅತಿಸೂಕ್ಷ್ಮತೆ ಮತ್ತು ವಿಶ್ವಾಸವನ್ನುಂಟು ಮಾಡುವಂತಹ ಬರವಣಿಗೆ ಶೈಲಿಗಳು

"ಬೈಬಲ್, ಕುರಾನ್, ಉಪನಿಷತ್ತುಗಳಲ್ಲಿ ಕತೆಯ ಉಪಯೋಗ ಕಂಡು ಬಂದಿರುವುದಲ್ಲದೆ, ಪರ್ಷಿಯಾ, ಅರೇಬಿಯಾ ದೇಶಗಳ ಸೂಫಿ, ತತ್ವಜ್ಞರು ಕತೆಯ ಮೂಲಕವೇ ತಮ್ಮ ವಿಚಾರಗಳನ್ನು ಪ್ರತಿಪಾದಿಸುವ ಪರಿಪಾಠವನ್ನಿಟ್ಟುಕೊಂಡಿದ್ದರು"[೧]

- ಕತೆಗಳಲ್ಲಿ ವ್ಯಂಗ್ಯ, ಧ್ವನಿ, ಕಲಾತ್ಮಕತೆ, ಆಕರ್ಷಣೆ, ವಿನೋದ, ಮಾನವೀಯತೆ ಇನ್ನು ಮೊದಲಾದ ಪ್ರಮುಖ ಗುಣಗಳನ್ನು ಕಾಣಬಹುದು.
- ಒಂದು ಪುಟ್ಟ ಘಟನೆಯ ಸುತ್ತ ಹೆಣೆದ ಕಥೆಯಲ್ಲಿ ವಿಶ್ವಪ್ರಜ್ಞೆಯನ್ನು ಮೂಡಿಸುವ ಸಂವೇದನೆಯನ್ನು ಕಾಣುತ್ತೇವೆ.
- ಕಥೆಯಲ್ಲಿ ಭಾಷೆ ಪ್ರಮುಖವಾಗಿದ್ದು ವಸ್ತು, ತಂತ್ರ, ಪಾತ್ರ ಆಶಯಕ್ಕೆ ಒಂದು ಅರ್ಥಪೂರ್ಣತೆಯನ್ನು ಒದಗಿಸುವ ಶರೀರ ಮಾಧ್ಯಮವಾಗಿರುತ್ತದೆ.
- ಸಣ್ಣಕಥೆ ಒಂದೇ ಸಲಕ್ಕೆ ಸುಲಭವಾಗಿ ಓದಿ ಮುಗಿಸಬಹುದಾಗಿದೆ.
- ಕಥೆಯಲ್ಲಿ ಸಂವಿಧಾನ ಪ್ರಧಾನವಾದ, ಪಾತ್ರ ಪ್ರಧಾನವಾದ ಮತ್ತು ಪರಿಣಾಮ ಪ್ರಧಾನವಾದ ಕಥೆಗಳೆಂದು ವಿಂಗಡಿಸಿ ಕಥೆಯ ವಿಧಾನಗಳಾಗಿಯೂ ಗಮನಿಸಬಹುದು.
- ಸಣ್ಣಕಥೆಯು ಕಾದಂಬರಿ, ನಾಟಕ, ಭಾವಗೀತೆ ಇನ್ನು ಮೊದಲಾದ ಸಾಹಿತ್ಯ ಪ್ರಕಾರಗಳ ಕೆಲವು ಅಂಶಗಳನ್ನು ತನ್ನ ಒಡಲೊಳಗೇ ಅಂತರ್ಗತ ಮಾಡಿಕೊಂಡು ಸಂಕ್ಷಿಪ್ತತೆಯ ಲಕ್ಷಣವನ್ನು ಹೊಂದಿರುತ್ತದೆ.

ಒಟ್ಟಿನಲ್ಲಿ ಸಣ್ಣಕಥೆಯು ವಿವಿಧ ಲಕ್ಷಣಗಳನ್ನು ಹೊಂದಿದ್ದು ಕಾಲಕಾಲಕ್ಕನುಗುಣವಾಗಿ ತನ್ನದೇ ಆದ ಲಕ್ಷಣ, ಸ್ವರೂಪವನ್ನು ಪಡೆದುಕೊಳ್ಳುತ್ತಾ ನಿರಂತರ ಸ್ಥಿತ್ಯಂತರ ಹೊಂದುತ್ತಲೇ ಇದೆ. ಹಾಗೆಯೇ ಇದು ಆರೋಗ್ಯಕರ ಸಮಾಜದ ಪ್ರಮುಖ ಲಕ್ಷಣವಾಗಿ ಕೂಡ ಗಮನಿಸಬಹುದು.

ಬಂಡಾಯದ ಚಳುವಳಿ ಕಾವ್ಯಪ್ರಧಾನವೆಂಬಂತೆ ಕಂಡರೂ ಕತೆ ಕಾದಂಬರಿಗಳು ಹೊಸ ಸತ್ವದಿಂದ ಬಂದವು. ಶಿಕ್ಷಣ ಪಡೆದ ಗ್ರಾಮೀಣ ಲೇಖಕರು ಕತೆ-ಕಾದಂಬರಿಗಳನ್ನು ಪ್ರಕಟಿಸಿದರು. ದೇವನೂರು ಮಹಾದೇವ, ಕಾಳೇಗೌಡ ನಾಗವಾರ, ಬೆಸಗರಹಳ್ಳಿ ರಾಮಣ್ಣ, ಬರಗೂರು ರಾಮಚಂದ್ರಪ್ಪ, ತೇಜಸ್ವಿ ನವ್ಯದ ತಾತ್ವಿಕ ಬಿಕ್ಕಟ್ಟನ್ನು ಪರಿಹರಿಸಲು ಬಂಡಾಯದ ಧ್ವನಿ ಎತ್ತಿದ್ದರು.

---

೧. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಚಿ.ಸಿ. ನಿಂಗಣ್ಣ, ಪು. ೮೫.

ಸಣ್ಣಕಥೆಯು ಬರಹಗಾರನ ವ್ಯಕ್ತಿತ್ವ, ಭಾಷೆಯ ಪರಿಪಾಕ, ನಾಡಿನ ಸಂಸ್ಕೃತಿ ಆಯಾಕಾಲದ ಮನೋಧರ್ಮ ಇವುಗಳ ಹಿನ್ನೆಲೆಯಲ್ಲಿ ಅದರ ಸ್ವರೂಪ ಲಕ್ಷಣಗಳು ಬದಲಾಗುತ್ತ ಹೋಗುತ್ತವೆ. ಆಧುನಿಕ ಕಾಲದಲ್ಲಿ ಪಾಶ್ಚಾತ್ಯದಿಂದ ಪ್ರೇರಣೆ ಪಡೆದು ಕನ್ನಡದಲ್ಲಿ ಬೇರೊಂದು ಮೈಯನ್ನು ಪಡೆದುಕೊಂಡು ಸಾಹಿತ್ಯರಂಗ ಪ್ರವೇಶಿಸಿದ 'ಸಣ್ಣಕಥೆ'ಯು ಕುರಿತು ಪಾಶ್ಚಾತ್ಯ ಹಾಗೂ ಪೌರ್ವಾತ್ಯ ವಿದ್ವಾಂಸರಿಬ್ಬರೂ ಚಿಂತನೆ ಮಾಡುತ್ತ ಬಂದಿದ್ದಾರೆ. ಅದರ ಸ್ವರೂಪ ಲಕ್ಷಣ ಕುರಿತಂತೆ ಅವರ ಅಭಿಪ್ರಾಯಗಳು ಹೀಗಿವೆ.

೧. **ಎಸ್.ವಿ. ರಂಗಣ್ಣನವರ** ಪ್ರಕಾರ "ಸಣ್ಣಕಥೆಯೆಂಬುದು ಸ್ವಾಭಾವಿಕವಾಗಿ ಇಚ್ಛೆಬಂದಂತೆ, ಲವಲವಿಕೆಯಿಂದ ನಡೆದಾಡುತ್ತಿರುವ ಸಾಹಿತ್ಯ, ವಿಶೇಷ ನಿರ್ದಿಷ್ಟ ನಿಯಮಗಳ ಹಂಗೆ ಅದಕ್ಕಿಲ್ಲ. ಅವರೇ ಮುಂದುವರೆದು ಸಣ್ಣಕಥೆಯು ಕರೆದೊಯ್ಯುವ ಚಾಕಚಕ್ಯತೆಯನ್ನು ಹೊಂದಿರಬೇಕು. ಭಾವನೆಗಳನ್ನು ಬಡೆದೆಬ್ಬಿಸಬೇಕು. ವಿಚಾರಕ್ಕೆ ತೊಡಗಿಸುವವರ ಜೊತೆಗೆ ಆನಂದವನ್ನು ನೀಡುವ ಸಾಮರ್ಥ್ಯವನ್ನು ಪಡೆದಿರಬೇಕು" ಎಂದಿದ್ದಾರೆ.

೨. **ನಿರಂಜನರವರ** ಪ್ರಕಾರ "ಕಥಾಲೇಖನದಲ್ಲಿ ವಸ್ತುವಿಗೆ ಮಹತ್ವ, ವಸ್ತುಕಥೆಯ ಉಸಿರು ಅದು ಬದುಕಿನ ಒಂದು ಭಾಗವಾಗಿರಬೇಕು. ಅಂದರೆ ಸಾರ್ವತ್ರೀಕರಣ ಹೊಂದಿ ಕಾಲಾಂತರದಲ್ಲಿಯೂ ನಿಲ್ಲಬಲ್ಲದು"[೧] ಎಂದು ಹೇಳುತ್ತಾರೆ.

೩. **ಡಾ. ದೇ. ಜವರೇಗೌಡ** ಇವರ ಪ್ರಕಾರ (ವಿಶ್ರಾಂತ ಕುಲಪತಿಗಳು) "ಪ್ರಕಾರ ೧೧ಸಣ್ಣಕಥೆಯಲ್ಲಿ ವಿಷಯಕ್ಕಿಂತ, ವಿಷಯ ನಿರೂಪಣೆ ವಸ್ತುವಿಗಿಂತ ವಸ್ತುವಿನ ರಚನೆ, ಕಥೆಗಿಂತ, ಕಥಾತಂತ್ರ ವಿವರಣೆಗಿಂತ ಸಂಕ್ಷಿಪ್ತತೆ ಮುಖ್ಯ. ಅದೊಂದು ರಸಬಿಂದು ಪುಷ್ಪಿಮಾತ್ರ. ಆರಂಭ ಸೌಂದರ್ಯ, ಪರಿಣಾಮ ರಮಣೀಯತೆ, ಹಿತಮಿತಿ ಸಾಧನೆ ಅದರ ಗುರಿ ಮತ್ತು ಜೀವಾಳ. ಕಥೆಯ ಬಾಹ್ಯಗಾತ್ರ ಚಿಕ್ಕದಾಗಿರಬೇಕು. ಆಂತರಿಕ ಸಂವೇದನೆ ರಸಗಟ್ಟಿಯಾಗಿರಬೇಕು".[೨] ಕಿರಿದರಲ್ಲಿ ಹಿರಿದನ್ನು ಕಾಣಿಸುವ ಗುಣವಿರಬೇಕು.

---

೧. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಬಿ.ಸಿ.ನಿಂಗಣ್ಣ, ಪು. ೨೧ರಿಂದ ೨೩.
೨. ಅದೇ.,

೪. **ಎಡ್ಗರ್ ಆಲನ್‌ಪ್ಲೋ** (ಅಮೇರಿಕದ ಸಣ್ಣಕಥೆಗಳ ಜನಕ) ಇವರ ಅಭಿಪ್ರಾಯದಂತೆ ಸಣ್ಣಕಥೆ ಎಂದರೆ "ಅರ್ಧತಾಸಿನಿಂದ ಒಂದು ಅಥವಾ ಎರಡು ತಾಸುಗಳಲ್ಲಿ ಓದಿ ಮುಗಿಸಬಹುದಾದ ಗದ್ಯಾತ್ಮಕ ಕಥಾನಕ".[೧] ಈ ಹೇಳಿಕೆ ಕಥೆಯ ಬಾಹ್ಯ ಚೌಕಟ್ಟನ್ನು ಕುರಿತು ಮಾತ್ರ ಹೇಳುವಂತಿದೆ.

೫. **ಸಾಮರ್‌ಸೆಟ್ ಮಾಮ**ರವರು "ಕೂತ ಮಟ್ಟಿನಲ್ಲಿ ಓದಿ ಮುಗಿಸಬಹುದಾದ ಏಕೈಕ ಕಲಾ ಪರಿಣಾಮವುಳ್ಳ ಲಲಿತ ಸಾಹಿತ್ಯವೇ ಸಣ್ಣಕತೆ"[೨] ಎಂದಿದ್ದಾರೆ.

೬. **ಚಿಕಾವ್ (ಖ್ಯಾತ ರಷ್ಯಾನ ಕಥೆಗಾರ)** ಇವರ ಪ್ರಕಾರ "ಕಥೆಯು ಚಿಕ್ಕದಿರಬೇಕು. ಪಾತ್ರಗಳು ಕಡಿಮೆ ಇರಬೇಕು. ತೂಕಬದ್ಧ ಬರವಣಿಗೆ ಅವಶ್ಯ ಅನಪೇಕ್ಷಿತ ಶಬ್ದಗಳ ಬಳಕೆಯಾಗಕೂಡದು".[೩] ಒಂದು ಸ್ಪಷ್ಟವಾದ ಐಕ್ಯವಿರಬೇಕು. ಅದು ಕಾಲೈಕ್ಯ ಸ್ಥಳೈಕ್ಯ ಕ್ರಿಯೈಕ್ಯವಿರಬೇಕು.

೭. **ಮ್ಯಾಥೂಸ್** ಅವರ ಪ್ರಕಾರ ಕತೆಗಳಲ್ಲಿ "ಕೆಲವೇ ಪಾತ್ರ ಒಂದೇ ಘಟನೆ, ಒಂದೇ ಭಾವನೆ ಅಥವಾ ಒಂದೇ ಪ್ರಸಂಗದಿಂದ ಅನೇಕ ಭಾವನೆಗಳ ಕುರಿತು ಹೇಳಲ್ಪಟ್ಟಿರುತ್ತದೆ".

೮. **ಎ.ಎಸ್.ಕೋಲಿನ್ಸ್‌**ರವರ ಪ್ರಕಾರ "ಮಾನವನ ಬದುಕಿನಿಂದ ಮಹತ್ವದ ಘಟನೆಗಳನ್ನು ಆರಿಸಿಕೊಂಡು ಅವುಗಳಿಗೆ ಯೋಗ್ಯವಾದ ವಾತಾವರಣ ಸೃಷ್ಟಿಮಾಡಿ ಸಂವೇದನಾತ್ಮಕವಾಗಿ, ಮಿತವ್ಯಯವಾಗಿ ಹೇಳುವುದೇ ಸಣ್ಣಕಥೆ".

೯. **ಎಚ್.ಜಿ.ವೇಲ್ಸ್‌**ರವರ ಪ್ರಕಾರ "ಯಾವುದೇ ಒಂದು ಕಠಿಣ ಪ್ರಸಂಗವಾಗಲಿ ಭಯಾನಕವಾದ ಘಟನೆಯಾಗಲಿ ತೆಗೆದುಕೊಂಡು ಅದನ್ನು ಸುಂದರವಾಗಿ, ರಸವತ್ತಾಗಿ ಹದಿನೈದರಿಂದ ಐವತ್ತು ನಿಮಿಷಗಳಲ್ಲಿ ಓದಿ ಮುಗಿಸುವಂತೆ ಇರಬೇಕು". ಅದೇ ಕಥೆ ಎನ್ನುತ್ತಾನೆ.

೧೦. **ಜಾನ್ ಫಾಸ್ಟರ್** ಇವರ ಪ್ರಕಾರ ಕಥೆ ಎಂಬುದು "ಹಲವಾರು ಪ್ರಸಂಗಗಳ ಮತ್ತು ಸಂಬಂಧಗಳ ಕೊಂಡಿಯಾಗಿ ಬರುವ ಸಮಗ್ರ ಬರಹಅದು ಮುಕ್ತಾಯದಲ್ಲಿ ಓದುಗರನ್ನು ಮೈಮರೆಸುವಂತಿರಬೇಕು. ಬಿದಿಗೆಯ ಚಂದ್ರನ ಹಾಗೆ ಬೆಳೆಯುತ್ತಿರುವ ಕಥೆಯ ಲಕ್ಷಣಗಳನ್ನು ಹೇಳುವುದು ಪ್ರಯಾಸವೇ

---

೧. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಜಿ.ಸಿ.ನಿಂಗಣ್ಣ, ಪು. ೨೧ರಿಂದ ೨೩.
೨. ಅದೇ.,
೩. ಅದೇ.,

ಸರಿ". ಮೇಲಿನ ಈ ಎಲ್ಲ ವಿದ್ವಾಂಸರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಈ ಕೆಲವೊಂದು ಸ್ವರೂಪ ಲಕ್ಷಣಗಳನ್ನು ಗುರ್ತಿಸಬಹುದು.

- ಸಂಕ್ಷಿಪ್ತತೆ ಸಣ್ಣಕಥೆಯ ಜೀವಾಳ.
- ವಾಸ್ತವತೆ ಅದರ ಪರಮಗುರಿ.
- ಅದು ಕಲಾತ್ಮಕತೆಯನ್ನು ಮೈಗೂಡಿಸಿಕೊಂಡಿರಬೇಕು.
- ಪಾತ್ರಗಳು ಕಡಿಮೆಯಿರಬೇಕು.
- ಕಾಲೈಕ್ಯ, ಕ್ರಿಯೈಕ್ಯ, ಪರಿಣಾಮಮೈಕ್ಯಗಳನ್ನು ಒಳಗೊಂಡಿರಬೇಕು.
- ಸಣ್ಣಪುಟ್ಟ ಘಟನೆಗಳು ಕತೆಗಳಿಗೆ ವಸ್ತುಗಳಾಗಬಲ್ಲವು.
- ಕಥೆಯ ತಂತ್ರ ಕೊನೆಯವರೆಗೂ ಒಂದೇಯಾಗಿರಬೇಕು.
- ಕಥೆಯಲ್ಲಿ ಉಪಕಥೆ, ಪ್ರಸಂಗದಲ್ಲಿ ಉಪಪ್ರಸಂಗಗಳನ್ನು ಬೆರೆಸಿ ಓದುಗನನ್ನು ಗೊಂದಲದಲ್ಲಿ ಮುಳುಗಿಸಬಾರದು.
- ಪಾತ್ರಗಳ ಸಂಬಂಧ ನೇರವಾಗಿದ್ದರೆ ಹೆಚ್ಚು ಅರ್ಥವತ್ತಾಗಿರುತ್ತದೆ.
- ಕಥೆಯ ಉದ್ದಕ್ಕೂ ಒಂದೇ ಭಾಷೆ ಬಳಕೆಗೊಂಡಿರಬೇಕು.

ಹೀಗೆ ಪಾಶ್ಚಿಮಾತ್ಯ ಮತ್ತು ಪಾಶ್ಚಾತ್ಯ ವಿದ್ವಾಂಸರು ಕಥೆಯ ಲಕ್ಷಣವನ್ನು ಕುರಿತು ಹೇಳಲು ಪ್ರಯತ್ನಿಸಿದ್ದರೂ ಅದು "ಕುರುಡರು ಮುಟ್ಟಿದ ಆನೆಯೆಂಬ ಲೆಕ್ಕಕ್ಕೆ ಬಂದಂತಾಯಿತು".[೧]

ಕಥೆಯು ಜನಪದರಲ್ಲಿ ಮೊದಲು ಜನ್ಮ ತಳೆದು ಸಾವಿರಾರು ವರ್ಷಗಳ ಬಳಿಕ ಅಕ್ಷರದಲ್ಲಿ ಮೂಡಿತು. ಈ ಕಥೆಗಳಿಗೆ ಸುದೀರ್ಘ ಇತಿಹಾಸವಿರುವುದನ್ನು ಸಾಹಿತ್ಯ ಚರಿತ್ರೆಕಾರರು ಗುರ್ತಿಸಿದ್ದಾರೆ. ಇಂಗ್ಲೆಂಡಿನ ಸಣ್ಣಕಥೆ ಏಳನೆ ಅಥವಾ ಎಂಟನೆಯ ಶತಮಾನದಲ್ಲಿ ಆರಂಭವಾದರೂ ಸರಿಯಾಗಿ ಅದು ಹದಿನೇಳನೆಯ ಶತಮಾನದಲ್ಲಿ ಕಾಲೂರಿತೆಂದು ವಿದ್ವಾಂಸರ ಅಭಿಪ್ರಾಯ. ಈ ಹಿನ್ನೆಲೆಯಲ್ಲಿ ಪ್ರಕಟವಾದ 'ಪ್ಯಾಲೇಸ್ ಆಫ್ ಪ್ಲೆಜರ್' ಅನೇಕ ಕಥೆಗಳ ಆಗರವಾಗಿದೆ. ಅಮೇರಿಕಾದ ಸಾಹಿತ್ಯದಲ್ಲಿ ಹದಿನೇಳು-ಹದಿನೆಂಟನೆಯ ಶತಮಾನದಲ್ಲಿ ಕಥೆ ಸೃಷ್ಟಿಯಾದರೂ ಅಲ್ಲಿ "ಎಡ್ಗರ್

---

೧. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಚಿ.ಸಿ.ನಿಂಗಣ್ಣ, ಪು. ೨೧ರಿಂದ ೨೨.

ಅಲೆನ್ ಪೋಮೆತು ಹಾಥ್ನಾರ್‌ರಂಥ"[೧] ಪ್ರಮುಖರಿಂದ ಸಣ್ಣಕಥೆಯು ಹೆಚ್ಚು ಜನಪ್ರಿಯತೆ ಪಡೆದುಕೊಂಡಿತು. ಫ್ರೆಂಚ್ ಸಾಹಿತ್ಯದಲ್ಲಿ ಸಣ್ಣಕಥೆಯು ಹತ್ತೊಂಬತ್ತನೆಯ ಶತಮಾನದಲ್ಲಿ ಆರಂಭವಾಯಿತು. ಅದು ರಷ್ಯಾದಲ್ಲಿ ಹದಿನೆಂಟನೆಯ ಶತಮಾನದಲ್ಲಿ ಪ್ರಾರಂಭವಾದರೂ ಅದೊಂದು ಗಟ್ಟಿ ಪ್ರಕಾರವಾಗಿ ಹತ್ತೊಂಬತ್ತನೆಯ ಶತಮಾನದಲ್ಲಿ ರೂಪಿತವಾಯಿತೆಂದು ವಿದ್ವಾಂಸರ ಅಭಿಪ್ರಾಯ.

ರಷ್ಯಾ ಸಾಹಿತ್ಯದಲ್ಲಿ ಸಾಹಿತ್ಯದ ಆಚಾರ್ಯನೆಂದು ಕರೆಯುವ "ಗೋಗೆಲ್ ಕಥೆಗಳು ಬೀರಿದ ಪರಿಣಾಮದಿಂದಾಗಿ ಒಂದು ದೊಡ್ಡ ಪರಂಪರೆಯನ್ನು ಹುಟ್ಟುಹಾಕುವ ಮೂಲಕ ಅನೇಕ ಮಹತ್ವದ ಕಥೆಗಾರರು ರಷ್ಯನ್ ಸಾಹಿತ್ಯದಲ್ಲಿ ಬೆಳಕಿಗೆ ಬಂದರು".[೨] ಹೀಗೆ ಜಗತ್ತಿನಾದ್ಯಂತ ಸಣ್ಣ-ಮಟ್ಟ ರಾಷ್ಟ್ರಗಳಲ್ಲಿಯೂ ಕಥೆಗಳು ಇದ್ದು, ಕ್ರಮೇಣ ಹದಿನೇಳರಿಂದ-ಹತ್ತೊಂಬತ್ತನೆಯ ಶತಮಾನದ ನಡುವೆ ಆಧುನಿಕ ಸಣ್ಣಕಥೆಯು ಸ್ಪಷ್ಟ ಅಸ್ತಿತ್ವವನ್ನು ಪಡೆದುಕೊಂಡಿತು. ಆದರೆ ಕನ್ನಡದಲ್ಲಿ ಈ ರೀತಿಯ ಆಧುನಿಕ ಸಣ್ಣಕಥೆಗೆ ದೀರ್ಘ ಇತಿಹಾಸ ಇಲ್ಲದಿದ್ದಾಗಿಯೂ ನೂರು ವರ್ಷಗಳ ಇತಿಹಾಸದಲ್ಲಿ ಅದು ಮಾಡಿದ ಸಾಧನೆ ತುಂಬ ಮಹತ್ವದ್ದು.

ಭಾರತದಲ್ಲಿ ಮನುಷ್ಯನ ಮೂಲಭೂತ ಆಸ್ತಿಯಾದ ಕಥೆಗಳ ದೊಡ್ಡಭಂಡಾರವೇ ಇದ್ದು ಪೈಶಾಚಿ ಭಾಷೆಯಲ್ಲಿ ರಚಿತವಾದ ಗುಣಾಢ್ಯನ "ಬೃಹತ್ಕಥೆ" ಅತ್ಯಂತ ಪ್ರಾಚೀನ ಅನುಪಲಬ್ದ ಗ್ರಂಥವಾಗಿದೆ. ಅಲ್ಲದೇ ಜಗತ್ತಿನ ಹಲವಾರು ಭಾಷೆಗಳಿಗೆ ಅನುವಾದ ಹೊಂದಿ ಜನಪ್ರಿಯ ಕಥೆಗಳನ್ನು ತನ್ನ ಒಡಲೊಳಗೆ ತುಂಬಿಕೊಂಡಿರುವ 'ಪಂಚತಂತ್ರ' ಮತ್ತು 'ಹಿತೋಪದೇಶ'ದಂತಹ ತುಂಬ ಮಹತ್ವದ ಕೃತಿಗಳು ಕತೆಗಳ ಹಿನ್ನೆಲೆಯ ಅಧ್ಯಯನಕ್ಕೆ ಸಹಕಾರಿಯಾಗಿವೆ.

ಹಾಗೆಯೇ ಕಥೆ ಮತ್ತು ಉಪಕಥೆಗಳನ್ನು ತುಂಬಿಕೊಂಡಿರುವ ರಾಮಾಯಣ ಮತ್ತು ಮಹಾಭಾರತ ಕೂಡ ಅಷ್ಟೇ ಶ್ರೇಷ್ಠ ಆಕೃತಿಗಳಾಗಿದ್ದು ಪ್ರಾಚೀನ ಕಾಲದಿಂದಲೂ ಗಮನಾರ್ಹತೆ ಪಡೆದುಕೊಳ್ಳುತ್ತಾ ಬಂದಿವೆ. ಅಲ್ಲದೆ ಇವು ತಮ್ಮ ಪಾವಿತ್ರ್ಯದ ಹಿನ್ನೆಲೆಯಲ್ಲಿ "ತಾತ್ವಿಕ ಜಿಜ್ಞಾಸೆ"ಗೆ ನೀತಿಬೋಧನೆಗೆ ಧರ್ಮಪ್ರಚಾರಕ್ಕೆ ಇಂಥ ಹಲವಾರು ಉದ್ದೇಶಗಳ ಬಳಕೆಗಾಗಿ ಹುಟ್ಟಿಕೊಂಡ ಈ ಕೃತಿಗಳು ತಮ್ಮಲ್ಲಿದ್ದ

---

೧. ಡಾ. ಡಿ. ಸುಮಂಗಳ, ಆಧುನಿಕ ಸಣ್ಣ ಕತೆಗಳಲ್ಲಿ ಮಹಿಳಾ ಪ್ರತಿಭಟನೆಗಳ ವಿನ್ಯಾಸಗಳು, ಪು. ೪೮.

೨. ಆಧುನಿಕ ಸಣ್ಣಕಥೆಗಳು, ಮುಕ್ತ ವಿಶ್ವವಿದ್ಯಾನಿಲಯ, ಪು. ೬.

ಕಥಾಂಶಗಳಿಂದಾಗಿಯೇ ಜನಮನದಲ್ಲಿ ಉಳಿದುಕೊಂಡು 'ಉನ್ನತ ಸ್ಥಾನವನ್ನು ಹೊಂದಿದ್ದವೆನ್ನಬಹುದು. ಕಥಾಗದ್ಯ ಗುರುತಿಸುವುದಕ್ಕೆ ಮೊದಲು ಗದ್ಯ-ಪದ್ಯಗಳೆರಡನ್ನೂ ತನ್ನೊಡಲಲ್ಲಿ ಇಟ್ಟುಕೊಂಡ ಚಂಪೂಕೃತಿಗಳು ಆಗಿನ ಕಾಲದಲ್ಲಿ ಪ್ರಸಿದ್ಧಿಯಾಗಲು ಎರಡು ಕಾರಣಗಳಿದ್ದವು. ಒಂದು ಅವು ರಾಮಾಯಣ ಮತ್ತು ಮಹಾಭಾರತ ಕಥೆಗಳನ್ನು ಆಧರಿಸಿ ಬರೆದಿದ್ದು ಎರಡನೆಯದು ಆಧರಿಸಿ ಬರೆದ ಈ ಕೃತಿಗಳಲ್ಲಿ 'ಕಥೆ' ಎಂಬ ಪ್ರಧಾನ ಅಂಶವಿದ್ದುದರಿಂದ ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ.

ಪ್ರಾಚೀನ ಸಾಹಿತ್ಯ ಸಂದರ್ಭದಲ್ಲಿ 'ಗದ್ಯಕಥೆ' ಎಂದೆನಿಸಿಕೊಂಡದು ಎರಡೆ ಆದಿಕವಿ ಪಂಪನ "ಪಂಪಭಾರತ"ಕ್ಕಿಂತ ಹಿಂದೆ ರಚಿತವಾದ "ವಡ್ಡಾರಾಧನೆ" ಮತ್ತು ಅನಂತರ ರಚಿತವಾದ ತ್ರಿಷಷ್ಠಿ ಲಕ್ಷಣ ಮಹಾಪುರಾಣ, ನೋಂಪಿಯ ಕಥೆಗಳು ನಮ್ಮಲ್ಲಿದ್ದವು. ನಂತರ ಹತ್ತನೆಯ ಶತಮಾನದಲ್ಲಿ "ಕಬ್ಬಿಗರ ಕಾವ", ಧರ್ಮಾಮೃತ ಮತ್ತು ಪಂಚತಂತ್ರ ಕಥೆಗಳು ಕಾಣಸಿಗುತ್ತದೆ.

ಕನ್ನಡ ನಾಡಿನಲ್ಲು ಬದಲಾವಣೆಯ ಅಲೆಗಳು ಮೆಲ್ಲನೆ ಚಾಲನೆ ಪಡೆದುಕೊಂಡವು. ವಿದೇಶಿ ಪಾದ್ರಿಗಳು ಕ್ರಿಯಾಶೀಲತೆಯಿಂದ ಅನೇಕ ರೀತಿಯ ಬದಲಾವಣೆ ತರಲು ಮುಂದಾದರು. ಪತ್ರಿಕೋದ್ಯಮ, ಪುಸ್ತಕೋದ್ಯಮ, ಮುದ್ರಣಾಲಯಗಳು ಕನ್ನಡ ನಾಡಿನಲ್ಲಿ ಹೊಸಗಾಳಿ ಬೀಸಲು ತೊಡಗಿದ್ದವು. ಭಾಷಾಂತರ ಕಾರ್ಯ ಆರಂಭವಾಯಿತು. "ತೆನಾಲಿ ರಾಮಕೃಷ್ಣನ ಹಾಸ್ಯರಸ ಕತೆಗಳು ಬೆಳವಾಡಿ ಕತೆಗಳು ಅನುವಾದಗೊಂಡು ಪ್ರಕಟವಾದವು. ಬಳಿಕ ಬಾಳಲೋಚನನ ವಿರಚಿತ "ಬತ್ತೀಸ ಪುತ್ತಲಿಕಥೆ"ಯನ್ನು ೧೯೦೮ರಲ್ಲಿ ಮೈಸೂರಿನಲ್ಲಿ ಮುದ್ರಿತವಾಯಿತು. ಮುಂದಿನ ಹಂತದಲ್ಲಿ ೧೮೪೨ರ ಹೊತ್ತಿಗೆ ಮಂಗಳೂರಿನಲ್ಲಿ ಬಾಸೆಲ್ ಮಿಷನ್ ಮುದ್ರಣಾಲಯ ಸ್ಥಾಪಿತವಾಗಿ ಅದು ಕನ್ನಡದ ಪ್ರಥಮ ಪತ್ರಿಕೆ "ಮಂಗಳೂರು ಸಮಾಚಾರ"ವನ್ನು ೧೮೪೩ರಲ್ಲಿ ಆರಂಭಿಸಿತು. ಈ ಮೂಲಕ ಕನ್ನಡ ವ್ಯಾಕರಣ, ಕನ್ನಡ ಸಾಹಿತ್ಯ ಚರಿತ್ರೆ, ಅದ್ಭುತ ರಮ್ಯಗದ್ಯ ಕಥಾನಕಗಳು. ಪಠ್ಯಪುಸ್ತಕಗಳು ಮುದ್ರಿತವಾದವು. ೧೯೨೧ರಲ್ಲಿ ಡೇನಿಯಯನ್ ಸಾಂಡರ್ ಸನ್‌ನು ಪಂಚತಂತ್ರ ಶಿವಪುರಾಣ ಮಹಾಭಾರತ ಮೊದಲಾದ ಗ್ರಂಥಗಳಿಂದ ಕತೆಗಳನ್ನು ಎತ್ತಿಕೊಂಡು ಒಂದು ಕಥಾಸಂಕಲನವನ್ನು ಸಂಕಲಿಸಿದ್ದು. ಹಾಗೆ ಇದನ್ನು "ಕ್ಯಾನರಿಸ್ ಪ್ರೋಸ" ಎಂದು ಆತ ಕರೆದನು.

ಆಧುನಿಕ ಕನ್ನಡ ಸಣ್ಣಕಥೆಯ ಬೆಳವಣಿಗೆಯನ್ನು ನಾಲ್ಕು ಪ್ರಮುಖ ಸಂವೇದನೆಯ ಹಿನ್ನೆಲೆಯಲ್ಲಿ ಗುರುತಿಸಬಹುದು.

೧. ನವೋದಯ ಯುಗ

೨. ಪ್ರಗತಿಶೀಲ ಯುಗ

೩. ನವ್ಯ ಯುಗ

೪. ಬಂಡಾಯ ದಲಿತ ಸಾಹಿತ್ಯ ಚಳುವಳಿ

ಆಧುನಿಕ ಕನ್ನಡ ಸಣ್ಣಕಥೆಯ ನವೋದಯ ಯುಗವು ಹತ್ತೊಂಬತ್ತನೆಯ ಶತಮಾನದ ಆರಂಭದಲ್ಲಿ ನಾಲ್ಕು ದಶಕಗಳಾಗಿದ್ದು ಈ ಅವಧಿಯಲ್ಲಿ ಕನ್ನಡ ಸಣ್ಣಕತೆಯ ಬೆಳವಣಿಗೆಗೆ ಉತ್ತಮವಾಗಿತ್ತು. ಮಂಗಳೂರಿನ "ಸುವಾಸಿನಿ" ೧೯೦೦ ಮಾಸಿಕದಲ್ಲಿ ಪ್ರಕಟವಾದ ಪಂಜೆ ಮಂಗೇಶರಾಯರ "ನನ್ನ ಚಿಕ್ಕತಾಯಿ" "ಭಾರತ ಶ್ರಾವಣ" ಕಮಲಾಪುರದ ಹೋಟ್ಲಿನಲ್ಲಿ ಕನ್ನಡದ ಮೊದಲ ಕಥೆಗಳು ಎಂಬ ಹೆಗ್ಗಳಿಕೆಗೆ ಪಾತ್ರವಾದವು. ಸದ್ಯಕ್ಕೆ ನಮ್ಮ ಕಣ್ಮುಂದೆ ಉಪಲಬ್ದವಿರುವ ಪಂಜೆಯವರ ಕಥೆಗಳನ್ನು ಐತಿಹಾಸಿಕವಾಗಿ ಮೊದಲ ಸಣ್ಣಕಥೆಗಳೆಂದು ಗುರುತಿಸಲಾಯಿತು. ತರುವಾಯ ಅವರ ಸಮಕಾಲೀನರಾಗಿಯೇ ಇದ್ದ ಕೆರೂರು ವಾಸುದೇವಚಾರ್ಯರು ಎಂ.ಎನ್.ಕಾಮತ್ ಇನ್ನೂ ಮೊದಲಾದವರು ಆರಂಭದಲ್ಲಿ ಸಣ್ಣಕಥೆಗಳನ್ನು ಬರೆಯುತ್ತಿದ್ದರು. ವಸ್ತುವಿನ ಆಯ್ಕೆ, ದೃಷ್ಟಿ, ಧೋರಣೆ, ಹಾಸ್ಯ, ಸರಳಶೈಲಿ, ಪಾತ್ರಗಳ ಗಂಭೀರತೆ, ಸ್ವಭಾವ, ಸಮಸ್ಯೆಗಳನ್ನು ಬಿಡಿಸುವ ರೀತಿ-ರಿವಾಜು ಇನ್ನು ಮೊದಲಾದ ದೃಷ್ಟಿ-ಧೋರಣೆಗಳಿಂದ ಕನ್ನಡ ಕಥಾಲೋಕಕ್ಕೆ ಉತ್ತಮ ಅಡಿಪಾಯ, ಮಾರ್ಗದರ್ಶನವನ್ನು ಕಥೆಗಳ ರಚನೆಯ ವಸ್ತುಗಳ ಮುಖೇನ ಪ್ರಸ್ತುತಪಡಿಸಿದ್ದಾರೆ. ಸಣ್ಣಕತೆಯನ್ನು ಕ್ರಾಂತಿಕಾರಿ ಸ್ವರೂಪದಲ್ಲಿ ಸಾಹಿತ್ಯದಲ್ಲಿ ಜನಪ್ರಿಯಗೊಳಿಸಲಿಲ್ಲ. ಸಣ್ಣಕತೆಯನ್ನು ಓದುಗವರ್ಗದಲ್ಲಿ ಪ್ರಚುರ, ಆಸಕ್ತಿ ಕೆರಳಿಸಿ ಆಕರ್ಷಣೀಯವಾಗುವಂತೆ ಮಾಡಿದವರು. 'ಶ್ರೀನಿವಾಸ' ನಾಮಾಂಕಿತರಾದ ಮಾಸ್ತಿ ವೆಂಕಟೇಶ್ ಅಯ್ಯಂಗಾರ್‌ರವರು. ಹಾಗಾಗಿ ಇವರನ್ನು 'ಮಾಸ್ತಿ ಕನ್ನಡದ ಆಸ್ತಿ', 'ಸಣ್ಣಕತೆಗಳ ಜನಕ' ಎಂದು ಕರೆಯುತ್ತಾರೆ. ಇವರು ಸೃಷ್ಟಿಸಿದ ಪರಂಪರೆಯ ಹಿನ್ನೆಲೆಯಲ್ಲಿ 'ಆನಂದ, ಅಶ್ವತ್ಥರು, ಶ್ರೀಸ್ವಾಮಿ, ಕೆ.ಗೋಪಾಲಕೃಷ್ಣರಾಯ, ಎ.ಆರ್.ಕೃಷ್ಣಶಾಸ್ತ್ರಿ, ಎಸ್.ಜಿ.ಶಾಸ್ತ್ರಿ, ಆನಂದ ಕಂದ, ಗೊರೂರು ರಾಮಸ್ವಾಮಿ, ದೇವುಡು, ರಾಮಾನಂದ, ಕೃಷ್ಣಕುಮಾರ ಕಲ್ಲೂರು ಪ್ರಮುಖ ಕಥೆಗಾರರಾಗಿ ಬೆಳಕಿಗೆ ಬಂದರು".

ಸಣ್ಣಕತೆ ಕಾದಂಬರಿಯನ್ನು ಮೀರಿ ಜನಪ್ರಿಯವಾಗುತ್ತಿದೆ. ಕಾರಣವೇನೆಂದರೆ ಕೈಗಾರಿಕಾ ಕ್ರಾಂತಿಯ ನಂತರ ಸಮಯದ ಅಭಾವದ ಪರಿಣಾಮವಾಗಿ ದೀರ್ಘವಾದ ಮಹಾಕಾವ್ಯಗಳನ್ನು, ಕಾದಂಬರಿಗಳನ್ನು ಓದುವ ತಾಳ್ಮೆ ಕಡಿಮೆಯಾದ್ದರಿಂದ ಸಣ್ಣಕಥೆ ಜನಪ್ರಿಯವಾಗಲು ಈ ಪ್ರಕಾರದಲ್ಲಿ ಸಾಹಿತ್ಯ ರಚನೆಗೆ ಹೆಚ್ಚು ಪ್ರೋತ್ಸಾಹ ದೊರೆಯಿತು. ಎಡ್ಗರ್ ಅಲನ್‌ಪೋ ಹೇಳುವಂತೆ "ಸಣ್ಣಕಥೆ ಓದಿ ಮುಗಿಸಲು ಅರ್ಧಗಂಟೆ ಹಿಡಿದು ಒಂದು ಗಂಟೆ ಬೇಕಾಗುವ ಗದ್ಯಕಥನ"[೧] ಇನ್ನೊಂದು ಹೇಳಿಕೆಯಂತೆ ಒಂದು ಸಲಕ್ಕೆ ಓದಿ ಮುಗಿಸಬಹುದಾದ ನಿಜವಾದ ಸಣ್ಣಕಥೆ. ಸಣ್ಣಕತೆ ಕಾದಂಬರಿಯಿಂದ ಬೇರ್ಪಟ್ಟ ಸಾಹಿತ್ಯ ಪ್ರಕಾರ ಆಧುನಿಕ ಕನ್ನಡದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯದ ಮುಖ್ಯ ಅಭಿವ್ಯಕ್ತಿಯಾಗಿರುವ ಈ ಪ್ರಕಾರ ದಿನದಿಂದ ದಿನಕ್ಕೆ ಹೊಸ ರೂಪ ಮತ್ತು ತಂತ್ರಗಳ ಅನ್ವೇಷಣೆ ಭೂಮಿಕೆಯಾಗಿದೆ.

ಈ ಸಣ್ಣಕಥೆಯು ಓದುಗನಿಗೆ ರಸವನ್ನು ಉಣಬಡಿಸಿ ಹರ್ಷೋದ್ಗಾರ-ವಾಗುವಂತೆ ಮಾಡಿತು. ಇದನ್ನು ಮೆಚ್ಚದೆ ಇರುವವರೆ ಇಲ್ಲದಂತಾದರು. ಕನ್ನಡದಲ್ಲಿ ಮಯೂರ ಎಂಬ ತಿಂಗಳ ಪತ್ರಿಕೆ ಸಣ್ಣಕತೆಗಳ ಪ್ರಕಟಣೆಗಾಗಿಯೇ ಮೀಸಲಿದೆ ಎಂದರೆ ಕನ್ನಡದ ಕಥಾಜಗತ್ತಿನ ವಿಶೇಷ ಆಸಕ್ತಿ ಎಲ್ಲರಿಗೂ ಅರ್ಥವಾಗದಿರದೆ ಇರದು. ಐತಿಹಾಸಿಕ ಸಾಮಾಜಿಕ, ವೈಜ್ಞಾನಿಕ ಮುಂತಾದ ಯಾವುದೇ ವಸ್ತುವನ್ನು ಕುರಿತು ಸಣ್ಣಕಥೆ ತನ್ನ ಪರಿಣಾಮವನ್ನು ಬೀರಿತು.

"ಕನ್ನಡದಲ್ಲಿ ಕಮಲಾಪುರದ ಹೋಟಲಿನಲ್ಲಿ (ಪಂಜೆ) ವೆಂಕಟಿಗನ ಹೆಂಡತಿ ಮಾಸ್ತಿ ಧನಿಯರ ಸತ್ಯನಾರಾಯಣ (ಕೊರಡ್ಕಲ್ ಶ್ರೀನಿವಾಸರಾವ್) ನಾನು ಕೊಂದ ಹುಡುಗಿ (ಆನಂದ) ಧನ್ವಂತರಿ ಚಿಕಿತ್ಸೆ (ಕುವೆಂಪು) ಕೊನೆಯ ಗಿರಾಕಿ (ನಿರಂಜನ) ಗಿರಿಜಾ ಕಂಡ ಸಿನಿಮಾ (ಕಟ್ಟೀಮನಿ) ಮೌನಿ (ಅನಂತಮೂರ್ತಿ), ರಾಕ್ಷಸ (ಶಾಂತಿನಾಥ ದೇಸಾಯಿ) ಅವನತಿ (ಪೂರ್ಣಚಂದ್ರತೇಜಸ್ವಿ) ಗೀಜಗನಗೂಡು (ಶ್ರೀಕೃಷ್ಣ ಆಲನಹಳ್ಳಿ) ಜಲದ ಕಣ್ಣು (ಸುಧಾಕರ) ಕಕರನ ಉಗಾದಿ (ಬೆಸಗರಹಳ್ಳಿ ರಾಮಣ್ಣ), ದೇವರ ಹೆಣ (ಕುಂ. ವೀರಭದ್ರಪ್ಪ) ಕಪ್ಪುನೆಲದ ಕೆಂಪುಕಾಲು (ಬರಗೂರು ರಾಮಚಂದ್ರಪ್ಪ) ಕೂಡಿಕೆ (ಕಾಳೇಗೌಡ ನಾಗವಾರ) ಮಾರಿಕೊಂಡವರು (ದೇವನೂರು ಮಹಾದೇವ) ವಿಯೋಗ (ಕರೀಗೌಡ ಬೀಚನಹಳ್ಳಿ) ಮಣ್ಣು ಸೇರಿತು ಬೀಜ (ಅಮರೇಶ ನುಗಡೋಣಿ) ಭತ್ತ (ಮೊಗಳ್ಳಿ ಗಣೇಶ) ಮುಂತಾದ ಕೆಲವು ಪ್ರಮುಖ ಸಣ್ಣಕತೆಗಳನ್ನು ಹೆಸರಿಸಬಹುದು.

---

೧. ಕನ್ನಡ ಆಧುನಿಕ ಸಣ್ಣಕಥೆಗಳು, ಪು. ೧೨.

ಅ.ನ.ಕೃಷ್ಣರಾಯರ ಪಾಪಪುಣ್ಯ, ಅಗ್ನಿಕನ್ಯೆ, ಮಿಂಚುಶಿಲ್ಪ, ಕಿಡಿ ಕಥಾಸಂಕಲನ, ತ.ರಾ.ಸುಬ್ಬರಾಯರ 'ರೂಪಸಿ' 'ತೊಟ್ಟಿಲು ತೂಗಿತ್ತು', 'ಗಿರಿಮಲ್ಲಿಗೆಯ ನಂದನ'ದಲ್ಲಿ ಇದೇ ನಿಜವಾದ ಸಂಪತ್ತು ನಾಲ್ಕು ಕಥಾಸಂಕಲನಗಳು".[೧] ಚದುರಂಗರವರ ಸ್ವಪ್ನಸುಂದರಿ, ಶವದಮನೆ, ಇಣುಕುನೋಟ, ಬಂಗಾರದ ಹೆಜ್ಜೆ, ಮೀನಿನ ಹೆಜ್ಜೆ, ಬಣ್ಣದ ಬೊಂಬೆ ಕಥಾಸಂಕಲನಗಳು ಈ ಕತೆಗಳಲ್ಲಿ ಅನ್ಯಾಯ, ಅಸಮಾನತೆ ಮನುಷ್ಯತ್ವದಿಂದ ನೋಡುವುದು ಚದುರಂಗರ ವೈಶಿಷ್ಟ್ಯವಾಗಿದೆ.

ಯು.ಆರ್.ಅನಂತಮೂರ್ತಿಯವರ ಎಂದೆಂದೂ ಮುಗಿಯದ ಕತೆ ಮೊದಲ ಕಥಾಸಂಕಲನ ಮಾಗಿ, ಆಕಾಶ ಮತ್ತು ಚುಕ್ಕಿ ಸೂರ್ಯನ ಕುದುರೆ ಪಿ.ಲಂಕೇಶರ ಕೆರೆಯ ನೀರನ್ನು ಕೆರೆಗೆ ಚೆಲ್ಲಿ, ನಾನಲ್ಲಿ ಉಮಾಪತಿಯ ಸ್ಕಾಲರ್‌ಷಿಪ್ ಯಾತ್ರೆ, ಕಲ್ಲುಕರಗುವ ಸಮಯ ಮುಂತಾದ ಕಥಾಸಂಕಲನ. ಯಶವಂತ ಚಿತ್ತಾಲರ ಕತೆಯಾದಳು ಹುಡುಗಿ. ಚೇನ್ನಾ, ಸಂದರ್ಶನ, ಆತ ಸಿದ್ಧಾರ್ಥ ಕುಮಟಿಗೆ ಬಂದ ಕಿಂದರಜೋಗಿ ಸಂಕಲನಗಳ ಕತೆಗಳನ್ನು ಅನುಭವದ ಸಾರ ತಿಳಿಸಿದ್ದಾರೆ. ಶಾಂತಿನಾಥ ದೇಸಾಯಿಯವರ ಕ್ಷಿತಿಜ, ರಾಕ್ಷಸ, ದಂಡೆ ಕೂರ್ಮಾವತಾರ, ದಲಿತ ಬಂಡಾಯ ಕಥೆಗಾರರಾದ ಬರಗೂರು ರಾಮಚಂದ್ರಪ್ಪರ ಸುಂಟರಗಾಳಿ, ಕಪ್ಪುನೆಲದ ಕೆಂಪುಕಾಲು ಬಯಲಾಟದ ಭೀಮಣ್ಣ, ಮೊಗಳ್ಳಿ ಗಣೇಶ್‌ರ ಬುಗುರಿ, ಭೂಮಿ, ಅತ್ತೆ ಎಂಬ ಮೂರು ಕಥಾಸಂಕಲನಗಳು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬೆಳೆದುಬಂದ ಒಂದು ಸುದೀರ್ಘಯಾತ್ರೆ ಎಂದು ಗುರುತಿಸಬಹುದಾಗಿದೆ.

ಕೃಷ್ಣಕುಮಾರ ಕಲ್ಲೂರರವರ ಪ್ರಕಾರ "ಸಣ್ಣಕತೆಯ ರೂಪ ಕನ್ನಡದಲ್ಲೇ ಬೆಳೆದುದು ಅದರಲ್ಲಿ ತುಂಬಿದ ಜೀವಾಳ ಕನ್ನಡದ್ದೇ. ಹೆಸರು ಮಾತ್ರ ಇಂಗ್ಲೀಷಿನಿಂದ ಎತ್ತಿಕೊಂಡಿದ್ದೇನೋ ನಿಜ"[೨] ಎಂದು ತಮ್ಮ "ಜೀವನ" ಕಥಾಸಂಕಲನದಲ್ಲಿ ತಿಳಿಸಿದ್ದಾರೆ. ಹಾಗಾಗಿ ಸಣ್ಣಕತೆ ಎಂಬ ಸಾಹಿತ್ಯ ಪ್ರಕಾರ ನಮಗೆ ಖಂಡಿತವಾಗಿಯೂ ಹೊಸತಲ್ಲ. ಉಪಕತೆಗಳ ಪ್ರಾಸಂಗಿಕವಾಗಿ ಕಾಣಿಸಿಕೊಂಡು ಓದುಗರನ್ನು ಹೆಚ್ಚಿಸಿಕೊಳ್ಳಲು ಪ್ರಯೋಗವಾಗುತ್ತಲೇ ಇದ್ದವು. ಧರ್ಮ ಪ್ರಚಾರದ ಸಂದರ್ಭದ್ದಲಿ ನೀತಿಬೋಧನೆಯಲ್ಲಿ ಜೈನ, ಬೌದ್ಧ, ಕ್ರಿಶ್ಚಿಯನ್, ಹಿಂದೂ ಹಾಗೂ ಮುಸ್ಲಿಂ ಪವಿತ್ರಧರ್ಮ ಗ್ರಂಥಗಳಲ್ಲಿನ ಕತೆಗಳು ಧರ್ಮ ಪ್ರಚಾರದ ಮಾಧ್ಯಮವಾಗಿ

---

೧. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಚಿ.ಸಿ. ನಿಂಗಣ್ಣ, ಪು. ೯೨.

೨. ಡಾ. ಡಿ. ಸುಮಂಗಳ, ಆಧುನಿಕ ಸಣ್ಣಕಥೆಗಳಲ್ಲಿ ಮಹಿಳಾ ಪ್ರತಿಭಟನಾ ವಿನ್ಯಾಸಗಳು, ಪು. ೪೯.

ಬಳಕೆಯಾಯಿತು. ಗದ್ಯಭಾಷೆಯಿಂದ ನಿರೂಪಿತವಾಗುವ ಕತೆಗಳು ಅರ್ಥ ಕೆಡದಂತೆ ಅರ್ಥೈಸಿಕೊಳ್ಳಲು ಮತ್ತಷ್ಟು ವಿವರ ಬಯಸದಂತೆ ಪೂರ್ಣವಾಗಿದ್ದು ಚಿಕ್ಕ ಹಾಗೂ ಚೊಕ್ಕ ಕಥಾ ನಿರೂಪಣೆಯನ್ನು ಕತೆಗಳು ಹೊಂದಿರುತ್ತವೆ. ಹಿಂದೆ ಮೌಖಿಕ ಪರಂಪರೆಯಿಂದ ಕತೆಗಳು ಹೇಳಲ್ಪಡುತ್ತಿದ್ದು ಇಂದಿಗೂ ಅವು ಉಳಿದುಕೊಳ್ಳಲು ಸಾಧ್ಯವಾಗಿದೆ. ಭಾರತದಲ್ಲಿ ಮೊದಲಿಗೆ ಬಂಗಾಳದಲ್ಲಿ ಆಧುನಿಕ ಸಣ್ಣಕತೆಗಳು ಕಾಣಿಸಿಕೊಂಡಿತು. ರವೀಂದ್ರನಾಥ ಠಾಕೂರ್, ಶರತ್‌ಚಂದ್ರ ಚಟರ್ಜಿ, ಶಾಂತಾದೇವಿ ಮುಂತಾದವರು ಕತೆಗಾರರಾಗಿ ಹೆಸರು ಪಡೆದರು.

ಅಧ್ಯಾಯ – ೩

ಶ್ರೀ ಕ್ಯಾತನಹಳ್ಳಿ ರಾಮಣ್ಣನವರ ಪರಿಚಯ

"ಜಾನಪದ ಜಗತ್ತಿನ ಕಿಟೆಲ್" ಎಂಬ ಕೀರ್ತಿಗೆ ಪಾತ್ರರಾಗಿರುವ ಶ್ರೀ ಕ್ಯಾತನಹಳ್ಳಿ ರಾಮಣ್ಣನವರದು ಬಹುಮುಖ ಪ್ರತಿಭೆಯುಳ್ಳ ವ್ಯಕ್ತಿತ್ವ. ಮಂಡ್ಯಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿಯವರಾದ ಇವರು. ೧೯೪೨ರಲ್ಲಿ ದಾಸೇಗೌಡ ಮತ್ತು ಮಾದಮ್ಮರವರ ಮಗನಾಗಿ ಜನಿಸಿದರು. ಕ್ಯಾತನಹಳ್ಳಿಯಲ್ಲಿ ಇವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು, ಪಾಂಡವಪುರದಲ್ಲಿ ಪ್ರೌಢಶಾಲೆ ವ್ಯಾಸಂಗವನ್ನು, ಸೇಂಟ್ ಫಿಲೋಮಿನ ಕಾಲೇಜಿನಲ್ಲಿ ಪಿ.ಯು.ಸಿ. ವಿದ್ಯಾಭ್ಯಾಸವನ್ನು ಮುಗಿಸಿದರು. ಮಹಾರಾಜ ಕಾಲೇಜಿನಲ್ಲಿ ಬಿ.ಎ., ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರಲ್ಲಿ ಎಂ.ಎ. ಕನ್ನಡ ಮುಗಿಸಿದರು. ಕಳೆದ ಮೂರು ದಶಕಗಳಿಂದ ಅವಿರತವಾಗಿ ದುಡಿಯುತ್ತ ಬಂದಿರುವ ಸತ್ವಯುತ ಸೃಜನಶೀಲ ಬರಹಗಾರರು. ಇವರು ಶ್ರೇಷ್ಠ ಕಥೆಗಾರರಾಗಿ, ನಾಟಕಕಾರರಾಗಿ, ಸಂಶೋಧಕರಾಗಿ ಜಾನಪದ ತಜ್ಞರಾಗಿ ಹೆಸರಾಗಿದ್ದಾರೆ.

ಶ್ರೀ ಕ್ಯಾತನಹಳ್ಳಿ ರಾಮಣ್ಣನವರು ಉತ್ತಮ ಕಥೆಗಾರರಾಗಿದ್ದು, "ತಿಳಿಜಲ", 'ವಜ್ರವರ್ತುಲ', 'ಎಂದು ಬಂದಿತೋ ಮಳೆ' ಹಾಗೂ 'ಕನಸಿನಲ್ಲಿ ಕಂಡ ಕಲ್ಪವೃಕ್ಷ' ಎಂಬ ಪ್ರಮುಖ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಈ ಕಥೆಗಳಲ್ಲಿನ ಪಾತ್ರ ವಸ್ತುವಿಷಯ, ಸನ್ನಿವೇಶ ವರ್ಣನೆ, ತಾತ್ವಿಕ ಸಾಮಾಜಿಕ ಚಿಂತನೆಗಳ ಚಿತ್ರಣ ಗಮನಸೆಳೆಯುತ್ತದೆ.

ಗ್ರಾಮ್ಯ ಜನಜೀವನದ ಸಾಮಾನ್ಯ ರೈತ ಕುಟುಂಬದಲ್ಲಿ ಹುಟ್ಟಿ ಬೆಳೆದ ಶ್ರೀಕ್ಯಾತನಹಳ್ಳಿ ರಾಮಣ್ಣ ಅವರಿಗೆ ಹಳ್ಳಿಯ ಜೀವನವು ಬಾಲ್ಯದಲ್ಲಿ ಅನುಭವ ಶ್ರೀಮಂತಿಕೆ. ಗ್ರಾಮೀಣ ಸೊಗಡನ್ನು ಉಣಬಡಿಸಿದೆ. ಅವರ ಆಳವಾದ ವ್ಯಾಸಂಗ, ಅಪಾರವಾದ ಜೀವನಾನುಭವ ವ್ಯಾಪಕ ಚಿಂತನೆಗಳು ಕ್ಷೇತ್ರಕಾರ್ಯಾನುಭವ ಶ್ರೀಯುತರ ವಿಶಿಷ್ಟ ವ್ಯಕ್ತಿತ್ವದ ಅಭಿವ್ಯಕ್ತಿಯಲ್ಲಿ ಜೀವತುಂಬಿದ ಸಾಹಿತ್ಯ ಕೃತಿಗಳಾಗಿ ಜನ್ಮತಳೆದಿದೆ. ತಾವು ತಮ್ಮ ಕರ್ತವ್ಯದಲ್ಲಿ ಸ್ಥಿರವಾಗಿ ನಿಂತ ಸ್ಥಿತಪ್ರಜ್ಞ ತಪಸ್ವಿಯಂತೆ ರಾಮಣ್ಣ ಸಾಹಿತ್ಯ ಕೃಷಿಯಲ್ಲಿ ಕಾಣಿಸಿಕೊಂಡಿದ್ದಾರೆ.

ಶ್ರೀಕ್ಯಾತನಹಳ್ಳಿ ರಾಮಣ್ಣ ಅವರು ಒಳ್ಳೆಯ ಕಥೆಗಾರರಾಗಿ, ನಾಟಕಕಾರರಾಗಿ ಉನ್ನತ ಸಂಶೋಧಕರಾಗಿ ಕೆಲಸ ಮಾಡಿದ್ದರೂ ಜಾನಪದ ಸಂಗ್ರಹ ಸಂಪಾದನೆ ಕ್ಷೇತ್ರ

ಕಾರ್ಯಾನುಭವ ಸಂಶೋಧನೆಗಳಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ. ಈವರೆಗೆ ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಗೊಳಿಸಿದ್ದಾರೆ. ಅವುಗಳಲ್ಲಿ ಸಿಂಹಪಾಲು ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದ ಕೃತಿಗಳಾಗಿವೆ. ನಮ್ಮ ನಾಡ ಜನರ ಆಡುನುಡಿಯ ಸೊಗಡಿಗೆ ಸೋತ ರಾಮಣ್ಣ ಕರ್ನಾಟಕ ಜಾನಪದ ಚೈತ್ರಯಾತ್ರೆಯನ್ನು ಕೈಗೊಂಡು ನಿರಕ್ಷರ ಕುಕ್ಷಿಗಳ ನುಡಿಸಂಪತ್ತುಗಳನ್ನೆಲ್ಲಾ ನಾಡಿನಾದ್ಯಂತ ಅಲೆದಾಡಿ ಮೂಲೆ ಮುಡುಕುಗಳಲ್ಲೆಲ್ಲ ಹುಡುಕಿ ತಡಕಿ ತಂದು ಸಾಹಸ ಪೂರ್ಣ ಸಾರ್ಥಕ "ಜನಪದ ನಿಘಂಟು" ರಚಿಸಿ ಜಾನಪದ ಅಧ್ಯಯನ ಶೀಲರಿಗೆ ಅಮೂಲ್ಯ ಕೊಡುಗೆ ನೀಡಿ "ಜಾನಪದ ಜಗತ್ತಿನ ಕಿಟೆಲ್" ಎಂಬ ಕೀರ್ತಿಗೆ ಭಾಜನರಾಗಿದ್ದಾರೆ. ಶಿಷ್ಟವಿದ್ವಾಂಸರ ನಿಘಂಟುಗಳಲ್ಲಿ ಅಲಭ್ಯವೆನಿಸುವ ಅದೆಷ್ಟೋ ಅಪರೂಪದ ಅಪೂರ್ವ ಪದಗಳ ಕಣಜ "ಜನಪದ ನಿಘಂಟು" ಆಗಿದೆ. ಇದಕ್ಕೆ ಕ್ರಿ.ಶ. ೧೯೮೭ರಲ್ಲಿ "ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ" ಸಂದಿದೆ.

ಜಾನಪದ ತಜ್ಞರಾದ ಶ್ರೀಕ್ಯಾತನಹಳ್ಳಿ ರಾಮಣ್ಣ ಅವರು ಕರ್ನಾಟಕದ ಜನಪದ ಧಾರ್ಮಿಕ ವೃತ್ತಿಗಾಯಕರಲ್ಲಿ ಪ್ರಮುಖರಾದ ಗೊಂದಲಿಗರ ಸಾಹಿತ್ಯವನ್ನು ಮೊಟ್ಟಮೊದಲಿಗೆ ಶಾಸ್ತ್ರೀಯವಾಗಿ ಅಧ್ಯಯನ ಮಾಡಿ ಬೆಳಕಿಗೆ ತಂದವರು "ಗೊಂದಲಿಗರು ಒಂದು ಅಧ್ಯಯನ" ಪಿಹೆಚ್.ಡಿ. ಪ್ರಬಂಧದ ಮಾದರಿಯಾಗಿ ಹೊರಬಂದಿರುವ ಈ ಕೃತಿಗೆ ಕ್ರಿ.ಶ. ೧೯೮೭ರಲ್ಲಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಬಹುಮಾನ ಬಂದಿದೆ.

ಶ್ರೀ ರಾಮಣ್ಣ ಅವರು ಜಾನಪದ ಲೋಕವನ್ನು ಕ್ರಿ.ಶ. ೧೯೭೦ರಲ್ಲಿ ಪ್ರವೇಶ ಮಾಡಿದ್ದು "ಐದು ಜನಪದ ಕಥನಗೀತೆಗಳು" ಎಂಬ ಕಥಾಸಂಕಲನದ ಮೂಲಕ. ಹುಟ್ಟೂರಿನ ಜನಪದ ಮಹಿಳೆಯಾದ ಕ್ಯಾತನಹಳ್ಳಿ ಸುಬ್ಬಕ್ಕ ಹಾಡಿದ ಐದು ಕಥನಗೀತೆಗಳನ್ನು ಈ ಸಂಗ್ರಹ ಒಳಗೊಂಡಿದೆ. ಚಾಮುಂಡೇಶ್ವರಿ ಹಾಗೂ ನಂಜುಂಡೇಶ್ವರನ ಪ್ರಣಯವನ್ನು ನಿರೂಪಿಸುವ ದೀರ್ಘಕಥನ ನಮ್ಮಲ್ಲಿ ಹಾಡುವವರು ದಂಡಿಯಾಗಿದ್ದಾರೆ. "ಸುಬ್ಬಕ್ಕ ಹಾಡಿದ ನಂಜುಂಡೇಶ್ವರನ ಕಾವ್ಯ" ಒಂದು ಅಪರೂಪದ ಕಾವ್ಯವಾಗಿದೆ. ನಂಜುಂಡೇಶ್ವರ ಪೂರ್ವ ಇತಿಹಾಸವನ್ನು ಹೇಳುವ ಕಾವ್ಯ ಈವರೆಗೂ ಕಂಡುಬಂದಿರಲಿಲ್ಲ. ಸುಬ್ಬಕ್ಕ ಹಾಡದಿದ್ದರೆ ಅದನ್ನು ರಾಮಣ್ಣ ಪ್ರಕಟಿಸದಿದ್ದರೆ ಇಂಥದ್ದೊಂದು ಕಾವ್ಯ ನಮ್ಮಲ್ಲಿ ಇದೆ ಎಂಬ ಕಲ್ಪನೆಯೂ ಬರುತ್ತಿರಲಿಲ್ಲ. ಹೀಗೆ ವಿನಾಶದ ಅಂಚಿನಲ್ಲಿದ್ದ ಕಾವ್ಯಗಳನ್ನು ಉಳಿಸಿಕೊಟ್ಟು ಸುಬ್ಬಕ್ಕ ಹಾಡಿದ ನಂಜುಂಡೇಶ್ವರನ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದ ಸಾಧನೆ ಅನನ್ಯವಾದುದು.

ಕರ್ನಾಟಕ ವಿಶಿಷ್ಟ ಲಾವಣಿಗಳ ಉಳುವಿಗೆ ಕಾರಣರಾದವರು. ಜಾನಫೆಯ್ತ್‌ಫುಲ್, ಫ್ಲೀಟರು ಈತ ವಿದೇಶಿಯನಾದರೂ ಕನ್ನಡ ನಾಡುನುಡಿಗೆ ಸಲ್ಲಿಸಿದ ಸೇವೆ ಅನನ್ಯವಾದದ್ದು. "ಫ್ಲೀಟರು ಸಂಗ್ರಹಿಸಿದ ಲಾವಣಿಗಳು" ಇಂಡಿಯನ್ ಆಂಟಿಕ್ವೇರಿ ಪತ್ರಿಕೆಯ ಪುಟಗಳನ್ನು ಬಿಡಿಬಿಡಿಯಾಗಿ ಹರಡಿಹೋಗಿದ್ದ ಈ ಲಾವಣಿಗಳು ಒಂದೆಡೆಗೆ ತಂದು ಮರತೇ ಹೋಗಬಹುದಾಗಿದ್ದ ಈ ಜನಪದ ಸಂಪತ್ತನ್ನು ಮರಳಿ ಕನ್ನಡಿಗರ ಕೈ ಸೇರುವಂತೆ ಮಾಡಿದ ಕೀರ್ತಿ ಕ್ಯಾತನಹಳ್ಳಿ ಅವರಿಗೆ ಸಲ್ಲುತ್ತದೆ.

ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದ "ಕೊಂತಿಪೂಜೆ : ಒಂದು ಅಧ್ಯಯನ", "ಬೀದರ್ ಜಿಲ್ಲೆಯ ಜನಪದ ಕಥೆಗಳು", "ಬೀದರ್‌ಜಿಲ್ಲೆಯ ಜನಪದ ಗೀತೆಗಳು", "ಬೀಜಾಪುರ ಜಿಲ್ಲೆಯ ಲಾವಣಿಗಳು" ಹಾಗೂ ಲಾಳೇಸಾಬ್ (ಶ್ರೀಲಾಲ್ ಮಹಮದ್ ಪಟಾನ್) ಎಂಬ ಕನ್ನಡಿಗ ಮುಸ್ಲಿಂ ಭಾಗವತರು ಕಂಠಸ್ಥ ಸಂಪ್ರದಾಯದಲ್ಲಿ ಉಳಿಸಿಕೊಂಡು ಬಂದಿದ್ದ ಗುಲ್ಬರ್ಗ ಜಿಲ್ಲೆಯ ದೊಡ್ಡಾಟ "ಭೀಮವಿಲಾಸ" ಜಾನಪದ ಅಭ್ಯಾಸಿಗಳಿಗೆ ಹೊಸ ಹೊಸ ಹೊಳಪುಗಳನ್ನು ಕೊಡಬಲ್ಲ. "ಜಾನಪದ ವಿಹಾರ" ೧. ಜಾನಪದ ವಿಹಾರ. ೨. ಸಂಪುಟಗಳು. ಕನಕಪುರ ತಾಲ್ಲುಕಿನ "ಕಬ್ಬಾಳು ಕುಳಿಯಲ್ಲಿ ಹುಲಿ (ಜಾನಪದ ಕಥೆಗಳು) ಮುಂತಾದ ಜಾನಪದ ಸಂಗ್ರಹ ಸಂಶೋಧನಾ ಅಧ್ಯಯನಕ್ಕೆ ಸಂಬಂಧಿಸಿದ ವಿಶಿಷ್ಟ ಕೃತಿಗಳನ್ನು ಕ್ಯಾತನಹಳ್ಳಿ ರಾಮಣ್ಣ ಅವರ ಜಾನಪದ ಲೋಕಕ್ಕೆ ಸಮರ್ಪಿಸಿದ್ದಾರೆ.

ಜಾನಪದ ಅಧ್ಯಯನಕ್ಕಂತೂ ಕ್ಷೇತ್ರಕಾರ್ಯವೆ ತಳಹದಿ. ಜಾನಪದ ಕ್ಷೇತ್ರ ಕಾರ್ಯವನ್ನು ಕೈಗೊಳ್ಳುವ ಯಾವೊಬ್ಬರಿಗೂ ಕ್ಯಾತನಹಳ್ಳಿ ಅವರ "ಕ್ಷೇತ್ರಕಾರ್ಯದ ಹಾದಿಯಲ್ಲಿ" ಕೃತಿ ಮಾರ್ಗದರ್ಶಕವಾಗಿದೆ. ಈ ಗ್ರಂಥಕ್ಕೆ ಕ್ರಿ.ಶ. ೧೯೯೭ರಲ್ಲಿ ಸಾಹಿತ್ಯ ಅಕಾಡೆಮಿ ಬಹುಮಾನ ಸಂದಿದೆ.

ಈ ಎಲ್ಲಾ ಜಾನಪದ ಕ್ಷೇತ್ರದ ಸಾಹಿತ್ಯ ಸಾಧನೆಯನ್ನು ಮನಗಂಡು "ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ" ಕ್ರಿ.ಶ.೧೯೯೮ರಲ್ಲಿ ಕ್ಯಾತನಹಳ್ಳಿ ರಾಮಣ್ಣ ಅವರಿಗೆ "ಜಾನಪದ ತಜ್ಞ" ಪ್ರಶಸ್ತಿ ನೀಡಿ ಗೌರವಿಸಿದೆ.

ಹೀಗೆ ಕ್ಯಾತನಹಳ್ಳಿ ರಾಮಣ್ಣ ಅವರು ಜಾನಪದಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದರೂ ಸಹ ಅವರ ಸೃಜನಶೀಲ ಸಾಹಿತ್ಯವನ್ನು ಯಾರು ಮರೆಯುವಂತಿಲ್ಲ. ಉತ್ತಮ ಕಥೆಗಾರರೆಂಬುದಕ್ಕೆ ಅವರ "ತಿಳಿಜಲ", "ವಜ್ರವರ್ತುಲ" 'ಎಂದು ಬಂದೀತೋ ಮಳೆ', 'ಕನಸಿನಲ್ಲಿ ಕಂಡ ಕಲ್ಪವೃಕ್ಷ' (ಸುಧಾ ವಾರಪತ್ರಿಕೆಯಲ್ಲಿ

[illegible]

ಪ್ರಕಟ) ಕಥನ ಸಂಕಲನಗಳು ಸಾಕ್ಷಿಯಾಗಿವೆ. ಗೂಡು, ಸಾಮ್ತಿ ಪಥಭ್ರಾಂತ, ದೀಪ ಆರಿತು, ಕಾರ್ಗತ್ತಲು ಕವಿದಿತ್ತು ಮುಂತಾದ ಕಥೆಗಳು ರಾಮಣ್ಣ, ಅವರ ಕಥಾ ಕೌಶಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿ ಸತ್ವಶಾಲಿ ಕಥೆಗಾರರೆಂಬುದನ್ನು ಈ ಕಥೆಗಳು ನಿರೂಪಿಸುತ್ತವೆ. ಕಥೆಗಳಲ್ಲಿ ಗ್ರಾಮೀಣ ಜೀವನದ ಸರಳ ಸಂಕೀರ್ಣ ಅನುಭವಗಳು ಸಹಜವಾದ ರೀತಿಯಲ್ಲಿ ಅಭಿವ್ಯಕ್ತಗೊಂಡಿವೆ.

ಕ್ಯಾತನಹಳ್ಳಿ ರಾಮಣ್ಣನವರಿಗೆ ಜನಪ್ರಿಯತೆ ತಂದುಕೊಟ್ಟ ನಾಟಕ "ಹಲಗಲಿಯ ಬೇಡರು" ಯಶಸ್ವಿ ಪ್ರದರ್ಶನಗೊಂಡುದಲ್ಲದೆ ೧೯೯೨–೯೩ರ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯ ದ್ವಿತೀಯ ಪದವಿ ತರಗತಿಗಳಿಗೆ ಸವಿಸ್ತಾರ ಪಠ್ಯವಾಗಿಸಿದ್ದನ್ನು ಸ್ಮರಿಸಬಹುದು.

ಫ್ಲೀಟರು ಸಂಗ್ರಹಿಸಿದ ಐತಿಹಾಸಿಕ ಲಾವಣಿಗಳು "ಹಲಗಲಿಯ ಬೇಡರು" ಐತಿಹಾಸಿಕ ಲಾವಣಿಯನ್ನು ರಾಮಣ್ಣ ಪೌರುಷದ ನುಡಿಗಳಲ್ಲಿ ನಾಟಕವನ್ನಾಗಿಸಿದರು.

ದಕ್ಷಿಣ ಮರಾಠರ ಆಳ್ವಿಕೆಗೆ ಒಳಪಡುವ ಮುಧೋಳ ಸಂಸ್ಥಾನದ "ಹಲಗಲಿ" ಎಂಬ ಸಣ್ಣ ಹಳ್ಳಿಯ ಬೇಡರು "ನಿಶಸ್ತ್ರೀಕರಣ"ವೆಂಬ ಬ್ರಿಟಿಷರ ಕಾಯ್ದೆಯ ವಿರುದ್ಧ ಸಿಡಿದೆದ್ದರು. ಬೇಡರಿಗೆ ಕಾಯ್ದೆಗಿಂತ ಬದುಕು ಮುಖ್ಯವಾಗಿತ್ತು. ಆಯುಧ ಬಳಸಿ ಬೇಟೆಯಿಂದಲೇ ಜೀವನ ನಿರ್ವಹಿಸುವ ಬಗ್ಗೆ ಈ ಕಾರಣದಿಂದ ಬೇಡರು ಸಿಡಿದೆದ್ದು ಸಂಘಟಿತರಾಗಿ ಬ್ರಿಟಿಷರ ವಿರುದ್ಧ ನಡೆಸಿದ ಹೋರಾಟವೆ ಈ ನಾಟಕದ ಕಥಾವಸ್ತು.

"ಹಲಗಲಿಯ ಬೇಡರು" ಐತಿಹಾಸಿಕ ನಾಟಕಕ್ಕೆ ಕ್ರಿ.ಶ.೧೯೮೮ರಲ್ಲಿ "ಕರ್ನಾಟಕ ಸಾಹಿತ್ಯ ಅಕಾಡೆಮಿ" ಬಹುಮಾನ ಲಭ್ಯವಾಯಿತು.

"ಅಡವಿಯಲ್ಲಿ ದೊರೆಯ ಮಕ್ಕಳು" ನಾಟಕದಲ್ಲಿ ದೊರೆಯ ಮಕ್ಕಳ ಪಾತ್ರವೇ ರಂಗದ ಮೇಲೆ ಕಾಣಿಸಿಕೊಳ್ಳದೆ ಕಥೆ ನಡೆದು ಹೋಗುವ ತಂತ್ರವನ್ನು ರಾಮಣ್ಣ ಅಳವಡಿಸಿಕೊಂಡಿದ್ದಾರೆ. ಕನಕಪುರ ತಾಲ್ಲೂಕಿನ "ಕಬ್ಬಾಳು ಕುಳಿಯಲಿ ಹುಲಿ" ಕಥಾಸಂಕಲನದ "ತುಂಗೆ ತಾವರೆ ಮುಡಿದಳು" ಎಂಬ ಜನಪದ ಕಥೆಯನ್ನು ಆಧರಿಸಿ ಈ ನಾಟಕವನ್ನು ರಚಿಸಲಾಗಿದೆ. ಈ ಎರಡು ನಾಟಕಗಳ ಕಥಾವಸ್ತುವಿಗೆ ಮೂಲ ಜಾನಪದವೇ ಆಗಿದೆ.

ಗಂಭೀರ ಸ್ವಭಾವದ ಕ್ಯಾತನಹಳ್ಳಿ ಅವರಲ್ಲಿ ಸುಪ್ತವಾಗಿರುವ ಹಾಸ್ಯಪ್ರಜ್ಞೆ ಪ್ರಕಟಗೊಳ್ಳುವುದು ಅವರ "ಅರವತ್ತಕ್ಕೆ ಅರುಳೋ ಮರಳೋ" ನಾಟಕದಲ್ಲಿ ಇದು

ಮುದಿತನದ ಚಪಲದಿಂದಾಗಿ ಅನಾಹುತ ಹಾಸ್ಯದ ಹೊನಲಲ್ಲಿ ಹರಿಯುವ ಒಂದು ಸರಳ ಏಕಾಂತ ನಾಟಕ.

ಅಲ್ಲದೆ ಸರಳ ಸುಂದರ ಭಾಷೆಯಲ್ಲಿ ನವಸಾಕ್ಷರರಿಗಾಗಿ "ಭಗತ್‌ಸಿಂಗ್" "ಹಲಗಲಿಯ ಶೂರರು", "ಬದುಕು ಬಂಗಾರ", "ಜನಪದ ಸಾಹಸ ಕಥೆಗಳು" ಮುಂತಾದ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಸ್ನಾತಕೋತ್ತರ ಪದವಿ ಪಡೆದ ಕ್ಯಾತನಹಳ್ಳಿ ರಾಮಣ್ಣ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿಯ ಕನ್ನಡ ಅಧ್ಯಯನದ ಸಂಸ್ಥೆಯಲ್ಲಿ ಕ್ರಿ.ಶ. ೧೯೭೧ರಲ್ಲಿ ಸಂಶೋಧಕರಾಗಿ ಸೇವೆಗೆ ಸೇರಿ ೨೦೦೦ದಲ್ಲಿ ನಿವೃತ್ತರಾದರು. ಮೂರು ದಶಕಗಳಲ್ಲಿ ತಮ್ಮ ಅಮೂಲ್ಯ ಮುವತ್ತಕ್ಕೂ ಹೆಚ್ಚು ವೈವಿಧ್ಯಮಯವಾದ ಸಾರ್ಥಕ ಕೃತಿಗಳನ್ನು ಪ್ರಕಟಿಸಿ ಸಾಹಿತ್ಯ ಮತ್ತು ಜಾನಪದ ಜಗತ್ತಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ವೃತ್ತಿಯಿಂದ ನಿವೃತ್ತರಾದರೂ ಬರೆಯುವ ಕಾಯಕದಲ್ಲಿ ಪ್ರವೃತ್ತರಾಗಿ ಈಗಲೂ ಸಾಹಿತ್ಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಪಠ್ಯಪುಸ್ತಕಗಳಾಗಿ ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು ಹಲಗಲಿಯ ಬೇಡರು. ಕಬ್ಬಾಳು ಕುಳಿಯಲ್ಲಿ ಹುಲಿ, ಬೀದರ ಜಿಲ್ಲೆಯ ಜನಪದ ಗೀತೆಗಳು ಈ ಮುಂತಾದ ಕೃತಿಗಳು ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯಗಳಲ್ಲಿ ಹಲವಾರು ವರ್ಷಗಳಿಂದ ಒಂದಲ್ಲ ಒಂದು ಕಡೆ, ಒಂದಲ್ಲ ಒಂದು ಕೃತಿಯು, ಪಠ್ಯಪುಸ್ತಕವಾಗಿ ಆಯ್ಕೆಯಾಗಿವೆ.

ಕ್ಯಾತನಹಳ್ಳಿ ರಾಮಣ್ಣನವರು ಮೈಸೂರು, ಬೆಂಗಳೂರು, ಕುವೆಂಪು ಹಾಗೂ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯಗಳು ಏರ್ಪಡಿಸಿದ್ದ ಹಲವು ವಿಚಾರಸಂಕಿರಣಗಳಲ್ಲಿ ಭಾಗವಹಿಸಿ ಜಾನಪದದ ವಿವಿಧ ಆಯಾಮಗಳ ಬಗ್ಗೆ ವಿದ್ವತ್ಪೂರ್ಣ ಪ್ರಬಂಧಗಳನ್ನು ಮಂಡಿಸಿದ್ದಾರೆ. ಅನೇಕ ಚರ್ಚೆ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ.

ಇವರ ಸಾಹಿತ್ಯವನ್ನು ಕುರಿತು ನವೆಂಬರ್ ೨೦೦೦ರಲ್ಲಿ ಇಡೀ ದಿನ ಪೂರ್ಣಪ್ರಮಾಣದ ವಿಚಾರಸಂಕಿರಣವು ಪಾಂಡವಪುರದಲ್ಲಿ ನಡೆಯಿತು. ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಇವರಿಗೆ ಹಲವು ಸನ್ಮಾನಗಳು ಲಭ್ಯವಾಗಿವೆ. ಹುಟ್ಟಿದ ಊರಿನಲ್ಲಿ ಕೂಡ ಸನ್ಮಾನ ಮಾಡಲಾಗಿದೆ. ಸರಳ,

ನಿರ್ಗವಿಗಳಾದ ಕ್ಯಾತನಹಳ್ಳಿ ರಾಮಣ್ಣನವರ ಸ್ನೇಹಪರ ವ್ಯಕ್ತಿತ್ವ ಎಲ್ಲರನ್ನೂ ಗಮನಸೆಳೆಯುವಂತೆ ಮಾಡುತ್ತದೆ. ಪ್ರಸ್ತುತ ಇವರು ಮೈಸೂರಿನ ಬೋಗಾದಿ ಬಡಾವಣೆಯಲ್ಲಿ ವಾಸಿಸುತ್ತಿದ್ದಾರೆ. ಇದು ಮೈಸೂರಿಗರಿಗೆ ಹೆಮ್ಮೆಯ ವಿಷಯವಾಗಿದೆ.

ಕ್ಯಾತನಹಳ್ಳಿ ರಾಮಣ್ಣನವರ ಜಾನಪದ ಸಂಶೋಧನೆ ಪ್ರಕಟಿತ ಕೃತಿಗಳು

ಜಾನಪದ ಸಂಗ್ರಹ – ಸಂಶೋಧನೆಗಳು

೧. ಜಾನಪದ ವಿಹಾರ (ಸಂಪುಟ ೧) ೧೯೭೭

೨. ಗೊಂದಲಿಗರು: ಒಂದು ಅಧ್ಯಯನ ೧೯೮೨ (ಅಕಾಡೆಮಿ ಬಹುಮಾನ ಪಡೆದಿದೆ)

೩. ಜಾನಪದ ವಿಹಾರ (ಸಂಪುಟ ೨) ೧೯೮೫

೪. ಕೊಂತಿಪೂಜೆ : ಒಂದು ಅಧ್ಯಯನ ೧೯೮೫

೫. ಜನಪದ ನಿಘಂಟು ೧೯೮೭ (ಅಕಾಡೆಮಿ ಬಹುಮಾನ ಪಡೆದಿದೆ)

೬. ಕ್ಷೇತ್ರಕಾರ್ಯದ ಹಾದಿಯಲ್ಲಿ ೧೯೯೭, ೨೦೦೬, ೨೦೧೨ (ಅಕಾಡೆಮಿ ಬಹುಮಾನ ಮತ್ತು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮ್ಮ ಗಿರಿಗೌಡರ ರುದ್ರಪ್ಪ ದತ್ತಿ ಬಹುಮಾನ).

೭. ಐದು ಜನಪದ ಕಥನ ಗೀತೆಗಳು ೧೯೭೦

೮. ಗೊಂದಲಿಗರ ಕಥೆಗಳು (ಬಿಜಾಪುರ ಜಿಲ್ಲೆ) ೧೯೭೨

೯. ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು ೧೯೭೨

೧೦. ಶಿವಮೊಗ್ಗ ಜಿಲ್ಲೆಯ ಗೊಂದಲಿಗರ ಕಥೆಗಳೂ ೧೯೭೫.

೧೧. ಬೀದರ ಜಿಲ್ಲೆಯ ಜನಪದ ಗೀತೆಗಳು ೧೯೭೬

೧೨. ಭೀಮವಿಲಾಸ (ಗುಲ್ಬರ್ಗ ಜಿಲ್ಲೆಯ ದೊಡ್ಡಾಟ) ೧೯೭೮

೧೩. ಬಿಜಾಪುರ ಜಿಲ್ಲೆಯ ಲಾವಣಿಗಳು ೧೯೭೯

೧೪. ಕಬ್ಬಾಳು ಕುಳಿಯಲ್ಲಿ ಹುಲಿ ೧೯೮೦
(ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜನಪದ ಕಥೆಗಳು)

೧೫. ಸುಬ್ಬಕ್ಕ ಹಾಡಿದ ನಂಜುಂಡೇಶ್ವರ ಕಾವ್ಯ ೧೯೮೦

೧೬. ಫ್ಲೀಟರು ಸಂಗ್ರಹಿಸಿದ ಲಾವಣಿಗಳು (ಸಮಗ್ರ), ೧೯೯೧, ೨೦೧೨.

೧೭. ಕನಸಿನಲ್ಲಿ ಕಂಡ ಕಲ್ಪವೃಕ್ಷ ೨೦೦೪ (ಕಾದಂಬರಿ ರೂಪದ ರಮ್ಯಕತೆ)

೧೮. ಕಲ್ಲಚ್ಚಿನ ಗಾದೆಗಳು (ಇತರರೊಡನೆ) ೨೦೦೧, ೨೦೧೧

೧೯. ಅಡವಿಯಲ್ಲಿ ದೊರೆಯ ಮಕ್ಕಳು ೧೯೮೨

ರಾಮಣ್ಣನವರ ಪ್ರಮುಖ ನಾಟಕಗಳು

೧. ಅರುವತ್ತಕ್ಕೆ ಅರುಳೋ ಮರುಳೋ ೧೯೮೧

೨. ಹಲಗಲಿಯ ಬೇಡರು ೧೯೮೮, ೧೯೯೧, ೨೦೦೯ (ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಪಡೆದಿದೆ)

ರಾಮಣ್ಣನವರ ಸೃಜನಾತ್ಮಕ ಬರಹಗಳು (ಕಥಾಸಂಕಲನಗಳು)

೧. ತಿಳಿಜಲ ೧೯೬೭

೨. ವಜ್ರವರ್ತುಲ ೧೯೭೫

೩. 'ಎಂದು ಬಂದೀತೋ ಮಳೆ', ೨೦೦೦

ನವಸಾಕ್ಷರರಿಗಾಗಿ

೧. ಬದುಕು ಬಂಗಾರ ೧೯೭೨

೨. ಭಗತ್‌ಸಿಂಗ್ ೧೯೭೬

೩. ಹಲಗಲಿಯ ಶೂರರು ೧೯೭೮

೪. ಜನಪದ ಸಾಹಸ ಕಥೆಗಳು ೧೯೮೦

೫. ಜನಪದ ಹಾಸ್ಯ ಕಥೆಗಳು ೧೯೯೫

೬. ಸಿದ್ದಪ್ಪಾಜಿ

ಅಧ್ಯಾಯ ನಾಲ್ಕು

ಕ್ಯಾತನಹಳ್ಳಿ ರಾಮಣ್ಣನವರ ಕಥೆಗಳಲ್ಲಿನ ವಿಭಿನ್ನ ನೆಲೆಗಳು

ಶ್ರೀ ಕ್ಯಾತನಹಳ್ಳಿ ರಾಮಣ್ಣನವರು ಹಲವು ವರ್ಷಗಳಿಂದ ಕಥಾಸಾಹಿತ್ಯ, ಜಾನಪದ ಸಂಶೋಧನೆ, ಕ್ಷೇತ್ರಕಾರ್ಯ, ಸೃಜನಾತ್ಮಕ ಬರಹಗಳು ಬಿಡಿಲೇಖನಗಳು, ಅನುವಾದ, ನಾಟಕ, ವಿಮರ್ಶೆ ಹೀಗೆ ಮುಂತಾದ ಸಾಹಿತ್ಯಿಕ ರಚನೆಗಳಲ್ಲಿ ತೊಡಗಿಸಿಕೊಂಡಿರುವ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ಸೃಜನಶೀಲ ಪ್ರತಿಭೆಯನ್ನು ಅನಾವರಣಗೊಳಿಸಿದ್ದಾರೆ. ಗ್ರಾಮ್ಯ ಪರಿಸರದಲ್ಲಿ ರೈತ ಕುಟುಂಬದಲ್ಲಿ ಹುಟ್ಟಿ ಬೆಳೆದ ರಾಮಣ್ಣನವರು ಹಳ್ಳಿಯ ಜನಜೀವನ, ಬಯಲು ಸೀಮೆಯ ಹಳ್ಳಿಗಳ ಸೊಬಗು, ಆ ಸುವಾಸನೆ ಬೀರುವ ಮಣ್ಣಿನ ಸ್ಪರ್ಶಸುಖವನ್ನು ತಾವು ಅನುಭವಿಸಿ ಕತೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಈ ಒಂದು ಅಧ್ಯಯನದ ಸಲುವಾಗಿ ಶ್ರೀ ಕ್ಯಾತನಹಳ್ಳಿ ರಾಮಣ್ಣನವರ ಕತೆಗಳನ್ನು ಮೂರು ವಿಭಿನ್ನ ನೆಲೆಗಳಾಗಿ ಗುರುತಿಸಿ ಅಧ್ಯಯನ ನಡೆಸಿದ್ದೇನೆ.

೧. ಕೌಟುಂಬಿಕ ಸಂಬಂಧಗಳು

೨. ಮಹಿಳಾ ಪಾತ್ರ ಚಿತ್ರಣ

೩. ಗ್ರಾಮ್ಯ ಜೀವನ

ಎಂಬ ಅಂಶಗಳ ನೆಲೆಯಲ್ಲಿ ಕತೆಗಳನ್ನು ಅರ್ಥೈಸಿಕೊಳ್ಳುವ ಪ್ರಯತ್ನ ನಡೆಸಿದ್ದೇನೆ.

೧) ಕೌಟುಂಬಿಕ ಸಂಬಂಧಗಳು: ಕ್ಯಾತನಹಳ್ಳಿ ರಾಮಣ್ಣನವರ ಸಣ್ಣಕತೆಗಳನ್ನು ಅಧ್ಯಯನ ಮಾಡಿದಾಗ ಗ್ರಾಮೀಣ ಪರಿಸರದಲ್ಲಿನ ಕೌಟುಂಬಿಕ ಜೀವನದ ವೈವಿಧ್ಯಮಯ ಬದಲಾದ ಸನ್ನಿವೇಶಗಳು ಕಂಡುಬಂದವು. ಹಿಂದೆ ಅವಿಭಕ್ತ ಕುಟುಂಬವಿದ್ದು ತಂದೆತಾಯಿ, ಮಗ, ಮಗಳು, ಅಜ್ಜ, ಅಜ್ಜಿ, ಮೊಮ್ಮಕ್ಕಳು, ಮರಿಮಕ್ಕಳು, ದಾಯಾದಿಗಳೆಲ್ಲಾ ಒಟ್ಟಿಗೆ ನೆಲೆಸಿರುತ್ತಿದ್ದರು. ಕಾಲಕ್ರಮೇಣ ಪಟ್ಟಣದ ವಿಭಕ್ತ ಕುಟುಂಬಗಳ ಗಾಳಿ ಹಳ್ಳಿಗಳ ಮೇಲೂ ಆಗಿ ಕೌಟುಂಬಿಕ ಸಂಬಂಧ ವಾತಾವರಣಗಳು ಸಡಿಲವಾಗುತ್ತ, ಕೂಡು ಕುಟುಂಬಕ್ಕಿಂತ ಅವಿಭಕ್ತ ಕುಟುಂಬಗಳಿಗೆ ಜನ ಮಾರುಹೋಗುತ್ತಿರುವುದನ್ನು ಕಾಣಬಹುದು. ಇಂಥ ವಾತಾವರಣ, ಸನ್ನಿವೇಶಗಳನ್ನು ರಾಮಣ್ಣನವರ ಕತೆಗಳಲ್ಲಿ ಗುರುತಿಸಬಹುದು.

[illegible]

[illegible]

[illegible]

[illegible]

[illegible]

ಅಣ್ಣತಮ್ಮಂದಿರು ಸಣ್ಣ ವಿಷಯಗಳಿಗಾಗಿ ಜಗಳ ಮಾಡಿಕೊಳ್ಳುವುದು, ಮತ್ತೆ ಒಂದಾಗುವುದನ್ನು ಇವರ ಸಾಮ್ತಿ ಎನ್ನುವ ಕತೆ ಬಿಂಬಿಸುತ್ತದೆ. 'ಸಾಮ್ತಿ' ಕತೆಯಲ್ಲಿ ಗೌಡ ಮತ್ತು ಅವನ ತಮ್ಮ ಬಸವೇಗೌಡ ಸಣ್ಣ ಕಾರಣಗಳಿಗಾಗಿ ಬಸವೇಗೌಡನ ಹೆಂಡತಿಯ ಚಾಡಿ ಮಾತಿನಿಂದ ಬೇರಾಗಿರುತ್ತಾರೆ. ಗ್ರಾಮದ ಕಿಡಿಗೇಡಿ ಜನ ಬಾಡೂಟದ ಆಸೆಗೆ ಗೌಡನ ಗದ್ದೆಗೆ ಶಾಂತಿ ಮಾಡಿಸಬೇಕು ರಾವುನ್ಗದ್ದೆ ಎಂದು ಸುದ್ಧಿ ಹಬ್ಬಿಸುತ್ತಾರೆ. ಆಗ ಗೌಡ ತಮ್ಮನನ್ನು ಬಿಟ್ಟು ಹೇಗೆ ಮರಿ ಕುಯ್ಯುವುದೆಂದು ಯೋಚಿಸಿ ತಮ್ಮನನ್ನು ಕರೆಯಲು ಮಗನನ್ನು ಕಳಿಸುತ್ತಾನೆ. ತಮ್ಮ ಬೇರಾಗಿದ್ದನೆಂಬ ಮುನಿಸಾಗಲಿ, ಹೊಟ್ಟೆ ಕಿಚ್ಚಾಗಲಿ ಕಾಡದೆ ತಮ್ಮನನ್ನು ಬಿಟ್ಟು ಕಾರ್ಯ ಮಾಡಬೇಕಲ್ಲ ಎಂಬ ದುಗುಡ ಗೌಡನಿಗೆ ಕಾಡುವುದನ್ನು ನೋಡಬಹುದು. ಗೌಡನ ಮಗ ಹೋಗಿ ಕರೆದಾಗ ಬಸವೇಗೌಡನ ಹೆಂಡತಿ "ಮನ್ಗಪ್ರೆ ಯೋಳಿಸ್‌ಬ್ಯಾಡ ಬುಳ್ಳಾ"[೧] ಎಂದು ಗದರಿಸಿ ಕಳಿಸಿಬಿಡುತ್ತಾಳೆ. ಮುಸುಕುಹೊದ್ದಿ ಮಲಗಿದ್ದ ಬಸವೇಗೌಡನಿಗೆ ತನ್ನ ಅಣ್ಣನ ಮಗ ತನ್ನನ್ನು ಬಿಟ್ಟು ತೆರಳುತ್ತಿರುವಾಗ ಅವನ ಮುಚ್ಚಿಟ್ಟ ಪ್ರೀತಿ, ವಾತ್ಸಲ್ಯ ಉಕ್ಕಿಬರುತ್ತದೆ. ಅವನ ಒಳಮನಸ್ಸು "ಲೋ ಸಂಕ್ರಾ, ನಾನೂ ಬತ್ತೀನಿ ತಾಳ್ಳಾ ಮಗಾ..... ಕೇಳಿಸಲೇ ಇಲ್ಲ ಅವನಿಗೆ ನನ್ನ ಕೂಗು. ನಾನು ಕೂಗಿದೆನೆ? ಊ್ನ ಕೂಗಿದ್ದೆ ಒಮ್ಮೆ.... ಓಗ್ರೋ ಬಡ್ಡೀ ಮಕ್ಳಾ ಆಚ್ಗೆ. ನಿಮ್ಮಿಂದ ನಮ್ಮಣ್ಣ ದೂರ ಆದ. ನನ್ ಸಂಸಾರ ಆಳಾಯ್ತು. ಮನೆಯಾಳ್ ಬಡ್ಡೀ ಮಕ್ಳಾ, ನಡಿರ್ಲಾ ಆಚ್ಗೆ"..[೨] ಎಂದು ಕೂಗುತ್ತದೆ. ಹೆಂಡತಿ 'ಹೋದರೆ ಸರಿಯಾಗದು' ಎಂದು ಎಚ್ಚರಿಸಿದರೂ ಅಂತಿಮವಾಗಿ ಸೋದರ ವಾತ್ಸಲ್ಯವೇ ಗೆಲ್ಲುತ್ತದೆ. ಬಸವೇಗೌಡ ಅಣ್ಣನ ಮಾತಿಗೆ ಬೆಲೆಕೊಟ್ಟು ಹೊಲದ ಕಣಕ್ಕೆ ಬರುತ್ತಾನೆ. ತಮ್ಮನಿಗಾಗಿ ಪರಿತಪಿಸುತ್ತಿದ್ದ ಅಣ್ಣನಿಗೆ ತಮ್ಮನನ್ನು ಕಂಡು ಸಂತಸವಾಗಿ ತಮ್ಮನ ಬೆನ್ನ ಮೇಲೆ ಕೈ ಆಡಿಸಿದರೆ ಬಸವೇಗೌಡ ಟವಲ್‌ನಿಂದ ಮುಖ ಮುಚ್ಚಿಕೊಂಡು ಅಳುತ್ತಾನೆ. ದೂರವಾಗಿದ್ದ ಸಹೋದರರು ಹಿಂದಿನ ಪ್ರೀತಿ ವಾತ್ಸಲ್ಯಕ್ಕೆ ಮರಳುತ್ತಾರೆ.

'ಸಾಮ್ತಿ' ಕತೆಯಲ್ಲಿ ಕೌಟುಂಬಿಕ ಸಂಬಂಧ ಮತ್ತೆ ಕೂಡಿಕೊಂಡರೆ 'ಗೂಡು' ಎಂಬ ಕತೆಯಲ್ಲಿ ಹೊಣೆಗಾರಿಕೆ, ಪರಿಶ್ರಮದಿಂದ ಹೊರಬರಲು ತಮ್ಮ ಪಾಲು ಕೇಳುವುದನ್ನು ಗುರುತಿಸಬಹುದು. ಚಿಕ್ಕಂದಿನಿಂದ ಅನ್ಯೋನ್ಯವಾಗಿದ್ದವರು ಬೆಳೆಯುತ್ತಾ ಬೆಳೆಯುತ್ತಾ ತಮ್ಮ ಸುಖ, ನೆಮ್ಮದಿ ಕಂಡುಕೊಳ್ಳಲು ಯತ್ನಿಸುತ್ತಾರೆ ಹೊರತು ಕುಟುಂಬ

---

೧. ಸಾಮ್ತಿ, ಎಂದು ಬಂದೀತೋ ಮಳೆ, ಪು. ೧೦.
೨. ಅದೇ., ಪು. ೧೧.

[illegible]

ಛಿದ್ರವಾಗುತ್ತಿದೆ ಎಂದು ಅಂದುಕೊಳ್ಳುವುದಿಲ್ಲ. ಇಲ್ಲಿ ತಮ್ಮ ಸಿದ್ದ ಗದ್ದೆ ಕೆಲಸ ಬೆಳಗ್ಗಿನಿಂದ ಸಂಜೆಯವರೆವಿಗೂ ಎತ್ತಿನ ತರಹ ದುಡಿಯುತ್ತಿರುತ್ತಾನೆ. ಆತನ ಹೆಂಡತಿ ಹಿರಿಯ ಅಣ್ಣನ ಮಕ್ಕಳ ಸೇವೆ ಮಾಡುತ್ತ ಮನೆಗೆಲಸದಲ್ಲಿ ಮುಳುಗಿರುತ್ತಾಳೆ. ಆದರೆ ಅಣ್ಣ ಅತ್ತಿಗೆ ಮಾತ್ರ ಯಾವುದಕ್ಕೂ ತಲೆಕೆಡಿಸಿಕೊಳ್ಳದೇ ಆರಾಮವಾಗಿ ಕಾಲ ಕಳೆಯುತ್ತಿದ್ದಾರೆಂದು ಕೋಪಗೊಂಡ ಸಿದ್ಧಣ್ಣ "ಇವ್ರ ಸೇವೆ ಮಾಡೋಕೋಗಿ ನಮ್ ಸುಖ ಆಳ್ಮಾಡಕಾದದ?"[೧] ಎಂದು ಬಯ್ಯುತ್ತಾ ಪಾಲು ಕೇಳಲು ನಿಲ್ಲುತ್ತಾನೆ. ಹೆಂಡತಿ ಈರಿಯ ಇದ್ದಕ್ಕೆ ಪೂರಕವಾಗಿ ಆಗಾಗ್ಗೆ ಅಸಹನೆ ವ್ಯಕ್ತಪಡಿಸುತ್ತಿರುತ್ತಾಲೆ. "ಯಲ್ಲಾನು ನಾನೇ ಮಾಡ್ಬೇಕು ಗುಲಾಮ್‌ಗಿತ್ತಿಯಂಗೆ, ಅವ್ಳು ಮಾತ್ರ ಕುಂತಿರ್ತಳೆ ಮಾರಾಣಿಯಂಗೆ"[೨] "ಇವುಳ್ಗೆ, ಇವ್ಳ್ ಗಂಡುನ್ಗೆ, ಇವ್ಳ್ ಮಕ್ಕುಳ್ಗ, ಯಲ್ಲಾರ್ಗೂ ಮಾಡಾಕೋದು ನನ್ ಕೈಲಿ ಆಯ್ಕಿಲ್ಲ. ಅಲ್ಲಾ ಇದ್ಯಾವ್ ಗಾಚಾರ ಅಂತೀನಿ ನಂಗೆ? ಆ?"[೩] ಹಾಗಾಗಿ ಸಿದ್ದಣ್ಣ ತನ್ನ ತಂದೆಗೆ ಮಾನ, ಮರ್ಯಾದೆ ಹೋಗುತ್ತದೆ ಎಂಬ ಸಂಗತಿಯನ್ನು ಯೋಚಿಸದೆ ತುಂಬು ಕುಟುಂಬದಿಂದ ಹೊರಬರಲು ತೀರ್ಮಾನಿಸುತ್ತಾನೆ. ವೈಯಕ್ತಿಕ ಆಸೆ, ಹಿತಾಸಕ್ತಿಯ ಮುಂದೆ ತನ್ನ ತಂದೆಯ ಕುಟುಂಬದ ಗೌರವ, ಮರ್ಯಾದೆ ನಗಣ್ಯವಾಗುತ್ತಿರುವುದನ್ನು 'ಗೂಡು' ಕತೆ ಬಿಂಬಿಸುತ್ತವೆ. ಸಣ್ಣಪುಟ್ಟ ಕಾರಣಗಳಿಗಾಗಿ ಕೌಟುಂಬಿಕ ವ್ಯವಸ್ಥೆ ವಿಘಟನೆಗೊಳ್ಳುತ್ತಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಗ್ರಾಮೀಣರಲ್ಲಿ ಮೊದಲಿನಷ್ಟು ಸಹನೆ, ಸೌಹಾರ್ದ ವಾತಾವರಣ ಮಾಯವಾಗುತ್ತಿರುವುದನ್ನು ಕ್ಯಾತನಹಳ್ಳಿ ರಾಮಣ್ಣನವರ ಕತೆಗಳಲ್ಲಿ ಪ್ರಮುಖವಾಗಿ ಕಾಣಬಹುದು. 'ಚೆಲ್ಲು ಹೆಗ್ಗಣ' ಎಂಬ ಕತೆಯಲ್ಲಿಯೂ ಇಂಥದೇ ಪ್ರಸಂಗ' ವ್ಯಕ್ತಗೊಂಡಿದೆ. ಗೌರಮ್ಮ – ದೊಡ್ಡಗೌಡರು ಆದರ್ಶ ದಂಪತಿಗಳು, ಒಬ್ಬನೇ ಮಗ, ಆತನಿಗೆ ನಾಲ್ಕು ಮಕ್ಕಳು ತುಂಬು ಶ್ರೀಮಂತ ಕುಟುಂಬ. ಗೌರಮ್ಮ–ಗೌಡರು ಚೆನ್ನಾಗಿದ್ದ ಕಾಲದಲ್ಲಿ ಒಟ್ಟಾಗಿ ಇದ್ದ ಕುಟುಂಬ ಕಾಲಾನಂತರದಲ್ಲಿ ಒಬ್ಬೊಬ್ಬ ಸೊಸೆ ಮನೆಗೆ ಬರುತ್ತಲೇ ಅವರುಗಳಲ್ಲಿ ಹೊಂದಾಣಿಕೆಯಾಗದೆ ಪಾಲಾಗುತ್ತಾರೆ. ಧಾನ್ಯವನ್ನು ತುಂಬುವ ಪೆಟ್ಟಿಗೆಯಲ್ಲಿನ ಭತ್ತವನ್ನು ಒಬ್ಬರಿಗೆ ತಿಳಿಯದಂತೆ ಒಬ್ಬರು ಕದಿಯುತ್ತ ಕೊನೆಗೆ ಒಂದೆಡೆ ಭತ್ತ ಖಾಲಿಯಾಗುತ್ತ ಹೋದರೆ, ಮತ್ತೊಂದೆಡೆ ಹೆಗ್ಗಣಗಳು

---

೧. ಗೂಡು, ಎಂದು ಬಂದೀತೋ ಮಳೆ, ಪು. ೧೮.
೨. ಅದೇ, ಪು. ೧೬.
೩. ಅದೇ, ಪು. ೧೮.

ಭತ್ತವನ್ನು ಜಳ್ಳು ಮಾಡುತ್ತಿರುತ್ತವೆ. ಮನೆಯೊಳಗಿದ್ದೇ ಮನೆಯ ಸದಸ್ಯರು ಕುಟುಂಬವನ್ನು ಸಡಿಲ ಮಾಡುತ್ತಿರುವುದನ್ನು 'ಚೆಲ್ಲು ಹೆಗ್ಗಣ' ಸಂಕೇತಿಸುತ್ತದೆ.

ಕೌಟುಂಬಿಕ ವಾತಾವರಣ ಸೌಹಾರ್ಧಯುತವಾಗಿ ಸಾಗಲು ಗಂಡಹೆಂಡತಿಯರಲ್ಲಿ ನಂಬಿಕೆ ಬಹುಮುಖ್ಯ. ಸಂಶಯಪಟ್ಟುಕೊಂಡ ಹೆಣ್ಣೊಬ್ಬಳ ಮನದಲ್ಲಿ ಉಂಟಾಗುವ ಮಾನಸಿಕ ತುಮುಲವನ್ನು 'ದೀಪ ಆರಿತು' ಎಂಬ ಕತೆ ಅಭಿವ್ಯಕ್ತಿಸುತ್ತದೆ. ಮದುವೆಯಾದ ವರುಷದಲ್ಲಿ ಗಂಡನ ಬರುವಿಕೆಗಾಗಿ ದ್ರಾಕ್ಷಾಯಿಣಿ ನಿತ್ಯವೂ ಕಾಯುತ್ತಿರುತ್ತಾಳೆ. ಒಮ್ಮೆ ನಿದ್ದೆಯ ಮಂಪರಿನಲ್ಲಿ ಗಂಡನ ಬರುವಿಕೆ ತಡವಾಗಲು ಕಾರಣಗಳೇನಿರಬಹುದೆಂದು ಯೋಚಿಸುತ್ತಿರುತ್ತಾಳೆ. ಹೆಂಡತಿ ಎಂದರೆ ತಾತ್ಸಾರವೇ, ಬೇರೆ ಹೆಂಗಸೊಡನೆ ಸಿನಿಮಾಕ್ಕೆ ತೆರಳಿರಬಹುದೇ ಮುಂತಾಗಿ ಚಿಂತಿಸುತ್ತಾ ನಿದ್ದೆ ಹೋಗಿ ಬಿಡುತ್ತಾಳೆ. ಆಗ ಆಕೆಯ ಗಂಡ ಬಂದು ತಾನು ಸ್ನೇಹಿತನೊಡನೆ ಹರಟೆ ಹೊಡೆಯುತ್ತಿರುವುದನ್ನು ಹೇಳುತ್ತಾನೆ. ಜೊತೆಗೆ "ಹುಚ್ಚಿ, ಯೌವ್ವನದ ಹೆಂಗಸನ್ನು, ಅದರಲ್ಲೂ ಮದುವೆಯಾಗಿರುವವರನ್ನು ಒಂಟಿ ಬಿಡಬಾರದೂಂತ ಗೊತ್ತಿಲ್ಲವೇ ನನಗೆ? ಹಾಗೆ ಅವರನ್ನು ಏಕಾಂತದಲ್ಲಿ ಬಿಟ್ಟಾಗ, ಯೋಚಿಸಬಾರದ್ದನ್ನೆಲ್ಲಾ ಯೋಚಿಸುತ್ತದೆ ಅವರ ಮನಸ್ಸು"[೧] ಎಂದು ನಗುತ್ತಾ ಅವಳನ್ನು ಸಮಾಧಾನ ಪಡಿಸುತ್ತಾನೆ. ಆತಂಕದಿಂದ ಆರಂಭಗೊಂಡ ಕತೆ ಸಂತಸದಲ್ಲಿ ಮುಗಿದರೂ ಕುಟುಂಬದ ಸಾಮರಸ್ಯ ಪರಸ್ಪರ ನಂಬಿಕೆಯಿಂದ ಉಳಿಯುತ್ತದೆ ಎಂಬುದು ಈ ಕತೆಯ ಸಾರಾಂಶವಾಗಿದೆ. 'ಸಂಶಯ ಹೊಕ್ಕ ಸಂಸಾರ ಹಾಳು' ಎಂಬುದರ ಅರಿವು ಹೊಳೆಯುತ್ತದೆ.

ಒಂದು ಸಂಸಾರದಲ್ಲಿ ಗಂಡಹೆಂಡತಿಯರು ಸಹಕಾರ ಮನಸ್ಸಿನಿಂದ ಬಾಳಬೇಕಾದರೆ ಅವರ ವಯಸ್ಸು, ಮನೋಕಾಮನೆ ಸರಿಸುಮಾರು ಒಂದೇ ಆಗಿದ್ದರೆ ಸಾಧ್ಯ. ಇಲ್ಲವಾದರೆ ಬಾಳು ಧೂಳೀಪಟವಾಗುತ್ತದೆ ಎಂಬುದಕ್ಕೆ 'ನೇಣು ಹಾಕಿಕೊಂಡವರು' ಕತೆಯೇ ಸಾಕ್ಷಿ. ಗುಡ್ಡಯ್ಯ ಎಂಬ ಶ್ರೀಮಂತ ರೈತನಿಗೆ ಮೂರು ಜನಪತ್ನಿಯರು ಸತ್ತು ನಾಲ್ಕನೆಯ ಪತ್ನಿಯಾಗಿ ಗೋಳೂರಕ್ಕ ಬರುತ್ತಾಳೆ. ಅವಳ ದೈಹಿಕ ಬಯಕೆಗಳು ಈಡೇರದ ಹಿನ್ನೆಲೆ, ಮಕ್ಕಳನ್ನು ಹೆರದ ಸಾಧ್ಯತೆಗಳಿಂದ ಗಂಡ, ಮಲಮಗ, ಸೊಸೆಯೊಡನೆ ಸಿಟ್ಟಿನಿಂದ ನಡೆದುಕೊಳ್ಳುತ್ತಿರುತ್ತಾಳೆ. ತನಗೆ ಸಿಗದ ಸುಖ ಅನ್ಯ ಹೆಣ್ಣಿಗೂ ಬೇಡ ಎಂಬುದು ಅವಳ ಇಂಗಿತ. ಒಟ್ಟಾರೆ ಈ ಕತೆಯಲ್ಲಿ ಕೌಟುಂಬಿಕ

---

೧. ದೀಪ ಆರಿತು, ವಜ್ರವರ್ತುಲ, ಪು. ೧೨೭.

ವ್ಯವಸ್ಥೆ ಸಾಮರಸ್ಯದಿಂದ ಬದುಕಲು ತುಂಬಾ ವಯಸ್ಸಿನ ಅಂತರ ಇರಬಾರದೆಂಬ ಸಂದೇಶವನ್ನು ಕತೆ ನೀಡುತ್ತದೆ.

ಒಟ್ಟಾರೆ ಕ್ಯಾತನಹಳ್ಳಿ ರಾಮಣ್ಣನವರ ಕತೆಗಳಲ್ಲಿ ವ್ಯಕ್ತವಾಗಿರುವ ಕೌಟುಂಬಿಕ ಸಂಬಂಧಗಳೆಂದರೆ ಅಣ್ಣ-ತಮ್ಮಂದಿರ ವಾತ್ಸಲ್ಯ ಪ್ರೇಮದ ಜೊತೆಜೊತೆಯಲ್ಲಿ ತುಂಬು ಕುಟುಂಬಗಳು ಕ್ಷುಲ್ಲಕ ಕಾರಣಗಳಿಗಾಗಿ ಬೇರ್ಪಟ್ಟು ಹೋಗುತ್ತಿರುವುದನ್ನು ಗುರುತಿಸಬಹುದು. ಹಿಂದಿನ ಕಾಲದಲ್ಲಿದ್ದ ಒಟ್ಟು ಕುಟುಂಬಗಳು ಇಂದು ನಶಿಸಿಹೋಗುತ್ತಿರುವುದನ್ನು ಕುಟುಂಬ ವ್ಯವಸ್ಥೆಯ ಜಾಳುತನವನ್ನು ಇವರ ಕತೆಗಳಲ್ಲಿ ಕಾಣಬಹುದು.

೨) ಮಹಿಳಾ ಪಾತ್ರಚಿತ್ರಣ: ರಾಮಣ್ಣನವರ ಒಟ್ಟು ಕತೆಗಳನ್ನು ಅಧ್ಯಯನ ನಡೆಸಿದಾಗ ಕಂಡು ಬರುವ ಸ್ತ್ರೀಯರ ಪಾತ್ರಚಿತ್ರಣ ವಿಭಿನ್ನ ಧೋರಣೆಗಳನ್ನು ಒಳಗೊಂಡಂತಹವುಗಳು. ಅಣ್ಣನ ಮನೆ ಮಕ್ಕಳನ್ನು ನೋಡಿಕೊಳ್ಳುವ ವಿಧವೆ ತಂಗಿ, ಹೊಟ್ಟೆಕಿಚ್ಚಿನ ಸ್ತ್ರೀಯರು, ವಿದ್ಯಾವಂತೆ ಸ್ತ್ರೀಯರ ಪಾತ್ರ ಮುಂತಾದ ವಿಭಿನ್ನ ಗುಣಸ್ವಭಾವದ ಸ್ತ್ರೀಯರನ್ನು ಇವರ ಕತೆಗಳಲ್ಲಿ ಗುರುತಿಸಬಹುದಾಗಿದೆ. ಕ್ಯಾತನಹಳ್ಳಿ ರಾಮಣ್ಣನವರ ಬಹುತೇಕ ಕತೆಗಳು ಗ್ರಾಮೀಣ ಹಿನ್ನೆಲೆಯಲ್ಲಿ ರಚನೆವುಳ್ಳವಾದ್ದರಿಂದ ಗ್ರಾಮೀಣ ಪ್ರದೇಶದಲ್ಲಿನ ಸ್ತ್ರೀಯರು ಪಡುವ ಬವಣೆಗಳ ಜೊತೆಗೆ ಅವರ ಸ್ವಭಾವವನ್ನು ಕತೆಗಳ ಹಿನ್ನೆಲೆಯಲ್ಲಿ ಅರಿಯಬಹುದು.

ಗ್ರಾಮ್ಯ ಪರಿಸರದಲ್ಲಿನ ಸ್ತ್ರೀ ಶ್ರಮಜೀವಿ, ಮನೆಯ ಒಳಗೂ, ಹೊಲಗದ್ದೆಗಳಲ್ಲೂ ದುಡಿಯುವಂತಹವಳು. ತನಗಾಗುವ ಶೋಷಣೆಗಳನ್ನು ತಾಳಿಕೊಳ್ಳುವ ಸ್ವಭಾವ ಸಾಮಾನ್ಯವಾಗಿ ಅವಿದ್ಯಾವಂತರಲ್ಲಿ ಕಡಿಮೆ. ಕಡ್ಡಿ ಎರಡು ತುಂಡು ಮಾಡುವಂತೆ ಮಾತನಾಡುವ ಸ್ವಭಾವ ಆಕೆಯದು. 'ಸಾಮ್ರಿ' ಎಂಬ ಕತೆಯಲ್ಲಿನ ಬಸವೇಗೌಡನ ಪತ್ನಿ ಅಣ್ಣತಮ್ಮಂದಿರಲ್ಲಿ ಮನಸ್ತಾಪ ತಂದು ಬೇರೆ ಮನೆ ಮಾಡಿಸುತ್ತಾಳೆ. ಅಣ್ಣ ತನ್ನ ಗದ್ದೆಯಲ್ಲಿ ಶಾಂತಿಮಾಡಿಸಲು ಮರಿಬಲಿ ಕೊಡುವಾಗ ತಮ್ಮನ ನೆನಪು ಅಗಾಧವಾಗಿ ಕಾಡಿದಾಗ ತಮ್ಮನನ್ನು ಕರೆತರಲು ಮಗನನ್ನು ಕಳಿಸುತ್ತಾನೆ. ಶಂಕರ 'ಚಿಕ್ಕಪ್ಪ' ಎಂದು ಕರೆಯುವಾಗ ಚಿಕ್ಕಮ್ಮ ಬಂದು 'ಯೋಳಿಸ್‌ಬ್ಯಾಡ ಬುಳ್ಳಾ, ಮನ್ಗವ್ರೇ'[೧] ಎಂದು ತಡೆದದ್ದಲ್ಲದೇ ಶಂಕರ ಅತ್ತ ಹೋದ ಕೂಡಲೇ ಗಂಡನನ್ನು ಕುರಿತು ಎಚ್ಚರಿಕೆಯ ಮಾತನಾಡುತ್ತಾಳೆ. "ಅವ್ನು ಕರ್ದ ಅಂದ್ಬುಟ್ಟೆ, ಊಟಗೀಟ ಸಿಕ್ತದೆ ಅಂತ ಎದ್ದಿ

---

೧. ಸಾಮ್ರಿ, ಎಂದು ಬಂದೀತೋ ಮಳೆ, ಪು. ೮.

ಒಂಟ್ಬುಟ್ಟೇರಿ, ನಮ್ಮಾನ ಮೂರ್ಖಾಸಾದಾತು"[೧] ಎಂದು ಎಚ್ಚರಿಸುತ್ತಾಳೆ. ಇಂಥಹದ್ದೇ ಮತ್ತೊಂದು ಬಜಾರಿ ಹೆಣ್ಣಿನ ಪಾತ್ರವನ್ನು 'ನೇಣುಹಾಕಿಕೊಂಡವರು' ಎಂಬ ಕತೆಯಲ್ಲಿಯೂ ಕಾಣಬಹುದು. ಸ್ವಲ್ಪ ಹಣಕಾಸು ಉಳ್ಳ ವಯಸ್ಸಾದ ಗುಡ್ಡಯ್ಯನ ನಾಲ್ಕನೇ ಹೆಂಡತಿ ಗೋಳೂರಕ್ಕ ದೊಡ್ಡ ಬಾಯುಳ್ಳವಳು. ವಯೋಮಾನದ ಅಗಾಧ ಅಂತರ, ಈಡೇರದ ದೈಹಿಕ ಕಾಮನೆಗಳು, ಅಸಂತುಷ್ಟ ದಾಂಪತ್ಯ ಜೀವನ, ಮಲಮಗನ ಪಾಲನೆಯ ಕಾರಣದಿಂದ ಯಾವಾಗಲೂ ಸಿಟ್ಟಿನಿಂದ ನಡೆದುಕೊಳ್ಳುತ್ತಿರುತ್ತಾಳೆ. ತನ್ನ ಬಗ್ಗೆ ಯಾರಾದರೂ ಕೆಡುನುಡಿಗಳನ್ನಾಡಿದಾಗ 'ವತಾರೆ ಉಂಡುದ್ದು ಇನ್ನೂ ಅರಗಿಲ್ವಾ? ಉಣ್ಬನ್ನಿ",[೨] ಎನ್ನುತ್ತಾಳೆ. ಗಂಡ ಹಾದಿಯಲ್ಲಿ ಮಾತನ್ನಾಡುತ್ತಾ ನಿಂತಿರುವಾಗ 'ಇದ್ಯಾಕೇ, ವಸಿ ಇಲ್ ಬನ್ನಿ' ಎಂದು ಒಮ್ಮೆ ಕರೆದು ಅವನು ಬರದಿದ್ದಾಗ ಅಬ್ಬರಿಸಿ "ಇದ್ಯಾಕೇ"[೩] ಎಂದು ಒಮ್ಮೆ ಹೇಳಿ ಗುರುಗುಟ್ಟುವಾಗ ಗುಡ್ಡಯ್ಯ ಮುಂದಿನ ಅಪಾಯದ ಮುನ್ಸೂಚನೆ ಅರಿತು ಒಳಬರುತ್ತಿದ್ದ ಒಮ್ಮೆ ಚಳಿಗಾಲದ ಸಂದರ್ಭದಲ್ಲಿ ಗಂಡನ ಬರುವಿಕೆಗಾಗಿ ಗೋಳೂರಕ್ಕ ಕಾಯುತ್ತಿರುತ್ತಾಳೆ. ಆದರೆ ಗಂಡ ಗುಡ್ಡಯ್ಯ ಇಸ್ಪೀಟಾಟಕ್ಕೆ ತೆರಳಿ ತಡರಾತ್ರಿ ಮಾಡಿಕೊಂಡು ಬರುತ್ತಾನೆ. ಬಂದ ಸ್ವಲ್ಪ ಹೊತ್ತಿಗೆ ಅವನ ಗುಡಿಸಲಿನಿಂದ ಅವನ ಚೀರಾಟ ಕೇಳುತ್ತದೆ. ಗೋಳೂರಕ್ಕ ಗಂಡನಿಗೆ ಮತ್ತೊಮ್ಮೆ ಇಸ್ಪೀಟಾಟಕ್ಕೆ ಹೋಗ್ತೀಯ ಅಂತ ಹೊಡೆಯುತ್ತಿರುವ ಸದ್ದು ಕೇಳಿಸುತ್ತದೆ. "ಇನ್ನೊಂದಪ ಇಸ್ಪೀಟಾಡಕೇಂತ ನೀನೋದುದ್ ಕಂಡ್ರೆ ಕೊಂದ್ಹಾಕ್ ಬುಟ್ಟೇನು .... ಉಣ್ಣಿ ...."[೪] ಎಂದು ಗದರಿಸುತ್ತಾಳೆ. ಅಕ್ಕಪಕ್ಕದ ಜನ ಏನೆಂದುಕೊಳ್ಳುತ್ತಾರೆ ಎಂಬುದನ್ನು ಅವಳು ಗಮನಿಸುವುದೇ ಇಲ್ಲ "ಮೆತ್ಗಂತೆ ಮೆತ್ಗೆ.... ನಾನಿಂಗೇಯ ಮಾತಾಡೋದು, ಕೇಳೋರೆಲ್ಲ ಕೇಳ್ಕಳ್ಳಿ, ಸುಮ್ಕೆ ಬಾಯ್ ಮುಚ್ಕೊಂಡು ಬಿದ್ಗೊಂಡಿಯೋ ಇಲ್ವೋ ತೆಪ್ಗೆ?"[೫] ಎನ್ನುವ ಗಟ್ಟಿಗಿತ್ತಿ.

ಮಲಮಗ ಕರಿಯನಿಗೆ ಚೆಂದದ ಹೆಣ್ಣು ಪುಟ್ಟಸಿದ್ಧಿಯೊಡನೆ ಮದುವೆ ಮಾಡಿಸುವ ಗೋಳೂರಕ್ಕ ಅವರಿಬ್ಬರು ಸಂಸಾರ ಮಾಡಲು ಬಿಡುವುದಿಲ್ಲ. ಆದರೆ ಕರಿಯ ಕಾಯುವಷ್ಟು ದಿನ ಕಾದು ತಾನೇ ಪ್ರಸ್ತ ಮಾಡಿಕೊಂಡಾಗ ಗೋಳೂರಕ್ಕ

---

೧. ಸಾಮ್ತಿ, ಎಂದು ಬಂದೀತೋ ಮಳೆ, ಪು. ೧೧.

೨. ನೇಣು ಹಾಕಿಕೊಂಡವರು, ಎಂದು ಬಂದೀತೋ ಮಳೆ, ಪು. ೪೭.

೩. ಅದೇ.,

೪. ಅದೇ., ಪು. ೪೯.

೫. ಅದೇ., ಪು. ೪೭.

ಸಿಡಿಮಿಡಿಗೊಳ್ಳುತ್ತಾಳೆ. ಸೊಸೆ ಪುಟ್ಟ ಸಿದ್ದಿ ಗರ್ಭಿಣಿಯಾದ ಕೂಡಲೇ ಅವಳ ಸಿಟ್ಟು ಮೇರೆ ಮೀರುತ್ತದೆ. ಒಂದೆಡೆ ತನಗೆ ಕರಿಯ, ಅವನ ಹೆಂಡತಿ ಮರ್ಯಾದೆ ಕೊಡುತ್ತಿಲ್ಲ ಎಂಬ ಸಿಟ್ಟು, ತಾನು ಗರ್ಭ ಧರಿಸದೇ ತಾಯಿಯಾಗಿಲ್ಲವಲ್ಲ ಎಂಬ ಹೊಟ್ಟೆಕಿಚ್ಚಿನಿಂದ ಸೊಸೆ ಪುಟ್ಟಸಿದ್ಧಿಯನ್ನು ನೇಣುಹಾಕಿ ಸೇಡು ತೀರಿಸಿಕೊಳ್ಳುತ್ತಾಳೆ. ಇಲ್ಲಿ ಮಿತಿಮೀರಿದ ಆಕೆಯ ಅಸಹನೆ, ಉದ್ವೇಗ, ಅಹಂ, ಸಮಸ್ಥಿತಿಯಲ್ಲಿರದ ಮಾನಸಿಕ ಸ್ಥಿತಿಯನ್ನು ಗುರುತಿಸಬಹುದು.

ಗಾಳಿಸುದ್ದಿಯಲ್ಲಿ ಹಳ್ಳಿ, ದಿಲ್ಲಿ ಎಲ್ಲಾ ಒಂದೇ. ಅದರಲ್ಲೂ ಹಳ್ಳಿಯಲ್ಲಂತೂ ಅತ್ಯಂತ ವೇಗವಾಗಿ ರೆಕ್ಕೆ ಪುಕ್ಕ ಹಚ್ಚಿಕೊಂಡು ಸುದ್ಧಿ ಹಬ್ಬುತ್ತದೆ. 'ಬದುಕಿರಬಾರದು' ಎಂಬ ಕತೆಯಲ್ಲಿನ ಕಥಾನಾಯಕನ ತಾಯಿಯೇ ಸುಳ್ಳು ಸುದ್ಧಿ ಹಬ್ಬಿಸುವುದರಲ್ಲಿ ಯಶಸ್ವಿಯಾಗುತ್ತಾಳೆ. ಊರಿಗೆ ಬಂದ ಮೇಸ್ತ್ರ ಮಗಳ ಮೇಲೆ ಇಲ್ಲ ಸಲ್ಲದ ಸುದ್ಧಿ ಹಬ್ಬಿಸಿ ಅವರು ಮಾನಕ್ಕೆ ಹೆದರಿ ಊರುಬಿಟ್ಟು ಹೊರಡುತ್ತಾರೆ. ಒಂದು ಚಾಡಿ ಮಾತಿನಿಂದ ಕುಟುಂಬವೊಂದು ಅತಂತ್ರ ಪರಿಸ್ಥಿತಿಗೆ ಸಿಲುಕುವುದನ್ನು ಕಾಣಬಹುದು.

ಸಾಮಾನ್ಯವಾಗಿ ಈ ಅಧ್ಯಯನದಲ್ಲಿ ಸಾಮಾನ್ಯವಾಗಿ ಕಂಡುಕೊಂಡ ಸುದ್ಧಿಯೆಂದರೆ ಮನೆಪಾಲಾಗುವುದರಲ್ಲಿ, ಅಣ್ಣತಮ್ಮಂದಿರ ವೈಷಮ್ಯಕ್ಕೆ ಅವರ ಹೆಂಡತಿಯರೇ ಕಾರಣವಾಗಿರುವುದನ್ನು ಕಂಡುಕೊಳ್ಳಲಾಯಿತು. 'ಗೂಡು' ಕತೆಯಲ್ಲಿನ ಸಿದ್ಧಣ್ಣನ ಹೆಂಡತಿ ಈರಿ ಮನೆಗೆಲಸದಲ್ಲಿ, ವಾರಗಿತ್ತಿಯ ಮಕ್ಕಳ ಆರೈಕೆಯಲ್ಲಿ ತುಂಬಾ ಸಾಕಾಗುತ್ತಾಳೆ. ಆ ಬೇಸರ, ಸಿಟ್ಟು ಗಂಡನ ಮುಂದೆ ಆಗಾಗ್ಗೆ ವ್ಯಕ್ತವಾಗುತ್ತದೆ. "ಯಲ್ಲಾನೂ ನಾನೇ ಮಾಡ್ಬೇಕು ಗುಲಾಮ್‌ಗಿತ್ತಿಯಂಗೆ ಅವ್ಳು ಮಾತ್ರ ಕುಂತಿರ್ತಳೆ ಮಾರಾಡಿಯಂಗೆ"[೧] ಎಂದು ವಟಗುಟ್ಟುತ್ತಿರುತ್ತಾಳೆ. ಒಂದು ಕುಟುಂಬ ಅಂದ ಮೇಲೆ ಸಣ್ಣಪುಟ್ಟ ಕೆಲಸ ಇದ್ದದ್ದೇ. ಆದರೆ ಇತ್ತೀಚಿನ ದಿನಗಳಲ್ಲಿ ಹೆಂಗಸರು ಕಷ್ಟಕ್ಕೆ ಹೆದರುವುದನ್ನು ಕಾಣಬಹುದು. "ವತಾರೆಯಿಂದ ಸಂದೆಗಂಟ ಮಾಡೀ ಮಾಡೀ ಮೈ ಬಿದ್ದೋಯ್ತದೆ ನಂಗೆ. ಇವುಳ್ಗೆ, ಇವ್ಳ್ ಗಂಡುನ್ಗೆ, ಇವ್ಳ್ ಮಕ್ಕುಳ್ಗೆ, ಯಲ್ಲಾರ್ಗೂ ಮಾಡಕೋದು ನನ್‌ಕೈಲಿ ಆಯ್ಕಿಲ್ಲ, ಅಲ್ಲಾ, ಇದ್ಯಾವ ಗಾಚಾರ ಅಂತೀನಿ ನಂಗೆ? ಆ?"[೨] ಎಂದು ಸಿಡಿಮಿಡಿಗೊಳ್ಳುತ್ತಿರುತ್ತಾಳೆ. ತನ್ನ ಗಂಡ ತಾನು ಮಾತ್ರ ದುಡಿಯುತ್ತಿರುವುದು, ಬಾವ, ವಾರಗಿತ್ತಿ ಮನೆಯಲ್ಲೇ ಸುಖವಾಗಿರುವುದನ್ನು ಕಂಡು

---

೧. ಗೂಡು, ಎಂದು ಬಂದೀತೋ ಮಳೆ, ಪು. ೧೬.
೨. ಅದೇ., ಪು. ೧೮.

ಕೆಲಸದ ತಾರತಮ್ಯವನ್ನು ಕುರಿತು ಪ್ರಶ್ನೆ ಎತ್ತಿ ಅಂತಿಮವಾಗಿ ಗಂಡ ಪಾಲುಕೇಳಲು ಕಾರಣೀಭೂತಳಾಗುತ್ತಾಳೆ.

ಇಂತಹ ಸ್ತ್ರೀ ಪಾತ್ರಗಳ ಜೊತೆಗೆ ಎಲ್ಲಾ ಗ್ರಾಮೀಣ ಸ್ತ್ರೀಯರು ಮನೆ ಎರಡು ಮಾಡುವವರೇ ಆಗಿರುವುದಿಲ್ಲ ಎಂಬ ಪಾತ್ರಗಳೂ ಇವೆ. ಗಂಡನ ಆಜ್ಞೆಗೆ ಶಿರಸಾಬಾಗಿ ನಡೆಯುವ ಸಾಂಪ್ರದಾಯಕ ಪಾತ್ರಗಳನ್ನು 'ಚೆಲ್ಲು ಹೆಗ್ಗಣ' ಕತೆಯಲ್ಲಿನ ಗೌರಮ್ಮನ ಪಾತ್ರದಲ್ಲಿ ಕಾಣಬಹುದು. ಶಿವನೇಗೌಡರ ಪತ್ನಿ ಗೌರಮ್ಮ ಸಾಧ್ವಿ, ಮೃದು ಸ್ವಭಾವವುಳ್ಳವಳು. ಒಬ್ಬನೇ ಮಗನೆಂದು ಕೊರಗುವ ಗಂಡನಿಗೆ ಮರುನುಡಿಯದ ಪಾತ್ರಧಾರಿ. ಗಂಡ... ಆ ದೇವ್ರು ನನಗೆ ಒಂದು ಮಗ ಕೊಟ್ರು ಪರವಾಗ್ಲಿಲ್ಲ, ನನ್ನ ಮಗಂಗೆ ನಾಲ್ಕು ಮಕ್ಳನ್ನು ಕೊಟ್ಟವನಲ್ಲ ಅಷ್ಟೇ ಸಾಕು ಎಂದು ನೆಮ್ಮದಿಯಾಗಿ ಪ್ರಾಣಬಿಟ್ಟ ಕೆಲವೇ ತಿಂಗಳ ಅಂತರದಲ್ಲಿ ತಾನು ಪ್ರಯಾಣ ಮಾಡುತ್ತಾಳೆ. ಇಂಥ ಸ್ತ್ರೀಯರ ಚಿತ್ರಣ ರಾಮಣ್ಣನವರ ಕತೆಗಳಲ್ಲಿ ಬೆರಳೆಣಿಕೆಯಷ್ಟನ್ನು ಮಾತ್ರ ಕಾಣಬಹುದಾಗಿದೆ. ಇದೇ ಕತೆಯಲ್ಲಿನ ನಾಲ್ವರು ಸೊಸೆಯಂದಿರು ಪರಸ್ಪರರನ್ನು ದೂಷಣೆ ಮಾಡುತ್ತಾ ಹೆಗ್ಗಣದಂತೆ ಮನೆಯಲ್ಲಿ ಇದ್ದೇ ಗುಳಿ ತೋಡಿ ಗಟ್ಟಿಯಾದ ಸಂಸಾರವನ್ನು ಜೊಳ್ಳು ಭತ್ತದಂತೆ ಮಾಡುತ್ತಾರೆ. ಪೆಟ್ಟಿಗೆ ತುಂಬ ತುಂಬಿದ ಭತ್ತದ ರಾಶಿ ನಾಲ್ಕು ಪಾಲಾಗಿ ಗೌಡರ ಮನಸ್ಸು ಭಾರ ಆಗುವಂತೆ ಮಾಡುತ್ತಾರೆ. ಮೊದಲ ಸೊಸೆ ಈರವ್ವ ಅಂತೂ ಭತ್ತ ಅಳೆಯುವಾಗ ಎರಡೂವರೆ ಮೂಟೆ ಕಡಿಮೆ ಬಂದಾಗ ಬಾಯಿ ಬೊಂಬಾಯಿ ಮಾಡುತ್ತಾಳೆ. "ಅವರ ಮಕ್ಕಳ ತಿನ್ಕಂಡೋಗ, ತುಂಬಿದ ಮನೆ ಮುರೀಬೇಕು ಅಂತ ಎಷ್ಟು ದಿನ್‌ದಿಂದ ಕಾಯ್ಕೊಂಡಿದ್ರೊ, ಅವ್ರ ಹಿಟ್ಟು ಬೆಲ್ವಾಗ ಅವ್ರ ಅಂಬ್ಲಿ ಪಾಯಸವಾಗ, ಅವ್ರ ಕಂಬ್ಳಿ ಕಚ್ಚೆಪವ್ಡಿ ಆಗ, ಅವ್ರ ಗಂಡನ ತಿನ್ಕಂಡು ಹೆಗಲಿಗೆ ಚಡ್ಡಿ ಹಾಕ್ಕಂಡು ಅವ್ರು ಏಳುರಾಗೆ ಹೋಗಿ ಗೋಳೂರಾಡೆ ಬರ, ಅವ್ರ ಮನೆ ಎಕ್ಕುಟ್ಟೋಗ........"[೧] ಎಂದು ಹಿಡಿಶಾಪ ಹಾಕುತ್ತಾಳೆ. ಅಲ್ಲಿ ಹಿರಿಯ ಜನ ಪಂಚಾಯ್ತಿದಾರರು, ಆಳುಕಾಳುಗಳು ಇದ್ದಾರೆ ಎಂಬ ಅರಿವೂ ಅವರಿಗಾಗದೆ ಮನದಾಳದ ಮಾತನ್ನು ಆಡಲು ಹಿಂಜರಿಯದ ಸ್ವಭಾವವನ್ನು ಗುರುತಿಸಬಹುದು.

ಸ್ತ್ರೀಶೋಷಣೆ ವಿಷಯ ಕುರಿತು ಬರೆಯದ ಕತೆಗಾರರು ಸಾಮಾನ್ಯವಾಗಿ ಸಿಗುವುದಿಲ್ಲ. ಎಲ್ಲರಿಗೂ ಹೆಣ್ಣಿಗಾದ ಅನ್ಯಾಯ ಕಾಡುತ್ತಲೇ ಇರುತ್ತವೆ. ಹಾಗೆಯೇ ರಾಮಣ್ಣನವರ 'ಕಾರ್ಗತ್ತಲು ಕವಿದಿತ್ತು' ಕತೆಯಲ್ಲಿಯೂ ಅಂತಹುದೇ ಶೋಷಣೆ-

---

೧. ಚೆಲ್ಲು ಹೆಗ್ಗಣ, ಎಂದು ಬಂದಿತೋ ಮಳೆ, ಪು. ೩೭–೩೮.

ಗೊಳಗಾದ ಹೆಣ್ಣಿನ ಪಾತ್ರ ಕಂಡುಬರುತ್ತದೆ. ಒಬ್ಬ ಶ್ರೀಮಂತ ವ್ಯಕ್ತಿ ಪ್ರೀತಿ ಪ್ರೇಮದ ಹೆಸರಿನಲ್ಲಿ ವಂಚಿಸಿ ಅವಳನ್ನು ಹಾದಿಗೆ ತಳ್ಳುತ್ತಾನೆ. ಅವಳು ವಂಚನೆಗೆ ಪ್ರತಿಯಾಗಿ ಯಾವುದೇ ಪ್ರತಿರೋಧ ವ್ಯಕ್ತಪಡಿಸುವುದಿಲ್ಲ. ಬದಲಾಗಿ ಪರಪುರುಷರು ಸಮಾಜದ ದೌರ್ಜನ್ಯಕ್ಕೆ ಮತ್ತಷ್ಟು ಒಳಗಾಗಿ ಅಂತಿಮವಾಗಿ ತನ್ನನ್ನು ವಂಚಿಸಿದವನ ಮನೆಯ ಮುಂದೆಯೇ ಬಂದು ಪ್ರಾಣಬಿಡುತ್ತಾಳೆ. ಆ ನಂತರದಲ್ಲಿ ರಾಯರಿಗೆ ಪಶ್ಚಾತ್ತಾಪವಾಗಿ, ತಪ್ಪಿನ ಅರಿವಾಗುವಷ್ಟರಲ್ಲಿ ಅವಳು ಮಣ್ಣಿಗೆ ಸೇರುತ್ತಾಳೆ.

ಈ ಕತೆಯಲ್ಲಿ ಸ್ತ್ರೀಯರ ಅಸಹಾಯಕತೆಯ ದುರುಪಯೋಗವನ್ನು ಸಮಾಜದ ಬಲಿಷ್ಟರು ಹೇಗೆ ಪಡೆದುಕೊಳ್ಳುತ್ತಾರೆ ಎಂಬುದಕ್ಕೆ ಜಯಂತಿಯ ಧಾರುಣ ಸಾವು ಪ್ರತ್ಯಕ್ಷ ಸಾಕ್ಷಿಯಾಗುತ್ತವೆ.

ಶೋಷಣೆ, ಮೋಸ, ವಂಚನೆಗೆ ಕೇವಲ ಹೆಣ್ಣುಮಕ್ಕಳು ಮಾತ್ರ ಒಳಗಾಗುವುದಿಲ್ಲ. ಜೊತೆಗೆ ಅಮಾಯಕ ಗಂಡಸರು ಕುಟಿಲ ತಂತ್ರಕ್ಕೆ ಒಳಗಾಗುತ್ತಾರೆ ಎಂಬುದನ್ನು ರಾಮಣ್ಣನವರ 'ಮೂರನೆಯವಳು' ಕತೆಯಲ್ಲಿ ಕಾಣಬಹುದು. ಈ ಕತೆಯಲ್ಲಿನ ರೀಟಾ ಕಾಲೇಜಿನ ದಿನಗಳಲ್ಲಿ ಹಾದಿಯಲ್ಲಿ ಕಥಾನಾಯಕನಿಗೆ ಸಿಕ್ಕಿ ಹಣ, ಚಿನ್ನಕ್ಕಾಗಿ ತನ್ನ ಯೌವ್ವನವನ್ನು ಮಾರಾಟಕ್ಕಿಟ್ಟು ಆಟವಾಡುತ್ತಾಳೆ. ನಂತರದಲ್ಲಿ ಪರಿಚಯವಾದ ಹಳ್ಳಿ ಹುಡುಗಿ ಶಾಂತಾಳ ಪರಿಚಯವಾಗುತ್ತವೆ. ನೋಡಿದರೆ ಶಾಂತಾಳು ಕೂಡ ಶಂಕರನ ಹಣ, ಚಿನ್ನವನ್ನು ಬಳಸಿಕೊಂಡವಳೇ. ಆದರೆ ಮುಂದಿನ ಭವಿಷ್ಯದ ಸಾಫಲ್ಯಕ್ಕೆ ತಂದೆತಾಯಿ ತೋರಿಸಿದ ಹುಡುಗನನ್ನು ವರಿಸಲು ಇಚ್ಚಿಸುತ್ತಾಳೆ. ಈಕೆಗೆ ಪ್ರೀತಿ, ಪ್ರೇಮ ಮುಖ್ಯವಾಗಿ ಕಾಡದೆ ಮುಂದಿನ ಭವಿಷ್ಯ ಬದುಕು ಮುಖ್ಯವಾಗಿಬಿಡುತ್ತದೆ.

ಹೆಣ್ಣು ಮೃದುಸ್ವಭಾವಿ ಒಳ್ಳೆಯತನವನ್ನು ಮೈಗೂಡಿಸಿಕೊಂಡವಳು ಎಂಬುದಾಗಿ ನಾವು ಬಹುತೇಕ ಎಂದುಕೊಂಡಿದ್ದರೂ ಅಪವಾದವೆಂಬಂತೆ "ಹೆಣ್ಣು ತಂದ ಹಣ್ಣಿನ ರಸ' ಕತೆಯಲ್ಲಿನ ಕಳ್ಳಭಟ್ಟಿ ತಯಾರಿಸುವ ಹೆಣ್ಣು ಕಂಡುಬರುತ್ತಾಳೆ. ಕಳ್ಳಭಟ್ಟಿಯ ಜನರನ್ನು ಹಿಡಿದುಕೊಳ್ಳಲು ಬಂದ ಆದರ್ಶ ಯುವಕ ಶಂಕರನನ್ನೇ ಪೋಲೀಸರ ಕೈಯಲ್ಲಿ ಹಿಡಿಸಲು ಹೊರಟುಬಿಡುತ್ತಾಳೆ. ತನಿಖೆ ತಪಾಸಣೆಗೆ ಬಂದ ಪೋಲೀಸ್ ಇನ್ಸ್‌ಪೆಕ್ಟರನ್ನೇ ಮರಳು ಮಾತುಗಳಿಂದ ಓಲೈಸಿಕೊಂಡು ಅವನನ್ನು ಸ್ಪರ್ಶಸುಖದಲ್ಲಿ, ಮದ್ಯ ಕುಡಿಸುವುದರಲ್ಲಿ ತೊಡಗಿಸಿಕೊಂಡು ಅಧಿಕಾರಿ ಬಂದ ಕಾರ್ಯವನ್ನೇ ಮರೆತುಬಿಡಲು ಯಶಸ್ವಿಯಾಗುತ್ತಾಳೆ. ಇಲ್ಲಿ ಹೆಣ್ಣಿನ ಚಾಕಚಕ್ಯತೆ, ಚೂಟಿತನ ಇಂತಹ ಮನೆಹಾಳು ಕೆಲಸಕ್ಕೆ ವ್ಯಯವಾಗುವುದನ್ನು ಈ ಕತೆಯಲ್ಲಿ ನೋಡಬಹುದು.

ಕ್ಯಾತನಹಳ್ಳಿ ರಾಮಣ್ಣನವರ ಕತೆಗಳಲ್ಲಿ ಆದರ್ಶ ವಿದ್ಯಾವಂತ ಯುವತಿಯ ಚಿತ್ರಣ ಕೆಲವು ಕತೆಗಳಲ್ಲಿ ಮಾತ್ರ ವ್ಯಕ್ತಗೊಂಡಿವೆ. ಹೆಣ್ಣಿನ ಗೀಳನ್ನು ಮನಸ್ಸಿಗೆ ಹಚ್ಚಿಕೊಂಡು ವಿದ್ಯಾಭ್ಯಾಸದಿಂದ ವಿಮುಖನಾದ ಹುಡುಗನೊಬ್ಬ ಮನಃಶಾಸ್ತ್ರದಲ್ಲಿ ಎಂ.ಎ. ಮಾಡಿದ ರೇಣುಕಾ ಎಂಬಾಕೆಯ ಮಾತಿನಿಂದ ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತಾನೆ. ಹೆಣ್ಣು ಮನಸ್ಸು ಮಾಡಿದರೆ ಹೇಗೆ ವ್ಯಕ್ತಿಯನ್ನು ಬದಲಾಯಿಸಬಹುದೆಂಬುದು ಇಲ್ಲಿ ವ್ಯಕ್ತವಾಗಿದೆ.

'ತಾಯಿಯಂತೆ ಮಗಳು ನೂಲಿನಂತೆ ಸೀರೆ' ಎಂಬ ಮಾತಿದೆ. ಸಂಸ್ಕಾರವಂತ ತಾಯಿ ಸಂಸ್ಕಾರವಂತ ಮಗಳನ್ನು ಬೆಳೆಸುತ್ತಾಳೆ. 'ಎಂದು ಬಂದೀತೋ ಮಳೆ' ಕತೆಯಲ್ಲಿನ ತಾಯಿ, ಮಗಳದು ಸಂಶಯಪೂರಿತ ನಡೆ. ತಾಯಿಯು ಗಂಡ ದ್ಯಾವಯ್ಯನಿಂದ ಮರುಳುಮಾಡಿ ಆಸ್ತಿಯನ್ನು ತನ್ನ ಹೆಸರಿಗೆ ಬರೆಸಿಕೊಳ್ಳುತ್ತಾಳೆ. ಗ್ರಾಮದಲ್ಲಿ ಅನೇಕ ಜನರೊಡನೆ ಸ್ನೇಹವಿರಿಸಿಕೊಂಡಿರುತ್ತಾಳೆ. ಜಾತ್ರೆಯ ಸಂದರ್ಭದಲ್ಲಿ ಮಗಳಿಗೆ ಗೊತ್ತಾದ ಗಂಡಿನ ಬೆನ್ನಿಗೆ ಒತ್ತಿಕೊಂಡು ನಡೆಯುತ್ತಾಳೆ. ಇಷ್ಟಲ್ಲದೆ ಜಾತ್ರೆಯ ಆವರಣದ ಹೊರವಲಯದಲ್ಲಿ ಮರಗಳ ಮರೆಯಿಂದ ಗಂಡಸಿನೊಡನೆ ಎದ್ದುಬರುತ್ತಾಳೆ. ಊರಿನಲ್ಲಿಯು ಒಳ್ಳೆಯ ಹೆಸರಿಲ್ಲದೆ ಹೆಸರು ಕೆಡಿಸಿಕೊಂಡಿರುತ್ತಾಳೆ. ಇನ್ನೂ ಮದುವೆ ನಿಶ್ಚಯವಾಗಿರದ ಹುಡುಗನೊಡನೆ ಮಗಳನ್ನು ಸ್ವತಂತ್ರವಾಗಿ ಇರಲುಬಿಡುತ್ತಾಳೆ. ಜೊತೆಗೆ ಮಗಳನ್ನು ಹುಡುಗನಿಗೆ ಬೆನ್ನು ಉಜ್ಜಲು ಕಳಿಸುತ್ತಾಳೆ. ಇನ್ನು ಮಗಳು ಕೂಡ ತಾಯಿಯ ನಡತೆಯುಳ್ಳವಳೇ. ಮನೆಗೆ ಬಂದ ಗಂಡಿನೊಡನೆ ಯಾವುದೇ ಸಂಕೋಚ, ನಾಚಿಕೆಯಿಲ್ಲದೇ ಬಳಿ ಸಾರಿ ಸದರದಿಂದ ವರ್ತಿಸುತ್ತಾಳೆ. ಮದುವೆಯಾದ ನಂತರವೂ ಗಂಡನನ್ನು ಹೊಲಕ್ಕೆ ಕಳುಹಿಸಿ ತನ್ನ ತಾಯಿಗೆ ಊಟ ಕೊಂಡೊಯ್ಯುವಂತೆ ಮಾಡುತ್ತಾಳೆ. ಮನೆಗೆ ಬಂದ ಗಂಡನಿಗೆ ಹೊಸ ಚಪ್ಪಲಿಗಳು ಮನೆಯ ಹೊರಗೆ ಗೋಚರಿಸುತ್ತವೆ. ಈ ಕತೆಯಲ್ಲಿನ ಸ್ತ್ರೀ ಪಾತ್ರಗಳಿಗೆ ಶೀಲ, ಅಶ್ಲೀಲ, ಮಾನ, ಅಪಮಾನದ ಪ್ರಶ್ನೆಯೇ ಕಾಡುವುದಿಲ್ಲ. ನಿರ್ಭಿಡೆಯ ಮಹಿಳಾ ಪಾತ್ರ ಚಿತ್ರಣವನ್ನಿಲ್ಲಿ ಕಾಣಬಹುದಾಗಿದೆ.

ಆಧುನಿಕ ಕನ್ನಡ ಕಥಾಸಾಹಿತ್ಯ ಪರಂಪರೆಯನ್ನು ಗಮನಿಸಿದಾಗ ಮೊದಲ ತಲೆಮಾರಿನ ಲೇಖಕರುಗಳನ್ನೆಲ್ಲಾ ಕಾಡುವ ಸಮಸ್ಯೆ ಎಂದರೆ ವಿಧವಾ ಸಮಸ್ಯೆ, ವಿಧವೆಯ ಪುನರ್‌ವಿವಾಹ. ಕ್ಯಾತನಹಳ್ಳಿ ರಾಮಣ್ಣನವರು ಕೂಡ ಈ ಕುರಿತಾದ ಕತೆಯನ್ನು 'ಹೊತ್ತು ಮುಳುಗುವ ಹೊತ್ತು' ಕತೆಯಲ್ಲಿ ಪಡಿಮೂಡಿಸಿದ್ದಾರೆ. ವಿಧವೆಯರ ಒಂಟಿತನ, ಹಾತೊರೆತ, ಏಕಾಂಗಿಯಾಗಿ ಸಂಸಾರದ ಜವಾಬ್ದಾರಿಯನ್ನು

ನಿಬಾಯಿಸುವ ಚಾಣಾಕ್ಷತನವನ್ನು ಇಲ್ಲಿ ಕಾಣಬಹುದು. ಮಧ್ಯವಯಸ್ಸಿನ ಮಹಿಳೆಯರಿಗೆ ಆಕರ್ಷಣೆ ಕೂಗಿ ಕರೆದರೂ, ಮಕ್ಕಳನ್ನು ಸಾಕುವುದರಲ್ಲಿಯೇ ಜೀವನ ವ್ಯಯಿಸುವುದನ್ನು ಕಾಣಬಹುದು.

೩) ಗ್ರಾಮ್ಯ ಜೀವನ: ರೈತನೆ ದೇಶದ ಬೆನ್ನೆಲುಬು. ಗ್ರಾಮ್ಯ ಜನಜೀವನದ ಸಾಮಾನ್ಯ ರೈತ ಕುಟುಂಬದಲ್ಲಿ ಬೆಳೆದ ರಾಮಣ್ಣನವರ ಕಥೆಗಳು ಹೆಚ್ಚಾಗಿ ಆಚರಣೆಗಳು, ಸಂಪ್ರದಾಯ, ಆಚಾರ-ವಿಚಾರ, ಸಂಬಂಧಗಳು. ರೈತಾಪಿ ಬದುಕು ಹೀಗೆ ಹಲವಾರು ಆಚರಣೆಗಳನ್ನು ಬಿಂಬಿಸುತ್ತವೆ.

"ಸಾಮ್ತಿ' ಕಥೆಯಲ್ಲಿ ಹಳ್ಳಿಗಾಡಿನವರೂ ತಾವು ಕಂಡಿರದಿದ್ದರೂ ಕೇಳಿದ ದೆವ್ವ ಪಿಶಾಚಿಗಳ ಕತೆಗೆ ಹುಳಿ, ಉಪ್ಪು, ಖಾರ ಹಚ್ಚಿ, ಉಳಿದವರಲ್ಲಿ ಭೀತಿ ಬಿತ್ತುವುದನ್ನು ಕಟ್ಟಡ, ಕೆರೆ ಕಟ್ಟುವಾಗ, ಧಾನ್ಯ ಒಕ್ಕುವಾಗ ರಾಹು ಬಡಿಯುವುದುಂಟು. ಅದಕ್ಕೆ ಪ್ರಾಣಿಬಲಿ ಕೊಟ್ಟು ಶಾಂತಿ ಮಾಡಬೇಕು ಎಂಬ ಮೂಢನಂಬಿಕೆಯನ್ನು ಅಂಥ ಮೂಢನಂಬಿಕೆಯ ಸಂಕೇತವಾದ 'ಸಾಮ್ತಿ' ಕಾರ್ಯಕ್ಕೆ ಅಲ್ಲಿಯವರೆಗೂ ಅನ್ಯರ ಚಾಡಿ ಮಾತುಗಳಿಂದ ದೂರವಿದ್ದ ತಮ್ಮ ವೈಮನಸ್ಸನ್ನು ಮರೆತು ಅದರಲ್ಲಿ ಪಾಲುಗೊಳ್ಳುವುದನ್ನು ಮೇಲಾಗಿ ಹಳ್ಳಿಗಾಡಿನ ಜನಗಳು ಎಷ್ಟೇ ಕಚ್ಚಾಟ ಕಿತ್ತಾಟಗಳಿದ್ದರೂ ಹಬ್ಬ-ಹರಿದಿನ, ಸ್ವಾಮಿಕಾರ್ಯ ಎಂದ ಕ್ಷಣ ಹೇಗೆ ಎಲ್ಲವನ್ನೂ ಮರೆತು ಪಾಲುಗೊಳ್ಳುತ್ತಾರೆ ಎಂಬ ಸತ್ಯವನ್ನು ನಾವಿಲ್ಲಿ ನೋಡಬಹುದು. ಮರಿಯನ್ನು ಬಲಿಕೊಟ್ಟಿದ್ದರಿಂದ ರಾಹುವಿಗೆ ಶಾಂತಿಯಾಯಿತು, ಇನ್ನು ಭಯವಿಲ್ಲ ಎಂಬ ಮಾತಿನ ಹಿಂದೆ ತಮ್ಮನಲ್ಲಿ ಮನೆಮಾಡಿಕೊಂಡಿದ್ದ ಕೆಟ್ಟ ಭಾವನೆಯ ವೈಮನಸ್ಯ ರಾಹುವಿಗೂ ಶಾಂತಿಯಾಗಿ ಸಾಮರಸ್ಯ ಮೂಡಿತು ಎಂಬ ನೆಮ್ಮದಿ ಸಿಗುತ್ತದೆ. ಸಾಲದೆಂಬಂತೆ ಅಣ್ಣನಿಂದ ಸಿಡಿದು ಕೋಪಿಸಿಕೊಂಡು ದೂರವಾಗಿದ್ದ ತಮ್ಮನ ಕೈಯಿಂದಲೇ ಬಲಿಕೊಡಬೇಕಾದ ಮರಿಯನ್ನು ಕತ್ತರಿಸಿರುವುದು ಅರ್ಥಪೂರ್ಣವಾಗಿ ಮೂಡಿಬಂದಿದೆ. ಮರಿಯನ್ನು ಕತ್ತರಿಸಿ ಕ್ಷಣದಲ್ಲಿ ನೆಲಕ್ಕೆ ಬಿಸಾಕುತ್ತಾನೆ. ಕೊಡಲಿಯನ್ನು ಕೆಳಗೆ ಹಾಕುತ್ತಾನೆ. ಅಲ್ಲಿ ಇದರರ್ಥ ತಮ್ಮಿಬ್ಬರ ಮಧ್ಯೆ ಅಡ್ಡವಾಗಿ ನಿಂತಿದ್ದ ವೈಮನಸ್ಸನ್ನು ಕತ್ತರಿಸಿ ಒಂದಾದರೂ ಎಂಬುದಕ್ಕೆ ಅದು ಸಂಕೇತವಾಗುತ್ತದೆ.

ಇಲ್ಲಿ ಬೇರೆಯವರು ತಮ್ಮ ಸ್ವಾರ್ಥಕ್ಕಾಗಿ ಅಣ್ಣ-ತಮ್ಮಂದಿರನ್ನು ದೂರಮಾಡುತ್ತಾರೆ. ಅವನಿಗೆ ಕೆಟ್ಟಚಟಗಳನ್ನು ಮೈಗೂಡಿಸಿ ಕಂಠಪೂರ್ತಿ ಕುಡಿಯುವಂತೆ ಅಭ್ಯಾಸ ಮಾಡಿಸುತ್ತಾರೆ. ಕೊನೆಕೊನೆಗೆ ಹೆಂಡತಿಯು ಸಹ ಅವನನ್ನು ಹೆದರಿಸಿಕೊಳ್ಳುತ್ತಾಳೆ. ಅಣ್ಣನ ಗದ್ದೆಯಲ್ಲಿ ಸಾಮ್ತಿ ಕಾರ್ಯ ನಡೆಯುತ್ತಿರುವಾಗ ಇವನನ್ನು

ಕರೆಯಲು ಅಣ್ಣನ ಮಗ ಬರುತ್ತಾನೆ. ಆಗ ಚಿಕ್ಕಮ್ಮ ಇವನನ್ನು ಎಬ್ಬಿಸಲು ಬಿಡುವುದಿಲ್ಲ. ತನ್ನ ಚಿಕ್ಕಪ್ಪನು ಬರುವುದಿಲ್ಲ ಎಂದು ತಿಳಿದಾಗ ಬಹಳ ದುಃಖದಲ್ಲಿಯೇ ಅಲ್ಲಿಂದ ಹೊರಡುತ್ತಾನೆ. ಅಲ್ಲಿ ಇವನಿಗೆ ಎಚ್ಚರವಿದ್ದರೂ ಇವಳು ಹೋಗಲು ಬಿಡುವುದಿಲ್ಲ ಎಂದು ಅವಳು ಒಳಗೇ ಹೋದ ಮೇಲೆ ಹೋದರಾಯಿತೆಂದು ಬಸವೇಗೌಡ ಸುಮ್ಮನಾಗುತ್ತಾನೆ. ಇಲ್ಲಿ ತಮ್ಮ ಈ ಕಾರ್ಯಕ್ಕೆ ಬರುವುದಿಲ್ಲ ಎಂದು ತಿಳಿದು ಒಲ್ಲದ ಮನಸ್ಸಿನಿಂದಲೇ ಅಣ್ಣ ಅಲ್ಲಿಯ ಕೆಲಸವನ್ನು ಮಾಡಿಸುತ್ತಿರುತ್ತಾನೆ. ತನ್ನ ರಕ್ತ ಹಂಚಿಕೊಂಡು ಹುಟ್ಟಿದ ತಮ್ಮನ ಬರುವಿಕೆಗಾಗಿಯೇ ಕಾಯುತ್ತಿರುತ್ತಾರೆ. ಆಗ ಇವರ ಆಸೆಯಂತೆ ತಮ್ಮ ಬಸವೇಗೌಡ ಅಲ್ಲಿಗೆ ಬರುತ್ತಾನೆ. ಮಾದೇಗೌಡರು ಬಹಳ ಸಂತೋಷದಿಂದ ಬರಮಾಡಿಕೊಳ್ಳುತ್ತಾರೆ. ಅವನ ಆಗಮನದಿಂದ ಉತ್ಸಾಹದ ಚಿಲುಮೆಯಾಗಿ ಬೇಗ ಬೇಗ ಕೆಲಸ ಮಾಡಿಸುತ್ತಿರುತ್ತಾರೆ. ಕೊನೆಗೆ ಪ್ರಾಣಿಬಲಿಯನ್ನು ತಮ್ಮನ ಕೈಯಲ್ಲಿ ಮಾಡಿಸಿ ಬಾಡೂಟವನ್ನು ಎಲ್ಲರ ಜೊತೆ ಸೇರಿ ಮಾಡುತ್ತಾರೆ. ಬೇರಾದ ಅಣ್ಣ–ತಮ್ಮಂದಿರು ಮತ್ತೆ ಒಂದಾಗುತ್ತಾರೆ. ಹಳ್ಳಿ ಜನ ದ್ವೇಷ, ಅಸೂಯೆ ಎಲ್ಲವನ್ನೂ ಬಹಳ ಬೇಗ ಮರೆಯುತ್ತಾರೆ. ಪ್ರೀತಿಗೆ ಬಹಳ ಬೇಗ ಒಲಿಯುತ್ತಾರೆ ಎಂಬುದಿಲ್ಲಿ ವ್ಯಕ್ತವಾಗಿದೆ.

ಈ ಕತೆಯಲ್ಲಿ ಮತ್ತೆ ವ್ಯಕ್ತವಾಗುವ ಗ್ರಾಮ್ಯಜೀವನ ಚಿತ್ರಣವೆಂದರೆ ದೆವ್ವಭೂತಗಳ ಪ್ರಸಂಗ ಕತ್ತಲಲ್ಲಿ ನೆರಳು, ಶಬ್ದಗಳು ವಿಚಿತ್ರವಾಗಿ ಕಂಡು ಅವುಗಳನ್ನೇ ದೆವ್ವ, ರಾವು ಎಂದು ಕರೆಯುವುದು. 'ಇಲಿ ಹೋಯ್ತು ಅಂದ್ರೆ ಹುಲಿ ಹೋಯ್ತು' ಅಂತ ಹೆದರಿ ಒದ್ದಾಡುವುದನ್ನು ಕಾಣಬಹುದು. ಮತ್ತೆ ಕೆಲವು ತುಂಟ ಕಿಡಿಗೇಡಿಗಳು ಬಾಡೂಟದ ಆಸೆಗಾಗಿ ರಾವಿಗೆ ಬಲಿ ಕೊಡ್ಬೇಕು ಅಂತ ಹೆದರಿಸಿ ಬಾಡೂಟದ ಲಾಭಪಡೆಯುವುದು, ಹಳ್ಳಿಯಲ್ಲಿ ನಡೆಯುವ ಹಾಸ್ಯಪ್ರಸಂಗಗಳನ್ನು 'ಸಾಮ್ಪಿ' ಕತೆಯಲ್ಲಿ ಕಾಣಬಹುದಾಗಿದೆ.

'ಚೆಲ್ಲು ಹೆಗ್ಗಣ' ಕತೆಯಲ್ಲಿ ಗ್ರಾಮೀಣರ ನಂಬಿಕೆ, ಗಾದೆಯಾದ 'ಒಂದು ಮಗು ಮಗು ಅಲ್ಲ, ಒಂದು ಕಣ್ಣು ಕಣ್ಣಲ್ಲ' ಎಂಬುದನ್ನು ಕಾಣಬಹುದು. ಈ ಕತೆಯಲ್ಲಿನ ದೊಡ್ಡಗೌಡರು ತಮ್ಮ ಒಬ್ಬನೇ ಮಗ ಹಿರಿಮಗ ಅನ್ನಿಸ್ಕೊಳ್ಳಿಲ್ಲ ಎಂಬ ಬೇಸರ, ದುಃಖ ಅನುಭವಿಸುತ್ತಾರೆ. ಮಗನಿಗೆ ನಾಲ್ಕು ಮಕ್ಕಳು ಹುಟ್ಟಿದಾಗ ಸಂತಸ, ನೆಮ್ಮದಿ ಹೊಂದಿ ಪ್ರಾಣಬಿಡುತ್ತಾರೆ. ದೊಡ್ಡಗೌಡ್ರ ಮಗ ಎಷ್ಟೇ ಶ್ರೀಮಂತನಾದರೂ ಮನೆಗೆ ಗಾರೆನೆಲ, ಹಾಕಿಸುವುದಿಲ್ಲ. ಕಾರಣ ತನ್ನ ಹಿರೀಕರು ನಡೆದ ಜಾಗ, ಅವರ ಸಂಪ್ರದಾಯ ಮುರಿದಂತೆ ಆಗುತ್ತದೆಂದು ಹಾಗೆಯೇ ತೊಪ್ಪೆ ನೆಲದಲ್ಲಿಯೇ ಕಾಲಕಳೆಯುತ್ತಾನೆ.

ಮತ್ತೆ ಈ ಕತೆಯಲ್ಲಿ ಹಳ್ಳಿಯಲ್ಲಿ ಸೊಸೆಯಂದಿರ ಚಾಡಿ ಮಾತು, ವೈಮನಸ್ಸು, ಪಂಚಾಯ್ತಿ ಪಾಲು ಮುಂತಾದವನ್ನು ಕಾಣಬಹುದು. ಹಿಂದೆ ಗ್ರಾಮೀಣರು ಭತ್ತವನ್ನು ಹೇಗೆ ಶೇಖರಿಸಿ ತುಂಬಾ ದಿನ ಸಂಗ್ರಹಿಸುತ್ತಿದ್ದರು ಎಂಬುದನ್ನು ಭತ್ತದ ಪೆಟ್ಟಿಗೆಯಲ್ಲಿ ಗುರುತಿಸಬಹುದು. "ಹುಟ್ತಾ ಅಣ್ಣತಮ್ಮಂದಿರು ಬೆಳೆಯುತ್ತಾ ದಾಯಾದಿಗಳು" ಎಂಬುದನ್ನಿಲ್ಲಿ ಗಮನಿಸಬಹುದು.

'ಆ ಆರಾಣೆಗಳು' ಕತೆಯು ಬಡಕ್ಷೌರಿಕನ ಹೀನಾಯವಾದ ಬದುಕನ್ನು ತೆರೆದಿಡುತ್ತದೆ. ಕಾಸಿಲ್ಲದ ಗಿರಾಕಿಗಳು ಹೆಚ್ಚು ಆ ಊರಿನಲ್ಲಿ. ದುಡ್ಡಿದವರು ಬಂದರೆ ಆ ದಿನ ಅವರಿಗೆ ಊಟ. ಅವನು ಹೇಗೊ ಒಂದೆರಡು ದಿನ ಹಸಿದು ಜೀವಿಸಬಲ್ಲ. ಆದರೆ ಅವನ ತಾಯಿ ತುಂಬ ವಯಸ್ಸಾದ ಮುದುಕಿ. ಅವಳು ಎಷ್ಟು ದಿನ ಹಸಿವನ್ನು ತಡೆದಾಳೂ? ಅವಳನ್ನು ನೆನೆಸಿಕೊಂಡು ಮೈಯೆಲ್ಲಾ ಹಾಗೆಯೇ ಬಿಸಿಯಾಗ-ತೊಡಗುತ್ತದೆ. ಆದರೆ ಅವನಿಗೆ ಏನು ಮಾಡಲಾಗುವುದಿಲ್ಲ. ಏಕೆಂದರೆ ಬಡವರ ಕೋಪ ದವಡೆಗೆ ಮೂಲ. ಆ ಊರಿನಲ್ಲಿ ನಲವತ್ತಕ್ಕೂ ಹೆಚ್ಚು ಅಡಿದೆ ಕುಳದವರಿದ್ದರು. ಒಂದೊಂದು ಮನೆಯಲ್ಲಿ ಒಂದೊಂದು ತರಹ ಅಡಿಗೆ ದೊರೆಯುತ್ತಿತ್ತು. ಅದು ಆಯಾ ಮನೆಗಳಲ್ಲಿರುವ ಕ್ಷೌರ ಮಾಡಿಸಿಕೊಳ್ಳುವ ತಲೆಗಳನ್ನು ಅವಲಂಬಿಸಿರುತ್ತಿತ್ತು. ಅವನಿಗೆ ವರ್ಷಕ್ಕೆ ಹದಿನೈದು ಘಲ್ಲ ಭತ್ತ ಬರುತ್ತಿತ್ತು. ಅವನಿಗೂ ಮತ್ತು ಅವನ ತಾಯಿಗೂ ಬೇಕಾದಷ್ಟಾಗುತ್ತಿತ್ತು. ಆದರೆ ಆ ವರ್ಷ ಮಳೆ ಬೆಳೆ ಕಡಿಮೆಯಾದ್ದರಿಂದ ಏಳೆಂಟು ಪಲ್ಲ ಮಾತ್ರ ಶೇಖರಿಸಿಟ್ಟ ಜೊತೆ ಏಳೆಂಟು ಪುಂಡ ಸ್ನೇಹಿತರನ್ನು ಸಂಪಾದಿಸಿ ಅವರ ಜೋತೆ ಸೇರಿದ ಮೇಲೆ ಅವರ ಚಟವನ್ನೆಲ್ಲ ಕಲಿತುಕೊಳ್ಳುತ್ತಾನೆ. ಕೆಲವು ಅವನಿಷ್ಟದಂತೆ ಅಂಟಿಕೊಂಡವು. ಶೇಖರಿಸಿದ ಧಾನ್ಯ ಮೂರೇ ತಿಂಗಳಿಗೆ ಮುಗಿದುಹೋಗುತ್ತದೆ. ತಾಯಿ ಎಷ್ಟೇ ಹೇಳಿದರೂ ಅವಳ ಮಾತುಗಳನ್ನು ಕೇಳಲಿಲ್ಲ. ಆ ದಿನ ಯಾರು ಗಿರಾಕಿಗಳಿಲ್ಲದೇ ಕುಳಿತ್ತಿದ್ದಾಗ ಅಲ್ಲಿಗೆ ಚಿಕ್ಕ ಹುಡುಗ ಬಂದು ಕ್ಷೌರ ಮಾಡಣ್ಣಾ ಎಂದಾಗ ದುಡ್ಡು ತಂದಿದ್ದೀಯಾ ಎಂದಾಗ ತಂದಿರುವುದಾಗಿ ಹೇಳಿದ. ಸಂತೋಷದಿಂದ ಬೇಗ ಕ್ಷೌರಮುಗಿಸಿದ ಎಂಟಾಣೆಗೆ ಚಿಲ್ಲರೆ ತಂದು ಎರಡಾಣೆಯನ್ನು ಹುಡುಗನ ಕೈಗೆ ಕೊಟ್ಟು ಕಳುಹಿಸುತ್ತಾನೆ. ತಾಯಿಯ ಆಹಾರಕ್ಕೆ ಹಣವಾಯಿತೆಂದು ಖುಷಿಪಡುತ್ತಾನೆ. ಮತ್ತೆ ಇನ್ಯಾರಾದರೂ ಬರುತ್ತಾರೆಂದು ಕಾಯುತ್ತಿರುವಾಗ ದೂರದಲ್ಲಿ ಒಬ್ಬ ವ್ಯಕ್ತಿ ಬರುವುದು ಕಣ್ಣಿಗೆ ಬೀಳುತ್ತದೆ. ಅಂಗಡಿ ಒಳಗೆ ಎಲ್ಲವನ್ನು ಶುಭ್ರಗೊಳಿಸಿ ಹೊರಗೆ ಬಂದು ನಿಲ್ಲುತ್ತಾನೆ.

ಬಂದವನೆ ಎಷ್ಟು ಹಣ ತೆಗೆದುಕೊಂಡೆ ನನ್ನ ಮಗನ ಹತ್ತಿರ ಎಂದಾಗ ಆರಾಣೆ ಎಂದು ಹೇಳುತ್ತಾನೆ. ಚಿಕ್ಕವರಿಗೂ ಆರಾಣೆಯೇ ಎಂದಾಗ, ಹೌದು ಎನ್ನುತ್ತಾನೆ. ಪಟ್ವಾರಣ್ಣ ಧ್ವನಿ ಏರಿಸಿ ಮತ್ತೆ ಮತ್ತೆ ಕೇಳುತ್ತಿದ್ದಾಗ ಅದೇ ಉತ್ತರವನ್ನೇ ನೀಡುತ್ತಾನೆ. ಆಗ ಪಟ್ವಾರಣ್ಣ ಕಪಾಲಕ್ಕೆ ಹೊಡೆಯುತ್ತಾನೆ. ಅವನು ಹೆದರಿ ಹಿಂದಕ್ಕೆ ಹೋಗುತ್ತಾನೆ. ಅವನು ಭಯದಲ್ಲಿಯೇ ಕ್ಷೌರ ಎಂದರೆ ದೊಡ್ಡವರು ಚಿಕ್ಕವರು ಒಂದೇ ಅಲ್ಲವಾ ಎಂದಾಗ ಮತ್ತೆ ಕಪಾಲಕ್ಕೆ ಒಡೆಯುತ್ತಾನೆ. ಮತ್ತೆ ಅವನ ಹತ್ತಿರ ಇದ್ದ ಆರಾಣೆಯನ್ನು ಕಿತ್ತುಕೊಂಡು ಹೋಗುತ್ತಾನೆ. ಇವನು ಎಷ್ಟೇ ಬೇಡಿದರೂ ಅವನು ಗ್ಯಾದೆಗೆ ಹಣ ನೀಡುವುದಿಲ್ಲ. ಕನ್ನಡಿಯಲ್ಲಿ ಮುಖ ನೋಡಿಕೊಂಡಾಗ ಎರಡು ಕೆನ್ನೆಗಳು ನೀಲಿಗಟ್ಟಿರುತ್ತದೆ. ಕೋಪ, ರೋಷ ಉಕ್ಕಿಬಂದರೂ ಏನು ಮಾಡುವ ಪರಿಸ್ಥಿತಿಯಲ್ಲಿರಲಿಲ್ಲ. ಇಲ್ಲಿ 'ಬಡವನ ಕೋಪ ದವಡೆಗೆ ಮೂಲ' ಎಂಬುದರ ಅರಿವಾಗುತ್ತದೆ. ಇರುವವರು ಇಲ್ಲದವರನ್ನು ಹೇಗೆ ಶೋಷಿಸುತ್ತಾರೆ, ಬಡವರ ಮೇಲೆ ನಡೆಯುವ ದಬ್ಬಾಳಿಕೆ, ಬಡವರ ಕಷ್ಟವನ್ನು ಕೇಳುವವರು ಯಾರು ಇಲ್ಲ ಎಂಬುದಿಲ್ಲಿ ವ್ಯಕ್ತವಾಗಿದೆ.

'ನೇಣು ಹಾಕಿಕೊಂಡವರು' ಕತೆಯಲ್ಲಿ ಹಳ್ಳಿಯ ಗ್ರಾಮ್ಯ ಬದುಕಲ್ಲಿ ಹಲವಾರು ಸಮಸ್ಯೆಗಳಿಗೆ ಪರಿಹಾರವೇ ಸಿಗುತ್ತಿರಲಿಲ್ಲ. ಅಂದರೆ ಕೆಲವು ರೋಗಗಳಿಗೆ ಮದ್ದಿಲ್ಲದೇ ಅನೇಕರು ಸಾವಿಗೆ ಶರಣಾಗುತ್ತಿರುತ್ತಾರೆ. ಅಂತಹವರ ಸಾಲಿನಲ್ಲಿ ಗುಡ್ಡಯ್ಯನು ಒಬ್ಬ. ಇಬ್ಬರು ಹೆಂಡತಿಯರು ಮಕ್ಕಳಾಗುವ ಮೊದಲೇ ರೋಗಕ್ಕೆ ತುತ್ತಾಗಿ ಸಾವನ್ನಪ್ಪಿರುತ್ತಾರೆ. ಮೂರನೆಯವಳು ಕರಿಯ ಹಾಲು ಕುಡಿಯುತ್ತಿದ್ದಾಗಲೇ ಸಾಯುತ್ತಾಳೆ.

ಹಿಂದೆ ಹೆಸರಿರದ ಅನೇಕ ಖಾಯಿಲೆಗಳು, ಕಾಲರ, ಮಲೇರಿಯಾ, ಸಿಡುಬು ಮುಂತಾದ ಎಷ್ಟೋ ಖಾಯಿಲೆಗಳು ಊರಿನ ಜನರನ್ನು ತಿಂದುಹಾಕುತ್ತಿದ್ದವು. ಹಳ್ಳಿಯಲ್ಲಿ ಸರಿಯಾದ ವೈದ್ಯಕೀಯ ಚಿಕಿತ್ಸೆ ಇಲ್ಲದೆ ಸಾಲುಸಾಲು ಸಾವನ್ನಪ್ಪುವ ಧಾರುಣ ಪರಿಸ್ಥಿತಿ ಇಲ್ಲಿ ಅರಿವಾಗುತ್ತದೆ.

ಆಗ ಗುಡ್ಡಯ್ಯ ಎಲ್ಲರ ಒತ್ತಾಯದ ಮೇರೆಗೆ ಮಗು ನೋಡಿಕೊಳ್ಳಲು ಮರುಮದುವೆಯಾಗುತ್ತಾನೆ. ಅವಳಿಗೆ ಚಿಕ್ಕ ವಯಸ್ಸು. ಅವಳ ಆಸೆ ಆಕಾಂಕ್ಷೆಗಳಿಗೆ ಇವರು ಸ್ಪಂದಿಸುವುದಿಲ್ಲ. ಆಗ ಅವಳು ಗಯ್ಯಾಳಿಯ ಗುಣ ಮೈಗೂಡಿಸಿಕೊಂಡು ಮನೆಯ ಮಗ, ಗಂಡನ ಜವಾಬ್ದಾರಿಯನ್ನು ಸಂಪೂರ್ಣವಾಗಿ ಇವಳೇ ವಹಿಸಿಕೊಳ್ಳುತ್ತಾಳೆ. ಮಗನಿಗೆ ಮದುವೆ ಮಾಡಿ ಆ ದಿನವೇ ಸೊಸೆಯ ಮೇಲೆ ಅಧಿಕಾರ ಚಲಾಯಿಸುತ್ತಾಳೆ. ಆ ಸೊಸೆ ಬಂದ ದಿನವೇ ಹೆದರಿ ಮೂಲೆ ಸೇರಿರುತ್ತಾಳೆ.

ಆದರೆ ಮಗನ ಸ್ನೇಹಿತರು ಅವನಿಗೆ ಆಡಿದ ಮಾತಿನಿಂದ ರೊಚ್ಚಿಗೆದ್ದ ಮಗ ತಾಯಿಗೆ ತಿರುಗಿ ಬೀಳುತ್ತಾನೆ. ಹೆದರಿ ಗಂಡನಿಗೆ ತಿಳಿಸಿ ಬುದ್ಧಿ ಕಲಿಸುತ್ತೇನೆಂದು ಹೋಗುತ್ತಾಳೆ.

ಇಲ್ಲಿ ಗದ್ದೆಯಲ್ಲಿರುವ ಗಂಡ ಯಾವುದೋ ಸಮಸ್ಯೆಯನ್ನು ಹೊತ್ತುತರುತ್ತಾಳೆಂದು ತಿಳಿಯುತ್ತಾನೆ. ಅವಳು ಬಿರುಗಾಳಿಯಂತೆ ಬಂದು ನಡೆದ ಅಷ್ಟು ವಿಷಯವನ್ನು ಗಂಡನಲ್ಲಿ ಹೇಳಿ ದುಃಖ ತೋಡಿಕೊಳ್ಳುತ್ತಾಳೆ. ಆದರೆ ಗಂಡ ಅದಕ್ಕೆ ಸೊಪ್ಪು ಹಾಕುವುದಿಲ್ಲ. ತನ್ನಷ್ಟಕ್ಕೆ ತಾನೇ ತನ್ನ ಹಣೆಬರಹ ನೆನೆಸಿಕೊಂಡು ಅಳುತ್ತಾ ಕೂರುತ್ತಾಳೆ. ಸಂಜೆಯಾಗುವ ಹೊತ್ತಿಗೆ ಮನೆಗೆ ಬಂದು ಎಲ್ಲರೂ ಸೇರುತ್ತಾರೆ. ಆದರೆ ಮನೆ ಪ್ರಶಾಂತವಾಗಿರುತ್ತದೆ. ಊಟ ಮುಗಿಸಿ ಎಲ್ಲರೂ ಮಲಗುತ್ತಾರೆ. ಕರಿಯ ಪುಟ್ಟಸಿದ್ದಿಗೆ ತನ್ನ ಕೋಣೆ ಬರಲು ಹೇಳಿ ಜೋರಾಗಿ ಕದ ಹಾಕುತ್ತಾನೆ. ತನ್ನ ಸೊಸೆ ಎದುರಿಗೆ ಅವಮಾನವಾಯಿತೆಂದು ಅವಳು ಮತ್ತೆ ಮತ್ತೆ ಅದನ್ನೇ ನೆನೆಸಿಕೊಳ್ಳುತ್ತ ಅಳುತ್ತಾ ಮಲಗುತ್ತಾಳೆ. ಸೊಸೆ ಗರ್ಭಿಣಿ ಆಗಿರುವುದು ಮತ್ತಷ್ಟು ರೊಚ್ಚಿಗೇಳುವಂತೆ ಮಾಡುತ್ತದೆ.

ಬೆಳಿಗ್ಗೆ ತಂದೆ ಮಗ ಗದ್ದೆಗೆ ಹೋಗಿರುವಾಗ ಅಲ್ಲಿಗೆ ಬಿಸಿಬಿಸಿ ಸುದ್ದಿ ರವಾನೆಯಾಗುತ್ತದೆ. ಪುಟ್ಟಸಿದ್ದಿ ನೇಣುಹಾಕಿಕೊಂಡು ನೇತಾಡುತ್ತಿರುವುದು ಅವರ ಕಿವಿಗೆ ಬೀಳುತ್ತಿದ್ದಂತೆಯೇ ಓಡಿಬರುತ್ತಾರೆ. ಆದರೆ ಈ ಸಾವಿನ ಹಿಂದಿರುವ ಮರ್ಮ ಯಾರಿಗೂ ತಿಳಿಯುವುದಿಲ್ಲ. ಅದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಒಂದು ಹೆಣ್ಣು ತನ್ನ ಆಸೆ ಸುಖಸಂತೋಷ ತನಗೆ ದೊರೆಯದಿದ್ದಾಗ ಅದರ ಸಿಟ್ಟು ಮತ್ತೊಬ್ಬರ ಮೇಲೆ ತೋರಿಸುತ್ತಾರೆ. ಒಬ್ಬ ಅಸಹಾಯಕ ಹೆಣ್ಣು ಮಗಳ ಜೀವವನ್ನೇ ಪಣಕ್ಕೆ ಇಡುವ ಪರಿಸ್ಥಿತಿ ಒದಗುತ್ತದೆ. ಗಂಡನ ಪ್ರೀತಿಯಿಲ್ಲದೆ ಗಂಡನಿಂದ ವಂಚಿತಳಾಗಿ ಮಗನಿಗೆ ಮಲತಾಯಿಯಾಗಿ ಅಧಿಕಾರದ ಭೂತ ಇವಳನ್ನು ಆವರಿಸಿರುತ್ತದೆ.

ಗ್ರಾಮೀಣರು ಸಹೃದಯರು. ತಮ್ಮೊಡನೆ ಯಾರೇ ವ್ಯವಹರಿಸಿದರೂ ತಮ್ಮ ಕೈಲಾದ ಸಹಾಯ ಹಸ್ತ ನಿಡುತ್ತಾರೆಯೇ ಹೊರತು ಮತ್ಸರಪಡುವುದಿಲ್ಲ ಎಂಬುದಕ್ಕೆ ಪೂರಕ ಮಾಹಿತಿ ಒದಗಿಸಿಕೊಡುವ ಕತೆ 'ಹುಲುಸುಬೆಳೆ ಹಸುರು ಮನ' ಈ ಕತೆಯಲ್ಲಿನ ಕೆಂಪಯ್ಯ ಆದರ್ಶ ರೈತನಾಗಿದ್ದು ತುಂಬುಕುಟುಂಬದಲ್ಲಿ ವಾಸಿಸುತ್ತಿರುತ್ತಾನೆ. ಪಟ್ಟಣದಿಂದ ಬಂದ ರಾಜಯ್ಯಂಗಾರರು ಭೂಮಿ ಕೊಂಡು ಬೇಸಾಯ ನಡೆಸುವಾಗ ವ್ಯವಸಾಯದ ಎಲ್ಲಾ ಕೌಶಲ್ಯವನ್ನು ಅವರಿಗೆ ಕಲಿಸುತ್ತಾನೆ. ರೈತರಿಗೆ ನಡೆಸುವ ಸ್ಪರ್ಧೆಯಲ್ಲಿ ಅಯ್ಯಂಗಾರರು ಗೆದ್ದಾಗ ಕೊಂಚಮಟ್ಟಿಗಿನ ಅಸೂಯೆ ಆಗಿ ಅವರಿಂದ ದೂರ ಸರಿದರೂ ಕಾಲಾನಂತರ ಸಮಾಧಾನ ಹೊಂದಿ ಅವರ ಬಗ್ಗೆ ಅನುಕಂಪ

ಹೊಂದುತ್ತಾನೆ. "ಕಡ್ಗಾಲ್ದಾಗೆ ನೆಮ್ದಿಯಾಗಿ ಕಾಲಾ ಕಳೀಬೇಕೂಂತ ಪಟ್ಣಿಂದ ಈ ಅಳ್ಳಿಗ್ಬಂದವ್ರೆ. ಅವ್ರುಗ್ ಮೋಸಾ ಮಾಡುದ್ರೆ ನಮ್ಗೆ ಒಳ್ಳೇದಾದಾತ!"[೧] ಎಂದು ನಿಶ್ಚಯಿಸಿ ದ್ವೇಷ ಮರೆಯುತ್ತಾನೆ.

'ಹುಲಸುಬೆಳೆ–ಹಸಿರುಮನ' ಕಥಾಭಾಗದಲ್ಲಿ ಅಧಿಕ ವ್ಯವಸಾಯೋತ್ಪಾದನೆಗಾಗಿ ಸರ್ಕಾರದವರು ಒದಗಿಸುವ ಸುಧಾರಿತ ಬೀಜ, ಗೊಬ್ಬರ, ಉಪಕರಣಗಳಿಂದ ಹುಲುಸು ಬೆಳೆ ಬೆಳೆದ ಅಯ್ಯಂಗಾರರಿಗೆ ಸರ್ಕಾರದಿಂದ ಪ್ರೋತ್ಸಾಹ ಸೂಚಕ ಪ್ರಸಿದ್ಧಿಪತ್ರ ದೊರಕಿದಾಗ ತನಗೆ ದೊರಕಲಿಲ್ಲವೆಂಬ ಅಸೂಯೆ ಹಳ್ಳಿಯ ನಿಷ್ಠಾವಂತ ರೈತನಾದ ಕೆಂಪಯ್ಯನಲ್ಲಿ ಮೂಡಿ ಕೊನೆಗೆ ಹೇಗೆ ಮಾಯವಾಗಿ ಮನಸ್ಸು ಹಸುರಾಗುತ್ತದೆಯೆಂಬ ಕಥೆ ಒಳಗೊಂಡಿದೆ.

ಕೆಂಪಯ್ಯನಿಗೆ ಜೀವನದಲ್ಲಿ ಬೇಸರ ಮೂಡಿತ್ತು. ಅವನ ಪಿತ್ರಾರ್ಜಿತವಾದ ಒಳ್ಳೆಯ ಮಣ್ಣಿನ ಎರಡೆಕರೆ ಭೂಮಿ ಅವನದಾಗಿತ್ತು. ಅವನು ಹುಟ್ಟು ಬೇಸಾಯಗಾರನಾಗಿದ್ದ. ಸ್ವತಃ ಮಾಡುತ್ತಿದ್ದ ಬೇಸಾಯದ ಬಗ್ಗೆ ಬೇರೆಯವರಿಂದ ಸೈ ಎನಿಸಿಕೊಂಡಿದ್ದ ತನ್ನ ಶ್ರಮದಿಂದ ಸಂಸಾರವನ್ನು ಸುಸೂತ್ರವಾಗಿ ನಡೆಸಿಕೊಂಡು ಬರುತ್ತಿದ್ದ ನೆಮ್ಮದಿ ಬಾಳಿಗೆ ಅವನು ಕಾಯುತ್ತಿದ್ದ ರೈತ ಕರಿಯಪ್ಪ ತನ್ನ ಜಮೀನನ್ನು ಅಯ್ಯಂಗಾರರಿಗೆ ಮಾರಿದನು. ಮಕ್ಕಳಿಲ್ಲದ ಅವರು ಕೊನೆಯ ಕಾಲ ನೆಮ್ಮದಿಯಾಗಿ ಕಳೆಯಬೇಕೆಂದಿದ್ದರು. ಅದಕ್ಕೆ ಈ ಹಳ್ಳಿಯಲ್ಲಿ ಜಮೀನು ತೆಗೆದುಕೊಂಡಿದ್ದರು. ಹಾಗೇ ಒಂದು ದಿನ ಕೆಂಪಯ್ಯ ಅವರಿಗೆ ಸಿಕ್ಕಿ ಅವರಿಗೆ ನೆರವಾಗುವಂತೆ ತಿಳಿಸಿ ಅವರು ಇವನ ಸಹಾಯದಿಂದಲೇ ಆಸಕ್ತಿಯಿಂದ ಬೇಸಾಯ ಮಾಡಲಾರಂಭಿಸುತ್ತಾರೆ. ಅವರು ಹುಟ್ಟು ಪಟ್ಟಣವಾಸಿಯಾದ್ದರಿಂದ ಬೇಸಾಯದ ಬಗೆಗಿದ್ದ ಮೂಢಭಾವನೆಗಳನ್ನು ನೋಡಿ, ನಕ್ಕು ತಾನು ಆಸಕ್ತಿಯಿಂದ ಸಹಾಯ ಮಾಡುತ್ತ ಬಂದಿದ್ದ ಕೆಂಪಯ್ಯ ಮೂರು ಬೆಳೆ ಬರುವ ಹೊತ್ತಿಗೆ ಸ್ವತಃ ಬೇಸಾಯ ಮಾಡಬಹುದಾದಷ್ಟು ಅನುಭವ ಸಲಕರಣೆಗಳನ್ನು ಹೊಂದಿದ್ದರು. ನಂತರ ಗಟ್ಟುಮುಟ್ಟಾದ ಹುಡುಗನನ್ನು ಅವರು ಆಳು ಕೆಲಸಕ್ಕೆ ಇಟ್ಟರು. ನಾಲ್ಕನೆ ಬೆಳೆ ಕೆಂಪಯ್ಯನ ಸಹಾಯವಿಲ್ಲದೆ ಬೆಳೆದರು. ಕೆಂಪಯ್ಯ ಸಂತೋಷಪಟ್ಟ ಮುರನೇ ವರ್ಷ ಕೆಂಪಯ್ಯನ ಬೆಳೆಗೆ ಸಮಗಟ್ಟಿ ನಿಂತಿತ್ತು. ಅವರು ಸಂಬಂಧಪಟ್ಟ ಇಲಾಖೆಯಿಂದ ಬೇಸಾಯದ ಅನೇಕ ಬಗೆಯ ಪುಸ್ತಕಗಳನ್ನು ತರಿಸಿಕೊಂಡು ಓದಿದರು. ಊರಿಗೆ ಮಾದರಿ ಬೇಸಾಯಗಾರನಾಗಿದ್ದ.

---

೧. ಹುಲುಸುಬೆಳೆ ಹಸುರುಮನ, ಎಂದೂ ಬಂದಿತೂ ಮಳೆ, ಪು. ೯೭.

[illegible]

ಬರಬರುತ್ತಾ ಅಲ್ಲಿ ಹೊಟ್ಟೆಕಿಚ್ಚು ಪ್ರಾರಂಭವಾಯಿತು. ಉತ್ತಮ ಬೇಸಾಯಗಾರರೆಂದು ತಾಲ್ಲೂಕಿನಿಂದ ಪ್ರಸಿದ್ದ ಪತ್ರ ಪಡೆದರು. ಅವರ ಮೇಲೆ ಕೋಪ ಬಂದರೂ ತನಗಿಂತ ಉತ್ತಮ ಕುಲದವರೆಂದು ಜಗಳವಾಡುವ ಧೈರ್ಯ ಅವನಿಗಿರಲಿಲ್ಲ. ಸಮಾರಂಭದಲ್ಲಿ ಮುಖ ತಿರುಗಿಸಿಕೊಂಡು ಹೋದವನನ್ನು ಮತ್ತೆ ಕ್ಷಮೆ ಕೇಳಿ ಮಾತನಾಡಿಸಿಹೋಗುತ್ತಾನೆ. ಅಯ್ಯಂಗಾರ್‌ರಿಗೆ ಇವನ ಪರಿಸ್ಥಿತಿ ಅರ್ಥವಾಗುತ್ತದೆ. ಆರು ಮಕ್ಕಳ ತಂದೆ ಯಾರು ನೆರವಾಗುವಷ್ಟು ಬೆಳೆದಿರಲಿಲ್ಲ. ಅವರ ವಿದ್ಯಾಭ್ಯಾಸ ಬೆಳವಣಿಗೆ ಮತ್ತು ಅಸೂಯೆಯ ಮಡುವಿಗೆ ತಳ್ಳುತ್ತಿದ್ದ ನೆರೆಗದ್ದೆಯ ಬೆಳೆಯನೋಟ ಅವನ ಶಾಂತ ಬದುಕಿಗೆ ಬಿರುಗಾಳಿಯಾಯಿತು. ಅಯ್ಯಂಗಾರ್ ಇವನಿಗೆ ನಾವು ನೆರವಾಗಬೇಕು. ನಾನು ನನ್ನ ಹೆಂಡತಿ ಬಿಟ್ಟರೆ ಇನ್ನಾರಿಗೆ ಇದೆಲ್ಲ. ಆದರೆ ಅವನಿಗೆ ನಾನು ಸಹಾಯ ಮಾಡಬೇಕು ಪಟ್ಟಣದಿಂದ ಬಂದ ನನಗೆ ಉತ್ತಮ ಬೇಸಾಯಗಾರನಾಗುವಂತೆ ಮಾಡಿದ. ಅವನಿಗೆ ನನ್ನಿಂದ ಮೋಸ ಆಗಬಾರದು. ಅವನಿಗೆ ನಾನು ಸಹಾಯ ಮಾಡಬೇಕು. ಅವನನ್ನು ನಂಬಿ ಆರು ಜೀವ ಇದೆ ಎಂದುಯೋಚಿಸುತ್ತಾರೆ. ಇತ್ತ ಕೆಂಪಯ್ಯ ಹೀಗೆ ಮಾತನಾಡುತ್ತ ಹಳ್ಳಿಯವನ ಜೊತೆ ಅಯ್ಯಂಗಾರರ ಮಾತು ಬಂದಾಗ ಅವರಿಂದ ನಿನ್ನ ಜೀವನ ಈ ಸ್ಥಿತಿಗೆ ಕಾರಣ ಅವರು. ಅವರನ್ನು ಸುಮ್ಮನೆ ಬಿಡಬಾರದು ಎಂದಾಗ ಅವರ ವಿಷಯ ನಮಗೆ ಏಕೆ ಎನ್ನುತ್ತಾನೆ. ಅದಕ್ಕೆ ಅವನು ನೀನು ಹಾಗೆ ಕಾಲಾ ಕಳಿತೀಯಾ ಎಂದಾಗ "ಪಟ್ಟಣದಿಂದ ಇಲ್ಲಿಗೆ ಬಂದವರೆ ಅವರ ಪಾಡಿಗೆ ಅವರನ್ನು ಬಿಡು. ಅವರು ನೆಮ್ಮದಿ ಜೀವನ ನಡೆಸಲಿ" ಎಂದು ಹೇಳುತ್ತಾನೆ. ಮೊದಲು ಬೆಳೆಯನ್ನು ನೋಡಿ ಅಸೂಯೆಪಡುತ್ತಿದ್ದ. ಅವನು ಅದು ತಪ್ಪೆಂದು ತಿಳಿದು ಅವರ ನೆಮ್ಮದಿ ಹಾಳು ಮಾಡಬೇಡಿ. ರಾಮಕೃಷ್ಣ ಅಂತ ಬದುಕಲು ಬಿಡಿ ಎನ್ನುತ್ತಾನೆ.

ಇಷ್ಟಲ್ಲದೇ ಹಳ್ಳಿಯಲ್ಲಿ ಸಾಮಾನ್ಯವಾಗಿ ಅವರ ಸ್ವಂತ ಹೆಸರಿಗಿಂತ ಅಡ್ಡ ಹೆಸರುಗಳೇ ಹೆಚ್ಚು ಜನಪ್ರಿಯವಾಗಿರುವುದನ್ನು ಕಾಣಬಹುದು. ಪಟಾರನೇ ಹೊಡೆಯುವ ಪಟಾರಣ್ಣ, ಗೋಳೂರಕ್ಕ, ಕರಿಯ, ಮೆಡ್ಡ ಮುಂತಾದ ಹೆಸರುಗಳೇ ಜನಪ್ರಿಯವಾಗುತ್ತವೆ, ಹುಟ್ಟ ಹೆಸರು ಮರೆತೆ ಹೋಗಿರುವುದು ಸಾಮಾನ್ಯ ಸಂಗತಿಯಾಗಿರುತ್ತದೆ. ಒಟ್ಟಿನಲ್ಲಿ ದುರ್ಬಳಕೆ ಮೇಲೆ ಉಳ್ಳವರ ದರ್ಪ ದಬ್ಬಾಳಿಕೆ ಮಾಡುವ ಭೀಕರ ಪರಿಣಾಮದ ಶೋಚನೀಯ ಸ್ಥಿತಿಯನ್ನು ' ಆ ಆರಾಣೆಗಳು' ಕತೆ ಬಿಚ್ಚಿಡುತ್ತದೆ.

[illegible]

'ಕಳೆ' ಇದು ಹಳ್ಳಿಗಾಡಿನ ಕತೆಯುಳ್ಳದಾಗಿದೆ. ಇಬ್ಬರೂ ಗಂಡ-ಹೆಂಡತಿ ಗದ್ದೆಯಲ್ಲಿ ಕಳೆ ಕೀಳಿಸುವ ಕೆಲಸ ಮಾಡಿಸುತ್ತಿರುತ್ತಾನೆ. ಹೆಂಡತಿ ಕಳೆ ಕೀಳಿಸಾಯಿತ್ತಾ ಎಂದು ಕೇಳಿದಾಗ ಬೇಸರದಿಂದ ಇನ್ನು ಸ್ವಲ್ಪ ಉಳಿದಿದೆ ಎಂದು ಉತ್ತರಿಸುತ್ತಾನೆ. ನಿಂಗ-ನಂಜ ಇಬ್ಬರೂ ಕಷ್ಟಪಟ್ಟು ತಮ್ಮ ಗದ್ದೆಯಲ್ಲಿ ತಾವು ಕಷ್ಟಪಟ್ಟು ದುಡಿಯುತ್ತಿದ್ದರು. ಕಳೆ ಕೀಳುವುದಕ್ಕಾಗಿ ಹೆಣ್ಣಾಳುಗಳು ಅವರ ಗದ್ದೆಗೆ ಬರುತ್ತಾರೆ. ಅವರ ಜೊತೆಯಲ್ಲಿ ತಿಮ್ಮಿಯು ಬರುತ್ತಾಳೆ. ಕಳೆ ಕೀಳುವ ಸಮಯದಲ್ಲಿ ತಮಾಷೆ ಮಾಡಿಕೊಂಡು ಆಳುಗಳ ಜೊತೆ ನಿಂಗನು ಕೆಲಸ ಮಾಡುತ್ತಿದ್ದನು. ಆಗ ಕೂಲಿ ಕೆಲಸಕ್ಕೆ ಬರುತ್ತಿದ್ದ ತಿಮ್ಮಿಯ ಜೊತೆ ಬಹಳ ಸಲುಗೆಯಿಂದ ನಡೆದುಕೊಳ್ಳುತ್ತಿದ್ದನು. ಅವಳಿಗೆ ಗದ್ದೆಯಲ್ಲಿ ಬೆಳೆದ ಹಸಿಮೆಣಸಿನ ಇತರ ತರಕಾರಿಗಳನ್ನು ನೀಡುತ್ತಿದ್ದನು. ಅವಳ ಜೊತೆ ಸಲುಗೆಯ ಮಾತುಗಳನ್ನು ಹಾಡುತ್ತಾನೆ. ಅವಳು ಮದುವೆಯಾಗದ ಹೆಣ್ಣೆಂದು ತಿಳಿದಿದ್ದರೂ ಅವಳ ಜೊತೆ ಬಹಳ ಸಲುಗೆಯಿಂದ ಇರುತ್ತಿದ್ದ. ಒಂದೊಂದು ಬಾರಿ ಮನೆಗೆ ಬಂದಾಗ ನಾನು ಅವಳ ಜೊತೆ ಆ ರೀತಿ ಮಾತನಾಡಿರುವುದು ತಪ್ಪೆಂದು ತಿಳಿದು ತನಗೆ ತಾನೇ ಪಶ್ಚಾತ್ತಾಪಪಟ್ಟುಕೊಳ್ಳುತ್ತಿದ್ದನು. ಮನೆಯಲ್ಲಿ ಇದ್ದ ಪ್ರತಿಕ್ಷಣವು ಅವಳ ಗದ್ದೆ ಕೆಲಸಕ್ಕೆ ಬಂದ ಪ್ರಸಂಗ ನೆನಸಿಕೊಳ್ಳುತ್ತಿರುತ್ತಾನೆ. ಹೆಂಡತಿ ಬಂದು ರೀ ಎಂದಾಗ ವಾಸ್ತವ ಪ್ರಪಂಚಕ್ಕೆ ಬರುತ್ತಿದ್ದ. ಹಳ್ಳಿಯ ಜೀವನ ಕಷ್ಟದಾಯಕವಾಗಿದ್ದು ಯಾರು ದಿಕ್ಕಿಲ್ಲದ ಹೆಣ್ಣಾದ್ದರಿಂದ ಎಲ್ಲವನ್ನು ನಗುನಗುತ ಸಹಿಸಿಕೊಂಡಿರುತ್ತಾಳೆ ತಿಮ್ಮಿ. ನಿಂಗನಿಗೂ ನಾನು ಅವಳ ಜೊತೆ ಆ ರೀತಿ ನಡೆದುಕೊಳ್ಳುವುದು ತಪ್ಪೆಂದು ನಾನು ಮದುವೆಯಾಗಿರುವ ಗಂಡಸು ಎಂದು ಪಶ್ಚಾತ್ತಾಪಪಟ್ಟು ಸುಮ್ಮನಾದ.

'ಮೀಟಿಂಗು ಮಾಡಿದರು' ಕತೆಯಲ್ಲಿ ಆ ಊರಿನಲ್ಲಿ ಸೇಲ್ಸ್ ಕ್ಲರ್ಕ್‌ನ ವಿಚಾರಣೆಗೆ ಎಂದು ಊರಿನ ಹಿರಿಯರು ಅಂದರೆ ಒಂದು ಸಮಿತಿ ರಚಿಸಿಕೊಂಡಿರುತ್ತಾರೆ. ಆ ಸಮಿತಿಯ ಅಧ್ಯಕ್ಷರು ಸಮಿತಿಯ ಅನೇಕ ಸದಸ್ಯರುಗಳು ಅಲ್ಲಿಗೆ ಆಗಮಿಸಿದ್ದಾರೆ. ದೂರು ಏನೆಂದರೆ ಊರಿನ ಚೆನ್ನಪ್ಪ ಜನಗಳಿಗೆ ಮೋಸ ಮಾಡಿ ವ್ಯಾಪಾರ ಮಾಡುತ್ತಿರುತ್ತಾನೆ. ಆಗ ಹೊಂಬಣ್ಣ ಜನಗಳಿಗೆ ತೂಕದಲ್ಲಿ ಮೋಸ ಮಾಡುತ್ತಾನೆಂದು ಹೇಳುತ್ತಾರೆ. ಹೊಂಬಣ್ಣ ಒಂದು ಬಾರಿ ಅನೇಕ ಅಂಗಡಿಗೆ ಗೊಬ್ಬರ ತೆಗೆದುಕೊಳ್ಳಲು ಹೋದಾಗ ತೂಕದಲ್ಲಿ ಮೋಸಮಾಡುವುದು ಅವನಿಗೆ ಹೇಗೋ ತಿಳಿಯುತ್ತದೆ. ಆಗ ಅವನು ನನಗೆ ಈ ರೀತಿಯಾಗಿ ಮೋಸಮಾಡುತ್ತೀಯಲ್ಲ. ಹಳ್ಳಿಯ ಮುಗ್ಧ ಜನರಿಗೆ ಹೇಗೆ ನೀನು ಮೋಸ ಮಾಡಬಹುದು ಎಂದು ಹೇಳಿ ಮೀಟಿಂಗನ್ನು ಕರೆಸುತ್ತಾನೆ. ಇಲ್ಲಿ ಚೆನ್ನಪ್ಪನಿಗೆ ತಿಮ್ಮಯ್ಯ ಆಪ್ತನಾಗಿದ್ದು ಅಂಗಡಿ ಮುಂದೆ ಕುಳಿತಿರುತ್ತಾನೆ. ಆಗ

ಪುಟ್ಟಯ್ಯ ತಿಮ್ಮಯ್ಯನಿಗೆ ನೀನು ಇಲ್ಲಿ ಕುಳಿತಿರುತ್ತೀಯಾ ಒಂದು ದಿನ "ನಮ್ಮೈದುಮಗೆ ಮೂರ್ಕೇಜಿ ಕಡ್ಮೆ ಕೊಟ್ಟಕ್ಳಿಸಿದ್ದ. ನಾನ್ ಬಂದ್ ಇದೇನೋ ಇಂಗ್ ಕೊಟ್ಟಿದ್ದಿ ಅಂದ್ರೆ ತಲೇನೆ ತಗ್ಗುಸ್ಬುಟ್ಟ (ಮೀಟಿಂಗ್ ಮಾಡಿದರು ಪು.ಸಂ. ೧೦೪) ನಾನು ಹೋಗ್ಲಿ ಪಾಪ ತಿನ್ಕಳ್ಳಿ ಅಂತ ಸುಮ್ಮನಿದ್ದೆ. ಇನ್ನೊಂದು ಸಾರಿ ಹೀಗೆ ಮಾಡಬೇಡ ಎಂದು ಹೇಳುಬಿಟ್ಟು ಬಂದಿದೆ. ಆದರೆ ಅದೇ ತರಹ ಮತ್ತೆ ತಪ್ಪು ಮಾಡಿದ್ದಾನೆ. ಇವನನ್ನು ಸುಮ್ಮನೆ ಬಿಡಬಾರದು ಕೆಲಸದಿಂದ ತೆಗೆಯಬೇಕು ಎನ್ನುತ್ತಾನೆ.

ಒಬ್ಬರಿಗೆ ಒಂದೇ ಮೂಟೆ ಗೊಬ್ಬರ ಕೊಡುವುದು ಇವನು ಅವರಿಗೆ ಬೇಕಾದವರಿಗೆ ಹೆಚ್ಚೆಚ್ಚು ಕೊಡುತ್ತಾನೆ ಎಂದಾಗ ಇಲ್ಲಿ ಪ್ರೆಸಿಡೆಂಟರು ಎಲ್ಲರಿಗೂ ಒಂದೇ ರೀತಿ ಕೊಡು ಎಂದಿದ್ದರೂ ಹಾಗೆಯೇ ನಾನು ಕೊಟ್ಟ ಎನ್ನುತ್ತಾನೆ. ಡೈರೆಕ್ಟ್ರ ಆಗ್ಲಿ. ರೆಸಿಡೆಂಟಿ ಆಗ್ಲಿ ಯಾರ್ಬಂದ್ರೂ ಅಷ್ಟೇ ಒಬ್ಬರಿಗೆ ಒಂದೇ ಮೂಟೆ ಕೊಡುವುದು ಎಂದು ಚಿನ್ನಪ್ಪ ಹೇಳುತ್ತಾನೆ. ಇವನ ಮಾತುಗಳನ್ನು ಕೇಳುತ್ತಿದ್ದ ಹೊಂಬಣ್ಣ ಕೊಡು ನಿಮ್ಮೆಲ್ಲರಿಗೂ ಕೊಂಬು ಬಂದಿದೆ. ನಿಮ್ಗೆ ಇಲ್ಲಿ ಬುದ್ದಿ ಕಲಿಸಬೇಕು. ಅಲ್ಲಿ ಕಲಿಸುತ್ತೇನೆಂದು ಅಲ್ಲಿಂದ ಹೊರಡುತ್ತಾನೆ.

ಆಗ ಚಿನ್ನಪ್ಪ ಅಧ್ಯಕ್ಷರ ಮನೆಯ ಮುಂದೇ ಹೋಗಿ ನನ್ನ ಮೇಲೆ ಇಲ್ಲದ ದೂರುಗಳನ್ನು ಬಂದಿದೆ. ದಯವಿಟ್ಟು ನನ್ನನ್ನು ಕಾಪಾಡಿ ನನಗೂ ಹೆಂಡತಿ ಮಕ್ಕಳಿದ್ದಾರೆ. ಮೀಟಿಂಗ್‌ಗೆ ನೀವು ಬರಲೇಬೇಕು ಎಂದು ಗೋಗರೆಯುತ್ತಾನೆ. ಮೊದಲಿಗೆ ಆಗುವುದಿಲ್ಲ ಎಂದ ಅಧ್ಯಕ್ಷರು ನಂತರ ಒಪ್ಪಿಕೊಳ್ಳುತ್ತಾರೆ. ಎಲ್ಲರೂ ಮೀಟಿಂಗ್‌ಗೆ ಸೇರುತ್ತಾರೆ. ಆಗ ಪುಟ್ಟಯ್ಯ ಇವನು ಡೈರೆಕ್ಟರ್‌ಗಳೆಂದರೆ ಮರ್ಯಾದೆಯನ್ನು ಕೊಡುವುದಿಲ್ಲ. ಈ ಎಂಜಲ್ ತಿನ್ನೋ ಮಕ್ಕಳು ಇನ್ನಾರಿಗೆ ಹೆದರುತ್ತಾರೋ ಇವರು ಇವರಿಗೆ ಕೇಳುವವರು ಯಾರು ಇಲ್ಲ. ಇವನು ಜನಗಳಿಗೆ ಕಡಿಮೆ ತೂಕದ ಬಟ್ಟಿನ ತೂಕದಲ್ಲಿ ಎಲ್ಲರಿಗೂ ಮೋಸ ಮಾಡುತ್ತಾನೆ. ಮುಗ್ದ ಜನರನ್ನು ಇವನು ವಂಚಿಸದೇ ಇರುತ್ತಾನ? ಯಾರ್‍ಯಾರು ಕುಮ್ಮಕ್ಕೂ ಇದಿಯೋ ತಿಳಿಯುವುದಿಲ್ಲ. ಮೊದಲು ಇವನನ್ನು ಕೆಲಸದಿಂದ ತೆಗೆಯಿರಿ. ಇಂತಹ ಮೋಸಗಾರ ನಮ್ಮೂರಿನಲ್ಲಿ ಕೆಲಸಕ್ಕೆ ಇರುವುದಿಲ್ಲ ಬೇಡ ಎಂದು ಅನೇಕ ಮತ್ತೆ ಮತ್ತೆ ಕೂಗಿ ಹೇಳುತ್ತಾರೆ.

ಅಧ್ಯಕ್ಷರು ಇವರುಗಳ ಮಾತನ್ನು ಕೇಳುತ್ತಿದ್ದ ಪುಟ್ಟಣ್ಣ ಅವನನ್ನು ತೆಗೆದುಹಾಕಿ ಎಂದು ಪದೇ ಪದೇ ಹೇಳುತ್ತಿದ್ದ ಅಧ್ಯಕ್ಷರು ತಾಳ್ಮೆ ತಂದುಕೋ ಏನಾದರೂ ಯೋಚನೆ ಮಾಡೋಣ ಅವನಿಗೆ ಜೀವನ ನಡೆಯಬೇಕಲವ್ವ ಅವನಿಗೆ ಈ ಕೆಲಸ ಬಿಟ್ಟು ಏನು

[illegible]

ಮಾಡುವುದು ಅವನಿಗೆ ತಿಳಿದಿಲ್ಲ. ಈಗ ನೀವು ಹೇಳದ ಹಾಗೇ ಅವನನ್ನು ತೆಗೆದುಹಾಕಿದರೆ ಒಬ್ಬನ ಹೊಟ್ಟೆ ಮೇಲೆ ಹೊಡೆದಂತಾಗುತ್ತದೆ. ಅವನ ಮುಂದಿನ ಜೀವನದ ಗತಿ ಏನು ಎಂದಾಗ ಅವನು ಕೂಲಿಮಾಢಿ ಜೀವನ ಸಾಗಿಸಲೇ ಹಾಗಂತ ಜನಗಳಿಗೆ ಮೋಸ ಮಾಡೋದ ಹೊಂಬಣ್ಣನ ಮಾತಿಗೆ ಅಧ್ಯಕ್ಷರು ಇವರನ್ನು ಬಿಟ್ಟು ಮಿಕ್ಕವರೆಲ್ಲ ಮುಖ ಮುಖ ನೋಡಿಕೊಳ್ಳುತ್ತಾರೆ. ಅಧ್ಯಕ್ಷರು ನಿಧಾನವಾಗಿ ಯೋಚಿಸುತ್ತ ಏಕ್ದಂ ಅವನನ್ನು ಕೆಲಸದಿಂದ ತೆಗೆದುಹಾಕುವುದು ಬೇಢ ಆ ರೀತಿ ಮಾಡಿದರೆ ನಮಗೆಲ್ಲ ಮರ್ಯಾದೇ ಇರುವುದಿಲ್ಲ. ಮತ್ತೆ ಮತ್ತೆ ಅದನ್ನೆ ಹೇಳುವುದು ಬೇಡ. ಸ್ವಲ್ಪಹೊತ್ತು ಎಲ್ಲರೂ ಮೌನ. ಇನ್ನು ಐದು ಜನ ಇದ್ದಾರೆ. ಅವುಗಳು ಬರಲೇ ಎಲ್ಲರೂ ಸೇರಿ ತೀರ್ಮಾನ ತೆಗೆದುಕೊಳ್ಳಲ್ಲಿ ಮುಂದಿನ ವಾರ ತೀರ್ಮಾನ ಮಾಡೋಣ ಎಂದು ಅಧ್ಯಕ್ಷರು ಅಲ್ಲಿಂದ ಚಿನ್ನಪ್ಪನಿಗೆ ಸಮಾಧಾನ ಹೇಳಿ ಹೊರಡುತ್ತಾರೆ. ಇಲ್ಲಿ ಅಧ್ಯಕ್ಷರು ಎಲ್ಲರೂ ತಪ್ಪು ಮಾಡುತ್ತಾರೇ ಒಂದು ಅವಕಾಶವನ್ನು ಕೊಟ್ಟು ನೋಡಣ್ಣ ಸರಿಹೋಗುತ್ತದೆಯೋ ಎಂಬ ಮಾನವೀಯತೆಯಿಂದ ಅವರ ಪರಿಸ್ಥಿತಿಯನ್ನು ನೋಡಿ ಎಲ್ಲರಿಗೂ ಒಂದಷ್ಟು ಸಮಾಧಾನದ ಮಾತುಗಳನ್ನಾಡಿ ಎಲ್ಲರೂ ಅಲ್ಲಿಂದ ಹೊರಡುತ್ತಾರೆ. ಚಿನ್ನಪ್ಪ ತಪ್ಪಿತಸ್ಥರ ರೀತಿ ತಲೆ ತಗ್ಗಿಸಿ ಅಲ್ಲಿಂದ ಹೊರಡುತ್ತಾನೆ. ವ್ಯಾಪಾರದಲ್ಲಿನ ಮೋಸಗಾರಿಕೆ ಗ್ರಾಮದಲ್ಲೂ ಬಿಟ್ಟಿಲ್ಲ ಎಂಬುದಿಲ್ಲಿ ವ್ಯಕ್ತವಾಗಿದೆ.

'ಬದುಕಿರಬಾರದು ಅಂಥವರು' ಕತೆಯಲ್ಲಿ ಅನಿರೀಕ್ಷಿತವಾದ ಆಘಾತವನ್ನುಂಟು ಮಾಡುವ ಘಟನೆ ಈ ಕಥೆಯಲ್ಲಿ ನಡೆಯುತ್ತದೆ. ಅನ್ಯರ ಬಗ್ಗೆ ದೂರು ಹೊರಿಸುವ ಕಟ್ಟುಕತೆ ಕಟ್ಟಿ ಹರಡುವ ಚಾಡಿಕೋರರ ಬಗ್ಗೆ ಜುಗುಪ್ಸೆಯನ್ನು ತಾಳುತ್ತ ಬಂದ ಕಥಾ ನಾಯಕನಿಗೆ ತಮ್ಮೂರಿನ ಉಪಾಧ್ಯಾಯರ ಹೆಣ್ಣು ಮಕ್ಕಳ ಬಗ್ಗೆ ಹಬ್ಬಿದ ಕಟ್ಟುಕತೆಗೆ ತನ್ನ ತಾಯಿಯೆ ಕಾರಣವೆಂಬ ಸತ್ಯ ಇತ್ತೆಂದು ಎದ್ದು ನಿಂತಾಗ ನಾಯಕ ಮಾತಿಲ್ಲದೆ ಮೂಕನಾಗುತ್ತಾನೆ.

ಕಥಾನಾಯಕ ತನ್ನ ಹಳ್ಳಿಗೆ ಹೊರಡಲು ರೈಲು ನಿಲ್ದಾಣಕ್ಕೆ ಬಂದಾಗ ಅಲ್ಲಿ ಇಬ್ಬರು ಹೆಂಗಸರೂ ಹೀಗೆ ಯಾವುದೋ ವಿಷಯದಲ್ಲಿ ತುಂಬಾ ದೀರ್ಘವಾಗಿ ಚರ್ಚಿಸುತ್ತಿರುತ್ತಾರೆ. ಆಗ ಪೇಪರ್ ಓದುತ್ತಿದ್ದ ನಾಯಕನು ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ಅವರು ಯಾವುದೋ ಮದುವೆ ವಿಷಯದ ಬಗ್ಗೆ ಚರ್ಚಿಸುತ್ತಿರುತ್ತಾರೆ. ಪಟ್ಟಣದಲ್ಲಿ ಓದಿದ ಹುಡುಗ ಎಂದು ಊರಿನ ಸಾಹುಕಾರ ಮಗಳಿಗೆ ಆ ವರನನ್ನು ನಿಶ್ಚಯಿಸಿರುತ್ತಾರೆ. ಆಗ ಯಾರೋ ಚಾಡಿಕೋರರು

ಹುಡುಗನ ನಡತೆಯ ಬಗ್ಗೆ ಸುಳ್ಳು ಹೇಳಿದ್ದಾರೆ. ಅವನು ಬೇರೆ ಹುಡುಗಿ ಜೊತೆ ಸಂಬಂಧ ಇಟ್ಟುಕೊಂಡಿದ್ದಾನೆಂದು ಸುಳ್ಳು ಸುದ್ದಿ ಹಬ್ಬಿಸುತ್ತಾರೆ. ಆಗ ಹುಡುಗಿಯ ಮನೆಯವರಿಗೆ ಈ ವಿಷಯ ತಿಳಿದು ಮದುವೆಯನ್ನೇ ನಿಲ್ಲಿಸಿಬಿಡುತ್ತಾರೆ. ಆದರೆ ಇಷ್ಟಾದರೂ ಹುಡುಗನಿಗೆ ಈ ಯಾವ ವಿಷಯವುತಿಳಿದಿರುವುದಿಲ್ಲ. ಹೀಗೆ ಒಬ್ಬರ ಮನೆ ಮುರಿದರೆ ಏನು ಬಂತು ಭಾಗ್ಯ ಎಂದು ಗೊಣಗಿಕೊಳ್ಳುತ್ತಿರುತ್ತಾರೆ. ಥಟ್ಟನೆ ಲೇಖಕರು ನೋಡುತ್ತಾರೆ. ಅವರು ಇಷ್ಟುಹೊತ್ತು ಹೇಳಿದ್ದು ಬಡವರಿಗೆ ಹೀಗಾಗಬಾರದು ಎಂದು ಹೇಳುತ್ತಾರೆ. ಅದು ಒಂದು ಕಥೆಯಾಗಿತ್ತು. ಉಮಾಶಂಕರ ನಮ್ಮೂರಿನಲ್ಲಿ ನಾನು ಕಂಡ ಹಾಗೆ ಬೇಕಾದಷ್ಟು ನಡೆದಿದೆ. ಸಣ್ಣಪುಟ್ಟ ಮಾತುಗಳಿಗೂ ಎಂಥೆಂಥ ಶಕ್ತಿಬರುತ್ತದೆ ಎಂದೂ ತಿಳಿದಿದೆ ಎಂದುಕೊಳ್ಳುತ್ತಾನೆ.

ಅವರ ಊರಿನಲ್ಲಿ ಒಂದು ಬಾರಿ ಇಬ್ಬರು ಮಕ್ಕಳು ಆಟವಾಡುತ್ತಿದ್ದಾಗ ಮಕ್ಕಳ ನಡುವೆ ಜಗಳ ಬಂದಾಗ ಮಕ್ಕಳ ಮಾತಿಗೆ ದೊಡ್ಡವರು ಜಗಳವಾಡುವ ಕಥೆ ನೆನಪಾಗುತ್ತದೆ. ಊರಿಗೆ ಬಂದರೂ ಬೋರನನ್ನ ಮಾತನಾಡಿಸಿದಾಗ ಇವರ ಮಾತಿಗೆ ಅವನು ಉತ್ತರಿಸದೇ ಹೊರಟುಹೋದ. ಆಗ ಮತ್ತೆ ಒಂದಿಬ್ಬರನ್ನು ಮಾತನಾಡಿಸುತ್ತಾನೆ. ಅವರು ಸಹ ಮುಖ ತಿರುಗಿಕೊಂಡು ಹೋಗುತ್ತಾರೆ. ಆಗ ಅವರಿಗೆ ಬೇಜಾರಾಗುತ್ತದೆ. ಆಗ ಮತ್ತೆ ಬೋರ ಹೋದ ಕಡೆ ಹೋಗುತ್ತಾರೆ. ಅವನನ್ನು ನಿಲ್ಲಿಸಿ ಯಾಕೆ ಈ ರೀತಿ ಎಲ್ಲರೂ ನನ್ನನ್ನು ಮುಖ ತಿರುಗಿಸಿಕೊಂಡು ಹೋಗುತ್ತಿದ್ದಾರೆ ಎಂದು ಕೇಳಿದಾಗ ನಮ್ಮೂರಿನಲ್ಲಿ ಒಬ್ಬ ಮೇಷ್ಟ್ರು ಕುಟುಂಬ ವಾಸವಾಗಿದ್ದರು. ಅವರಿಗೆ ಮೂರು ಜನ ಹೆಣ್ಣು ಮಕ್ಕಳಿದ್ದರು. ಅವರು ಮದುವೆ ಮಾಡಲು ಗಂಡನ್ನು ಹುಡುಕುತ್ತಿದ್ದರು. ಆಗ ಯಾರೋ ಅವರ ಹೆಣ್ಣುಮಕ್ಕಳ ಮೇಲೆ ಇಲ್ಲದ ಕೆಟ್ಟ ಚಾಡಿಮಾತುಗಳನ್ನು ಹೇಳಿದ್ದರಂತೆ ಅದಕ್ಕೆ ಅವರು ರಾತ್ರೋರಾತ್ರಿ ಊರನ್ನೆ ಖಾಲಿಮಾಡಿ ಹೋದರು ಎಂದು ಹೇಳಿದ ಅದಕ್ಕೆ ಉಮಾಶಂಕರ್ ಅಯ್ಯೋ ಎಂದು ಮರುಗಿದ. ಅವರ್ಯಾರು? ಚಾಡಿಮಾತುಗಳನ್ನು ಯಾರು ಹೇಳಿದರು ಎಂದಾಗ ಅವನು ಅಲ್ಲಿಂದ ಓಡಿಹೋಗುತ್ತಾನೆ. ಮತ್ತೆ ಅವನ ಹಿಂದೆ ಓಡಿಹೋಗಿ ಅವನನ್ನು ಹಿಡಿದುಕೊಂಡು ಎಲ್ಲವನ್ನು ಹೇಳಿದೆ ಯಾರು? ಎಂದರೆ ಯಾಕೆ ಓಡಿಬಂದೆ ಎಂದಾಗ ಬೇರೆ ಯಾರ ಹತ್ರನಾದರೂ ಕೇಳು ನನ್ನನ್ನು ಬಿಡು ಎಂದಾಗ ನೀನೇ ಹೇಳಬೇಕು ಎಂದಾಗ ಅವನ ಕೈಕಾಲುಗಳು ಸೋತುಹೋದಂತಾಯಿತು. ಅವನು ಹಾಗೇ ಕುಕ್ಕರಗಾಲಿನಲ್ಲಿ ಕುಳಿತುಕೊಂಡು ಸುತ್ತಲೂ ಒಮ್ಮೆ ನೋಡಿ ಆಮೇಲೆ ಹೇಳಿದ ನಿನ್ನ ತಾಯಿ ಎಂದು ಉಮಾಶಂಕರನಿಗೆ ನಿಂತ ಜಾಗ ಕುಸಿದಂತಾಯಿತು. ರೈಲಿನಲ್ಲಿ ನಡೆದ

ಘಟನೆ ನೆನೆಸಿ ಬೈದುಕೊಂಡು ಬಂದೆ ಅಂದರೆ ನನ್ನ ತಾಯಿಯಿಂದ ಒಂದು ಸಂಸಾರ ಹಾಳಾಯಿತು ಎಂದುಕೊಳ್ಳುತ್ತಾನೆ. ಮೇಷ್ಟ್ರ ಹೆಣ್ಣುಮಕ್ಕಳ ಬಗೆಗಿನ ಅಪವಾದಕ್ಕೆ ತನ್ನ ತಾಯಿಯೇ ಕಾರಣ ಎಂದಾಗ ಆಶ್ಚರ್ಯಪಡುತ್ತಾನೆ. 'ಮಾತು ಸಂಸಾರ ಕೆಡಿಸ್ತು ತೂತು ಒಲೆ ಕೆಡಿಸ್ತು' ಎಂಬ ನಾಣ್ನುಡಿ ಇಲ್ಲಿ ನೆನಪಿಗೆ ಬರುತ್ತದೆ.

'ಹೊತ್ತು ಮುಳುಗುವ ಹೊತ್ತು' ಕಥೆಯಲ್ಲಿ ಹಳ್ಳಿಯ ಒಬ್ಬ ವಿಧವೆಯ ಜೀವನದ ಚಿತ್ರಣ ಕಂಡುಬರುತ್ತದೆ. ಅವಳಿಗೆ ಅತಿಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡುತ್ತಾರೆ. ಹಾಗೆಯೇ ಅವಳ ಜೀವನದಲ್ಲಿ ಆ ಬದುಕು ಅತೀ ವೇಗವಾಗಿಯೇ ಅಂತ್ಯವಾಗುತ್ತದೆ. ಅವಳ ಗಂಡ ಇಹಲೋಕ ತ್ಯಜಿಸುತ್ತಾನೆ. ಮಕ್ಕಳಿಲ್ಲದ ಇವಳು ಒಬ್ಬಂಟಿಯಾಗಿ ಜೀವನ ಸಾಗಿಸುತ್ತಿರುತ್ತಾಳೆ. ಊರಿನಲ್ಲಿ ಕೂಲಿನಾಲಿ ಮಾಡಿ ದುಡಿದು ತನ್ನ ಜೀವನ ನಡೆಸುತ್ತಾಳೆ. ಅವಳಿಗೆ ಪೈಪೋಟಿಯಂತೆ ಅದೇ ಊರಿನ ತಿಮ್ಮಿ ಇವಳು ಒಬ್ಬ ವಿಧವೆ. ಒಂದು ಬಾರಿ ಕೂಲಿ ದುಡ್ಡನ್ನ ಏರಿಸಿ ಕೆಲಸಕ್ಕೆ ಹೋಗದಿದ್ದಾಗ ಇವಳು ಕಡಿಮೆ ದುಡ್ಡಿನಲ್ಲಿ ಅನೇಕ ಆಳುಗಳನ್ನು ಕರೆದುಕೊಂಡು ಹೋಗಿ ನಾಟಿ ಮಾಡಿಸಿ ಮುಗಿಸುತ್ತಾಳೆ. ಎಲ್ಲರೂ ಆಗ ಇವಳನ್ನು ಹೊಗಳುತ್ತಾರೆ. ಅದೇ ಊರಿನಲ್ಲಿ ಇವಳ ತಂಗಿ ಮಗ ತಂಗಿ ಗಂಡ ಇರುತ್ತಾರೆ. ಇವರು ಮಾತನಾಡಿದಾಗ ಕೆಲವರು ಇವರಿಗೆ ಸಂಬಂಧಕಟ್ಟಿ ಮಾತನಾಡಿದ್ದುಂಟು. ಆದರೆ ಅವಳು ತಲೆಕೆಡಿಸಿಕೊಂಡಿರಲಿಲ್ಲ. ಇವಳಿಗೆ ಒಂದುಬಾರಿ ಅದೇ ರೀತಿ ಕೂಡಿಕೆ ಮನಸ್ಸಾದಾಗ ತಪ್ಪು ಯೋಚನೆ ಮಾಡಬಾರದೆಂದು ಮನಸ್ಸಿನಲ್ಲಿಯೇ ತನ್ನನ್ನು ಬೈದುಕೊಂಡದ್ದು ಉಂಟು. ತಂಗಿ ತೀರಿ ಹೋದ ಮೇಲೆ ಅವನು ಒಬ್ಬಂಟಿಯಾಗಿದ್ದ ಅವನ ಮಗನಿಗೆ ಮದುವೆ ಮಾಡು ಎಂದು ಹೇಳಿ ಅವನ ಜೀವನಕ್ಕೂ ದಾರಿಯಾಗುವ ರೀತಿ ಬುದ್ದಿ ಹೇಳುತ್ತಾಳೆ.

ಈ ಕತೆಯಲ್ಲಿ ಒಬ್ಬ ವಿಧವೆ ಹೆಣ್ಣು ಜೀವನ ಸಾಗಿಸಲು ಗಂಡಿಗಾಗಿ ಹಾತೊರೆಯುವುದು, ಅವಳು ಎದುರಿಸುವ ಆರ್ಥಿಕ ಸಮಸ್ಯೆ, ಸಮಾಜದಲ್ಲಿ ಮರುಮದುವೆಗೆ ಆಸ್ಪದ ಇಲ್ಲದೆ ಹಳ್ಳಿಯಲ್ಲಿ ಕೂಡಾಳಿ ಪದ್ಧತಿ ರೂಢಿಯಲ್ಲಿರುವುದನ್ನು ಈ ಕತೆ ಕಟ್ಟಿಕೊಡುತ್ತದೆ.

ಹಿಂದೆ ಓದುತ್ತಿರುವ ಸಂದರ್ಭದಲ್ಲಿಯೇ ಮದುವೆ ಮಾಡಿಬಿಡುತ್ತಿದ್ದರು. ಓದುತ್ತಿರುವ ಸ್ನೇಹಿತರನ್ನೇ ತಮ್ಮ ತಂಗಿಗೆ, ಸಂಬಂಧಿಕರಿಗೆ ಮದುವೆಮಾಡಿಸುವ ಪ್ರಯತ್ನಗಳು ಸಾಗುತ್ತಿತ್ತು. ಅಂಥ ಪ್ರಸಂಗಗಳ ವಿವರ 'ಬೇಟೆ' ಕತೆಯಲ್ಲಿ ಕಾಣಬರುತ್ತವೆ. ರಜೆಯಲ್ಲಿ ಸ್ನೇಹಿತನು ಕಥಾನಾಯಕನನ್ನು ಕರೆದೊಯ್ದು ತಂಗಿಯನ್ನು ಪರಚಯಿಸುವುದು, ಪತ್ರ ಬರೆಯಿಸುವುದು. ನಂತರದಲ್ಲಿ ಆಧುನಿಕ ಸ್ತ್ರೀಯರು

[illegible]

ವಯ್ಯಾರದಿಂದ ಎದುರಾದರೂ ಆತ ತಾನು ಹಿಂದೆ ನೋಡಿದ್ದ ಆ ಹಳ್ಳಿ ಯುವತಿಯನ್ನೇ ಮದುವೆಯಾಗಲು ಇಚ್ಛಿಸುತ್ತಾನೆ.

ಒಟ್ಟಾರೆ ಕ್ಯಾತನಹಳ್ಳಿ ರಾಮಣ್ಣನವರ ಕತೆಗಳೆಲ್ಲಾ ಬಹುತೇಕ ಗ್ರಾಮೀಣ ಪರಿಸರ ಹಿನ್ನೆಲೆಯಿಂದ ಬಂದಂತಹವು. ಮಂಡ್ಯ ಜನರ ಆಡುನುಡಿಯ, ಹಬ್ಬಹರಿದಿನಗಳು, ನಂಬಿಕೆ ಆಚರಣೆಗಳನ್ನು, ಗ್ರಾಮೀಣರಲ್ಲಿನ ಕುಲಕಸುಬುಗಳಾದ ಕ್ಷೌರಿಕವೃತ್ತಿ, ವ್ಯಾಪಾರ, ಬೇಸಾಯಗಳನ್ನು ಕಾಣಬಹುದು. ದೆವ್ವಭೂತಗಳ ನಂಬಿಕೆ, ಬಲಿಪ್ರಸಂಗ, ಕುಟುಂಬಗಳು ಒಡೆದು ಹೇಗೆ ಸಣ್ಣ ಕುಟುಂಬಗಳಾಗಿ ರೂಪುಗೊಳ್ಳುತ್ತವೆ. ಎಂಬುದನ್ನಿಲ್ಲಿ ಕಾಣಬಹುದಾಗಿದೆ.

ಅಧ್ಯಾಯ ಐದು

ಕ್ಯಾತನಹಳ್ಳಿ ರಾಮಣ್ಣನವರ ಕಥೆಗಳ ಒಟ್ಟು ವಿವೇಚನೆ

ಕ್ಯಾತನಹಳ್ಳಿ ರಾಮಣ್ಣ ಕಥೆಗಳಲ್ಲಿ ಅನೇಕ ವಿವಿಧ ಸ್ವರೂಪವುಳ್ಳ ಕಥೆಗಳು ಹೆಣೆದುಕೊಂಡಿದೆ. ನಾವು ಇತಿಹಾಸ ಅಧ್ಯಯನವನ್ನು ಅಭ್ಯಾಸ ಮಾಡುವ ಉದ್ದೇಶ, ಹಿಂದಿನವರು ನಡೆದು ಬಂದದಾರಿ ಉಗಮ ಬೆಳವಣಿಗೆ. ಸೋಲು-ಗೆಲುವು ಅವರು ಅಂದು ಗಳಿಸಿದ ವಿಜಯಕ್ಕೆ ಕಾರಣವೇನೆಂದು ತಿಳಿದು ಜೀವನದಲ್ಲಿ ಗೆಲ್ಲಲು ಅವರು ಅಂದು ಮಾಡಿದ ತಪ್ಪುದಾರಿ ನಡೆದು ಸೋತ ಬಗೆ ತಿಳಿದು ಜೀವನದಲ್ಲಿ ಸರಿಯಾಗಿ ಆರಿಸಿಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಲಿ ಎನ್ನುವ ಉದ್ದೇಶ ಮಾತ್ರ. ಹಾಗೆಯೇ ರಾಮಣ್ಣನವರ ಕಥೆಗಳಲ್ಲಿ ಅದೇ ರೀತಿ ಅದೆಷ್ಟೋ ಚಿತ್ರಣಗಳನ್ನು ನಾವು ಕಾಣಬಹುದು. ಅವರು ನಮ್ಮ ಸಮಾಜದಲ್ಲಿ ಸುತ್ತಮುತ್ತಲಿನಲ್ಲಿ ನಡೆಯುವ ಅದೆಷ್ಟೊ ತಾವು ಕಂಡು ಕೇಳಿದ ತಮ್ಮ ಅನುಭವಕ್ಕೆ ಬಂದಂತಹ ಸತ್ಯ ಘಟನೆಗಳನ್ನು ಮನುಷ್ಯನ ದಿನನಿತ್ಯ ಜೀವನದ ಸಮಸ್ಯೆಗಳು ಆ ಸಮಸ್ಯೆಗಳಿಂದ ಅವನು ಕುಸಿದು ಹೋಗುತ್ತಿವುದು ಈ ಕಥೆಗಳಲ್ಲಿ ನಾವು ಕಾಣಬಹುದು.

ಕೌಟುಂಬಿಕ ಸಮಸ್ಯೆಗಳ ಅನಾವರಣ ಇವರ ಕಥೆಗಳಲ್ಲಿ ಮೂಡಿಬಂದಿದೆ. ಸಾಮಾಜಿಕ ಸಮಸ್ಯೆ ಈ ವ್ಯವಸ್ಥೆಯು ಕುಟುಂಬದ ಮೇಲೆ ಬೀರುವ ಪ್ರಭಾವ ಮಕ್ಕಳ ಮನಸ್ಥಿತಿಯಿಂದಾಗಿ ಹಿರಿಯರು ಅನುಭವಿಸಿದ ನೋವು, ಮನೆ ಒಡೆದುಹೋಗುವ ಚಿತ್ರಣ ಈ ರೀತಿಯ ಪ್ರಭಾವ ಬೀರುವಂತಹ ಪರಿಣಾಮದ ತೀವ್ರತೆ ಮುಂತಾದವುಗಳ ಬಗೆಗೆ ರಾಮಣ್ಣನವರ ಕಥೆಗಳು ಬೆಳಕು ಚೆಲ್ಲಿವೆ.

ಅಸಮಾನತೆ, ಮೂಢನಂಬಿಕೆ, ಶ್ರೀಮಂತರ ದಬ್ಬಾಳಿಕೆ, ಹೆಣ್ಣಿನ ಶೋಷಣೆ, ಕೌಟುಂಬಿಕ ವ್ಯವಸ್ಥೆ. ಆ ಕೌಟುಂಬಿಕ ವ್ಯವಸ್ಥೆಗಳಲ್ಲಿ ಇಂದಿಗೂ ಸಹ ನಡೆದುಕೊಂಡು ಬರುತ್ತಿರುವ ಆಚಾರ-ವಿಚಾರ ಸಂಪ್ರದಾಯಗಳ ಪ್ರತಿರೂಪದ ಅನಾವರಣ ಇವರ ಕಥೆಗಳಲ್ಲಿ ಅಭಿವ್ಯಕ್ತವಾಗುತ್ತ ಸಾಗುತ್ತದೆ.

ಹೆಣ್ಣನ್ನು ಒಂದು ಯಂತ್ರದಂತೆ ಉಪಯೋಗಿಸಿಕೊಂಡು ಅವಳಿಗೆ ಯಾವುದೇ ಸ್ವತಂತ್ರ್ಯ ನೀಡದೆ ಅವಳ ಜೀವನ ಬಲಿ ತೆಗೆದುಕೊಳ್ಳುವುದು ಅವಳ ಆಸೆ-ಆಕಾಂಕ್ಷೆಗಳಿಗೆ ಬೆಲೆ ಸಿಗದಿರುವುದು ಅವರ ಜೀವನ ಸಾಗಿಸಲು ಅವರು ಆರಿಸಿಕೊಳ್ಳುವ ದಾರಿಗಳು ಎಂತಹ ಪರಿಸ್ಥಿತಿ ಬಂದರೂ ಹೆಣ್ಣು ಕುಗ್ಗುವುದಿಲ್ಲ

ಎಂಬ ವಿಷಯಗಳು ಸಹ ಮೂಡಿಬಂದಿವೆ. ಒಬ್ಬ ಬಡಕ್ಷೌರಿಕ ಮತ್ತು ಅವನ ಮುದಿತಾಯಿಯ ಜೀವನ ಶೈಲಿ. ಅವನ ಬಡತನದ ಪರಿಸ್ಥಿತಿ ಮತ್ತು ಯಜಮಾನನ ದೌರ್ಜನ್ಯ ಕಾಣಬಹುದು. ರಾಮಣ್ಣನವರು ಹಳ್ಳಿಗಾಡಿನ ಕಂಡುಬರುವ ಅತಿ ಸೂಕ್ಷ್ಮಾಣು ಸೂಕ್ಷ್ಮ ಸಮಸ್ಯೆಗಳನ್ನು ಗಮನಿಸಿ ಅದನ್ನು ಪರಿಹರಿಸುವ ಬಗೆಯನ್ನು ಬಹಳ ಅಚ್ಚುಕಟ್ಟಾಗಿ ಮಾಡಿದ್ದಾರೆ. ಸಮಾಜದಲ್ಲಿ ಜನರು ಮೂಢನಂಬಿಕೆಗಳಿಗೆ ಬಿದ್ದು ನರಳುತ್ತಿರುವುದು ಅಲ್ಲಿ ಅನಿಷ್ಠ ಪದ್ಧತಿ ಕೂಡಿಕೆ, ಮೂಢನಂಬಿಕೆ ಅಣ್ಣ–ತಮ್ಮಂದಿರು, ಅಣ್ಣತಂಗಿಯರ ವೈಮನಸ್ಸು ಮತ್ತೆ ಒಂದಾಗುವ ಪ್ರಸಂಗ ಈ ಕಥೆಗಳಲ್ಲಿ ಕಂಡುಬರುತ್ತದೆ ಪ್ರಸ್ತುತ ನಮ್ಮ ಸಮಾಜದಲ್ಲಿ ಸ್ವಾರ್ಥವೆ ಹೆಚ್ಚಾಗಿ ಕಂಡುಬರುತ್ತದೆ.

ಗ್ರಾಮೀಣ ಜನರ ನೈಜ ಬದುಕನ್ನು ತೆರೆದಿಡುವ ಪ್ರಯತ್ನ ಈ ಕಥೆಗಳಲ್ಲಿ ಕಂಡುಬರುತ್ತದೆ. ಅವರ ಸುತ್ತಮುತ್ತಲಿನಲ್ಲಿ ನಡೆಯುವ ಅನೇಕ ಸಮಸ್ಯೆಗಳನ್ನು ಎತ್ತಿ ಹಿಡಿದಿದ್ದಾರೆ. ಸಮಾಜ ಎಂದ ಮೇಲೆ ಯಾವರೀತಿಯ ಅನೇಕ ಸಮಸ್ಯೆಗಳು ಕಂಡುಬರುತ್ತದೆ. ಅದರ ಪರಿಹಾರಗಳನ್ನು ಕಂಡುಕೊಳ್ಳುವ ಬಗೆ ನಾವು ಇಲ್ಲಿ ಕಾಣಬಹುದು.

ಹಳ್ಳಿಗಾಡಿನ ಜನರು ಮುಗ್ಧರು ಅವರಿಗೆ ಒಳಿತು–ಕೆಡಕುಗಳ ಅರಿವು ಅಷ್ಟಾಗಿ ಇರುವುದಿಲ್ಲ. ಎಲ್ಲವನ್ನು ಮುಗ್ಧರ ಹಾಗೆ ನಂಬುತ್ತಾರೆ. ನಂಬಿದವರನ್ನು ಕೈ ಬಿಡುವುದಿಲ್ಲ. ಇಲ್ಲಿ ರೈತ ಕೆಂಪಯ್ಯ. ಹೇಗೋ ಇದ್ದುದರಲ್ಲಿ ಉತ್ತಮ ಜೀವನ ನಡೆಸಿಕೊಂಡು ಹೋಗುತ್ತಾನೆ. ಅವನಿಗೆ ನಾಲ್ಕು ಜನ ಮಕ್ಕಳು ಇದ್ದುದರಲ್ಲಿ ಸಂಸಾರವನ್ನು ಸಾಗಿಸಿಕೊಂಡು ಹೋಗುತ್ತಾನೆ. ಅಲ್ಲಿಗೆ ಬಂದ ಪಟ್ಟಣವಾಸಿಗಳಾದ ಅಯ್ಯಂಗಾರ್ ಪಕ್ಕದ ಗದ್ದೆ ತೆಗೆದುಕೊಂಡು ಬಿಡುತ್ತಾರೆ. ಇವರ ಭೇಟಿಯಾದಾಗ ಕೆಂಪಯ್ಯ ಅವರಿಗೆ ಬೇಸಾಯದ ಬಗ್ಗೆ ಸಹಾಯ ಮಾಡುವುದಾಗಿ ಹೇಳಿ ಅವರಿಗೆ ಸಹಾಯ ಮಾಡುತ್ತಾನೆ. ಅವರು ಒಳ್ಳೆ ಬೆಳೆ ಬೆಳೆಯುತ್ತಾರೆ. ಅವರು ವ್ಯವಸಾಯದ ಅನೇಕ ಪುಸ್ತಕಗಳನ್ನು ಓದಿ ಉತ್ತಮ ಸಲಕರಣೆಗಳನ್ನು ತಂದು ಆ ಊರಿನಲ್ಲಿ ಮಾದರಿ ರೈತ ಎಂಬ ಪಟ್ಟಕೆ ಬರುತ್ತಾರೆ. ಅವರು ಪಟ್ಟಣದ ಜೀವನ ಬೇಸತ್ತು ಬಂದು ಇವರಿಗೆ ಉತ್ತಮ ನೆಮ್ಮದಿ ಜೀವನ ಅವರದ್ದಾಗಿರುತ್ತದೆ. ಅವರಿಗೆ ಮಕ್ಕಳಿರುವುದಿಲ್ಲ. ಮೊದಮೊದಲು ಸಂತೋಷಪಟ್ಟ ಕೆಂಪಯ್ಯ ನಂತರ ಅವನಿಗೆ ಅಸೂಯೆ ಮೂಡುತ್ತದೆ. ಕಾರಣ ಬಡತನ, ಮನೆತುಂಬ ಮಕ್ಕಳು. ಪಕ್ಕದಲ್ಲಿಯೇ

ಹುಲುಸಾಗಿ ಬೆಳೆದ ಬೆಳೆ ಎಲ್ಲವೂ ಸಹ ಅವರಿಗೆ ಸರ್ಕಾರದ ಪತ್ರ ನೀಡಿದಾಗ ಮುಖ ತಿರುಗಿ ಹೋಗಿದ್ದವನು ಮತ್ತೆ ಬಂದು ಮಾತನಾಡಿಸುತ್ತಾನೆ. ಅವನ ಪರಿಸ್ಥಿತಿಯನ್ನು ಅರಿತ ಅಯ್ಯಂಗಾರರು ಅವನಿಗೆ ಹೇಗಾದರೂ ಸಹಾಯ ಮಾಡಬೇಕು ಇಲ್ಲದಿದ್ದರೆ ಅವನ ಸ್ಥಿತಿಗೆ ನಾನೇ ಕಾರಣವಾಗುತ್ತೇನೆಂದು ಯೋಚಿಸುತ್ತಾರೆ ಅಯ್ಯಂಗಾರ್‌ರವರು.

ಅವರು ಕುಲದಲ್ಲಿ ನಮಗಿಂತ ಹಿರಿಯರೆಂದು ಅವರ ಮೇಲೆ ಜಗಳ ಮಾಡುವ ಧೈರ್ಯ ಅವನಿಗಿರಲಿಲ್ಲ. ಹಾಗೆಯೇ ಒಂದು ದಿನ ಯಾರೋ ಅವರನ್ನು ಇಲ್ಲಿಂದ ಕಳುಹಿಸಿಬಿಡು ನಿಮ್ಮ ಈ ಪರಿಸ್ಥಿತಿಗೆ ಅವರೇ ಕಾರಣರಲ್ಲವ ಎಂದಾಗ ಅವರು ನಮಗೇನು ಮೋಸ ಮಾಡಿದರೂ ಕೊನೆಯ ಕಾಲದಲ್ಲಿ ನೆಮ್ಮದಿಯಾಗಿ ರಾಮಕೃಷ್ಣ ಎಂದು ಜೀವನ ನಡೆಸಲಿ. ಅವರನ್ನು ಯಾರು ನೋಯಿಸಬೇಡಿ ಎಂದು ಹೇಳುತ್ತಾನೆ. ಅಧಿಕ ವ್ಯವಸಾಯೋತ್ಪಾದನೆಗಾಗಿ ಸರ್ಕಾರದವರು ಒದಗಿಸುವ ಸುಧಾರಿತ ಬೀಜ, ಗೊಬ್ಬರ, ಉಪಕರಣಗಳಿಂದು ಹುಲುಸು ಬೆಳೆ ಬೆಳೆದ ಅಯ್ಯಂಗಾರರಿಗೆ ಸರ್ಕಾರದಿಂದ ಪ್ರೋತ್ಸಾಹ ಸೂಚಕ ಪ್ರಸಿದ್ಧಿ ಪತ್ರ ದೊರೆಕಿದಾಗ ತನಗೆ ದೊರಕಲಿಲ್ಲವೆಂಬ ಅಸೂಯೆ ಹಳ್ಳಿಯ ನಿಷ್ಠಾವಂತ ರೈತನಾದ ಕೆಂಪಯ್ಯನಲ್ಲಿ ಮೂಡಿ, ಕೊನೆಗೆ ಹೇಗೆ ಮಾಯವಾಗಿ ಮನಸ್ಸು ಹಸುರಾಯಿತು ಎಂಬುದನ್ನು ಹುಲುಸುಬೆಳೆ ಹಸಿರು ಮನ ಕಥೆಯಲ್ಲಿ ಆದರ್ಶ ರೈತನಾದುದನ್ನು ನಾವು ಕಾಣಬಹುದು.

ಹಳ್ಳಿಗಾಡಿನವರೂ ತಾವು ಕಂಡಿರದಿದ್ದರೂ ಕೇಳಿದ ದೆವ್ವ-ಪಿಶಾಚಿಗಳ ಕತೆಗೆ ಹುಳಿ, ಉಪ್ಪು, ಖಾರ ಹಚ್ಚಿ ಉಳಿದವರ ಭೀತಿ, ಬಿತ್ತುವುದನ್ನು ಕಟ್ಟಡ, ಕೆರೆ ಕಟ್ಟುವಾಗ ಧಾನ್ಯ, ಒಕ್ಕುವಾಗ ರಾಹು ಬಡಿಯುವುದುಂಟು ಅದಕ್ಕೆ ಪ್ರಾಣಿ ಬಲಿಕೊಟ್ಟು ಶಾಂತಿ ಮಾಡಬೇಕು ಎಂಬ ಮೂಢನಂಬಿಕೆಯನ್ನು ಅಂಥ ಮೂಢನಂಬಿಕೆಯ ಸಂಕೇತವಾದ 'ಸ್ವಾಮಿ' ಕಾರ್ಯಕ್ಕೆ ಅಲ್ಲಿಯವರೆಗೂ ಅನ್ಯರ ಚಾಡಿ ಮಾತುಗಳಿಂದ ಅಣ್ಣನಿಂದ ದೂರವಿದ್ದ ತಮ್ಮ ವೈಮನಸ್ಸನ್ನು ಮರೆತು ಅದರಲ್ಲಿ ಪಾಲುಗೊಳ್ಳುವುದನ್ನು ಮೇಲಾಗಿ ಹಳ್ಳಿಗಾಡಿನ ಜನಗಳಲ್ಲಿ ಎಷ್ಟೇ ಕಚ್ಚಾಟ ಕಿತ್ತಾಟಗಳಿದ್ದರೂ, ಹಬ್ಬ, ಹರಿದಿನ ಸ್ವಾಮಿ ಕಾರ್ಯ ಎಂದು ಕ್ಷಣ ಹೇಗೆ ಎಲ್ಲವನ್ನು ಮರೆತು ಪಾಲ್ಗೊಳ್ಳುತ್ತಾರೆ ಎಂಬ ಸತ್ಯವನ್ನು ಈ ಕಥೆಯಲ್ಲಿ ಕಂಡುಬರುತ್ತದೆ. ಅಷ್ಟೇ ಅಲ್ಲದೆ ಈ ಕತೆ ಸ್ವಲ್ಪ ಸಾಂಕೇತಿಕವಾಗಿಯೂ ಇದೆ. ಮರಿಯನ್ನು ಬಲಿಕೊಟ್ಟದ್ದರಿಂದ ರಾಹುವಿಗೆ ಶಾಂತಿಯಾಯಿತು. ಇನ್ನು ಭಯವಿಲ್ಲ ಎಂಬ

ವಾಚ್ಯಾರ್ಥದ ಹಿಂದೆ ತಮ್ಮನಲ್ಲಿ ಮನೆ ಮಾಡಿಕೊಂಡಿದ್ದ ಕೆಟ್ಟ ಭಾವನೆಯ ವೈಮನಸ್ಸು ರಾಹುವಿಗೆ ಶಾಂತಿಯಾಗಿ ಸೌಮನಸ್ಸ ಮೂಡಿತು ಎಂಬ ಧ್ವನ್ಯರ್ಥವಿದೆ. ಸಾಲದೆಂಬಂತೆ ಅಣ್ಣನಿಂದ ಸಿಡಿದು ದೂರವಾಗಿದ್ದ ತಮ್ಮನ ಕೈಯಿಂದಲೇ ಬಲಿ ಕೊಡಬೇಕಾದ ಮರಿಯನ್ನು ಕತ್ತರಿಸುವುದು. ಅರ್ಥಪೂರ್ಣವಾಗಿದೆ. "ಅಡ್ಡ ಬಂದುದನ್ನು ಕತ್ತರಿಸಿ ಕ್ಷಣಾರ್ಧದಲ್ಲಿ ನೆಲ ಮುಟ್ಟಿತು ಕೊಡಲಿ! (ಸ್ವಾಮಿತ್ತಿ. ಪು.ಸ.೬೩) ಅಂದರೆ ಇದರ ಒಳಾರ್ಥ ಒಳದನಿಯಿಂದ ಕೂಡಿ ಸಾಂಕೇತಿಕಾರ್ಥವನ್ನು ನೀಡಿದೆ. ತಮ್ಮಿಬ್ಬರ ಮಧ್ಯೆ ಅಡ್ಡವಾಗಿ ನಿಂತಿದ್ದ ವೈಮನಸ್ಯವನ್ನು ಕತ್ತರಿಸಿ ಒಂದಾದರೂ ಎಂಬುದಕ್ಕೆ ಇದು ಸಂಕೇತವಾಗುತ್ತದೆ. ಹಳ್ಳಿಗಾಡಿನ ಜನರಲ್ಲಿ ಭೂತ ಪಿಶಾಚಿಗಳಲ್ಲಿರುವ ನಂಬಿಕೆ ಅವುಗಳ ಬಗ್ಗೆ ಹುಟ್ಟಿಕೊಳ್ಳುವ ಕಟ್ಟುಕತೆ. ರಾವಿಗೆ (ರಾಹು) ಸಾಮ್ತಿ (ಶಾಂತಿ) ಮಾಡುವ ಸಂದರ್ಭವೇ ಕೆಟ್ಟ ಚಟಗಳಿಗೆ ಬಲಿಯಾಗಿ ಚಾಡಿಕೋರರ ಮಾತಿನಿಂದ ಅಣ್ಣನಿಂದ ದೂರವಾಗಿದ್ದ ತಮ್ಮನನ್ನು ಹೇಗೆ ಹತ್ತಿರಕ್ಕೆ ಕರೆತರುವ ಕಾರ್ಯವಾಯಿತು ಎಂದು ತಿಳಿಯುತ್ತದೆ. ಎಷ್ಟೇ ವೈಮನಸ್ಯ ಇದ್ದರೂ ಹೇಗಾದರೂ ಬಂದು ಸಂಬಂಧ ಕೂಡಿ ಸೇರಿಕೊಳ್ಳುತ್ತದೆಯೆಂಬುದು ಈ ಸಾಮ್ತಿ ಕತೆ ಸಾಕ್ಷಿಯಾಗಿದೆ.

'ಗೂಡು' ಕತೆಯಲ್ಲಿ ಗ್ರಾಮ್ಯ ಜೀವನ ಬದುಕಿನಲ್ಲಿ ಸಹೋದರತ್ವ ಭಾವನೆಗಳು ಹೇಗೆ ಇದ್ದವು ನಂತರ ಕಾಲದಲ್ಲಿ ಬದಲಾದ ಭಾವನೆಗಳನ್ನು ಕಾಣಬಹುದು. ಹುಟ್ಟುತ್ತ ಅಣ್ಣ-ತಮ್ಮಂದಿರು ಬೆಳೆಬೆಳೆಯುತ್ತಾ ದಾಯಾದಿಗಳು ಎನ್ನುವ ಗಾದೆಯಂತೆ ಜೀವನ ಸಾಗಿಸಲು ಅವರವರ ನೆಲೆ ಕಂಡುಕೊಳ್ಳುವ ಬಗೆಯಲ್ಲಿ ಸಂಬಂಧದ ಬೆಲೆಯನ್ನು ಮರೆಯುತ್ತಾರೆ. ಹೊರುವವರಿಗೆ ಹೆಚ್ಚು ಹೊರೆ ಎನ್ನುವ ಹಾಗೇ ಈ ಕತೆಯಲ್ಲಿ ಈರಿ ಪ್ರತಿಯೊಂದರ ಜವಾಬ್ದಾರಿಯೂ ಅವಳದೇ ಆಗಿರುತ್ತದೆ. ಯಾರೂ ಸಹ ಅವಳ ಸಹಾಯಕ್ಕೆ ಬರುವುದಿಲ್ಲ ವಾರಗಿತ್ತಿ ತನ್ನ ಮಕ್ಕಳ ಜವಾಬ್ದಾರಿ ಇವಳಿಗೆ ವಹಿಸಿ ತಾನು ಆರಾಮಾಗಿ ಕಾಲ ಕಳೆಯುತ್ತಿರುತ್ತಾಳೆ. ಸಿದ್ದಣ್ಣನಿಗೂ ಹಾಗೆಯೇ ತಂದೆ ಕರಿಯನಿಗೆ ಹೇಳಿದ ಕೆಲಸದ ಎಲ್ಲ ಜವಾಬ್ದಾರಿಯನ್ನು ತಮ್ಮನಿಗೆ ಹೇಳಿ ತಾನು ಆರಾಮಾಗಿ ಹೆಂಡಿತಿಯ ಜೊತೆ ಸಂಯಮವನ್ನು ಕಳೆಯುತ್ತಾನೆ. ಹೊಲ ಗದ್ದೆ ಎಲ್ಲದರ ಜವಾಬ್ದಾರಿಯನ್ನು ಸಿದ್ದಣ್ಣನಿಗೆ ಬಿದ್ದಿರುತ್ತದೆ. ಹೀಗೆ ಹಲವಾರು ದಿನಗಳು ಉರುಳುತ್ತವೆ. ಒಂದು ದಿನ ತಂದೆಯನ್ನು ಪಾಲು ಮಾಡುವಂತೆ ಕೇಳುತ್ತಾನೆ. ದಿಗ್ಭ್ರಾಂತನಾದ ತಂದೆ ಎಲ್ಲರೂ ಒಟ್ಟಿಗೆ ಇರೋಣ ಎಂದರೆ ನನ್ನ ಹೆಂಡತಿ ಅವನ

ಹೆಂಡತಿ, ಮಕ್ಕಳ ಚಾಕರಿ ಮಾಡಿಕೊಂಡಿರಬೇಕಾ ಎಂದು ಗಡುಸಾಗಿ ಉತ್ತರಿಸುತ್ತಾನೆ. ಮಾತು ಮಾತು ಹೆಚ್ಚಾಗಿ ಒಬ್ಬರನೊಬ್ಬರು ಹೀಯಾಳಿಸಲು ಆರಂಭಿಸಿರುತ್ತಾರೆ. ಇಲ್ಲಿ ಇಬ್ಬರು ಒಟ್ಟಿಗೆ ದುಡಿಮೆ ಮಾಡಿದರೆ ಒಟ್ಟಿಗೆ ಜೀವನ ನಡೆಸಬಹುದಿತ್ತು. ಆದರೆ ಒಬ್ಬನ ಮೇಲೆ ಹೆಚ್ಚು ಹೊರೆ ಬಿದ್ದುದರಿಂದ ಪಾಲು ಕೇಳುತ್ತಾನೆ. ಈರಿ ಮತ್ತು ಸಿದ್ದಣ್ಣ ಯಾವಾಗಲೂ ಕೂತು ಪ್ರೀತಿಯಿಂದ ಮಾತನಾಡಿದ ದಿನಗಳೇ ಇರಲಿಲ್ಲ. ಬದಲಿಗೆ ಮೂರು ಹೊತ್ತು ಕೆಲಸ ಕೆಲಸ ಎಂದು ತಮ್ಮ ತಮ್ಮನ್ನು ಅರ್ಥಮಾಡಿಕೊಳ್ಳುವುದರಲ್ಲಿ ಹಿಂದಿದ್ದರು. ಅವರ ಆಸೆ ಆಕಾಂಕ್ಷೆಗಳಿಗೆ ಯಾರು ಅಲ್ಲಿ ಬೆಲೆಕೊಡುತ್ತಿರಲಿಲ್ಲ. ಅವರ ಪಾಡಿಗೆ ಅವರವರ ಕೆಲಸದಲ್ಲಿ ತೊಡಗುತ್ತಿದ್ದರು. ಆದ್ದರಿಂದ ಇವರು ನಮ್ಮ ಮುಂದಿನ ಭವಿಷ್ಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ತಂದೆಯ ಬಳಿ ಪಾಲು ಕೇಳುತ್ತಾರೆ. ಆದರೆ ವಯಸ್ಸಾದ ತಂದೆಯ ಮನಸ್ಥಿತಿಯನ್ನು ಯಾರು ಅರಿಯುವುದಿಲ್ಲ. ತಂದೆ ಮೂಲೆಯಲ್ಲಿ ಮಂಕಾಗಿ ಕೂರುತ್ತಾರೆ. ಸಿದ್ದಣ್ಣ ಮತ್ತು ಈರಿ ಈ ದಿನ ನಮಗೆ ಕಷ್ಟದಿಂದ ಬಿಡುಗಡೆ ಸಿಕ್ಕಿ ಮುಂದೆ ನಮ್ಮ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಬೇಕು ನಮ್ಮ ಭವಿಷ್ಯದ ಜೀವನವನ್ನು ರೂಪಿಸಿಕೊಳ್ಳಬೇಕು ಎಂದು ನಿರ್ಧರಿಸುತ್ತಾರೆ. ಅವರವರು ತಮ್ಮ ನೆಲೆ ಕಂಡುಕೊಳ್ಳುವಲ್ಲಿ ಸಂಬಂಧದ ಬೆಲೆ ತಿಳಿಯುವುದಿಲ್ಲ ಇಲ್ಲಿ ಈ ಗೂಡು ಕತೆಯಲ್ಲಿ.

ಹಳ್ಳಿಯ ಮುಗ್ಧ ಹುಡುಗ ಬೇಸರದಲ್ಲಿ ಜೀವನದಲ್ಲಿ ಲವಲವಿಕೆಯನ್ನು ಕಳೆದುಕೊಂಡಿದ್ದನು. ಜೀವನ ಒಂದಷ್ಟು ತನಗಾದ ಅನುಭವಗಳನ್ನು ನೆನೆಸಿಕೊಳ್ಳುತ್ತಾ ಒಂದು ಬಾರಿ ಬೇಸರದಿಂದಿರಲು ಮತ್ತೊಂದು ಬಾರಿ ಸಂತೋಷದ ಕ್ಷಣ ನೆನಸಿಕೊಂಡು ನಗುತ್ತಾನೆ. ತಂದೆ ತಾಯಿಗಳಿಗೆ ಮಕ್ಕಳ ಬಗ್ಗೆ ಹೆಚ್ಚಿನ ಜವಾಬ್ದಾರಿ ಇರುತ್ತದೆ. ಅದಕ್ಕೆ ಆ ದಿನ ತಂದೆ ಮನೆಯಲ್ಲಿ ಇರು ಎಂದು ಹೇಳುತ್ತಾರೆ. ಆಗ ಇವನಿಗೆ ಭಯವಾಗುತ್ತದೆ ಒಂದು ದಿನ ಅಪ್ಪ ತನ್ನನ್ನು ಅಪನಂಬಿಕೆಯಿಂದ ನೋಡಿರಲಿಲ್ಲ. ಇಂದೇನಾದರೂ ತಪ್ಪು ಮಾಡಿದೆನಾ ತಿಳಿಯದು ಎಂದು ತಂದೆ ಆಜ್ಞೆ ಮಾಡಿದ್ದನ್ನು ನೆನಸಿಕೊಳ್ಳುತ್ತಿರುತ್ತಾನೆ. ತಂದೆ ಜವಾಬ್ದಾರಿಯುತವಾಗಿ ಮಾತನಾಡುತ್ತಿದ್ದಾರೆ. ಅಪ್ಪ ಮಗ ಬೆಳವಣಿಗೆ ತಿಳಿದು ದಾರಿ ತಪ್ಪದಿರಲಿ ಎಂದು ಹಾಗೇ ಹೇಳಿರಬೇಕು ಎಂದುಕೊಂಡ ಅವನ ಜೊತೆ ಕೆಲಸ ಮಾಡುವ ಕುಸುಮ ಈಗ ಹೆಚ್ಚು ಹೆಚ್ಚು ಸಲಿಗೆಯಿಂದಿರುತ್ತಾಳೆ. ಎಲ್ಲರೂ

[illegible]

ಅದನ್ನು ನೋಡಿ ರೇಗಿಸಿದ್ದುಂಟು. ಆ ವಯಸ್ಸಿನಲ್ಲಿ ಆಕರ್ಷಣೆಯಿಂದಾಗಿ ಇವನ ಜೊತೆ ಹೆಚ್ಚು ಸಮಯ ಕಳೆಯಲಿ ಇಚ್ಚಿಸುತ್ತಾಳೆ.

ಅಂದು ಅವನ ಸ್ನೇಹಿತ ಮುದ್ದೀರ ಸಿಕ್ಕಿ ಅವನೂರಿಗೆ ಹೋಗೋಣ ಎಂದು ಕರೆದುಕೊಂಡು ಹೋಗುತ್ತಾನೆ. ಅಲ್ಲಿ ಪರಿಸರದ ವಾತಾವರಣ ಪ್ರಕೃತಿಯ ಸೊಬಗನ್ನು ನೋಡುತ್ತಾ ತಮ್ಮ ಹೊಲಗದ್ದೆಗಳನ್ನು ಅವನು ಸ್ನೇಹಿತನಿಗೆ ತೋರಿಸುತ್ತಾನೆ. ಅವನ ತಂಗಿ ಇವನನ್ನು ನೋಡಿ ನಾಚಿ ಒಳಗೆ ಓಡುತ್ತಾಳೆ. ಆಗ ತನ್ನ ತಂದೆಯ ಪರಿಚಯ ಮಾಡುತ್ತಾನೆ. ತನ್ನ ತಂಗಿಯ ಪರಿಚಯವನ್ನು ಮಾಡಿಕೊಡುತ್ತಾನೆ. ಹಳ್ಳಿಯ ಜನ ಆದ್ದರಿಂದ ಒರಟು ದನಿಯಲ್ಲಿಯೇ ಇವನನ್ನು ಬರಮಾಡಿಕೊಳ್ಳುತ್ತಾರೆ. ಕೊನೆಯದಾಗಿ ಮುದ್ದೀರ ಕೇಳುತ್ತಾನೆ. ನನ್ನ ತಂಗಿ ನೋಡಿ ನಿನ್ನ ಅಭಿಪ್ರಾಯವೆಂದು ಅದಕ್ಕೆ ಅವನು ಉತ್ತರಿಸುವುದಿಲ್ಲ. ಪರವಾಗಿಲ್ಲ. ನಿನಗೆ ಇಷ್ಟ ಅಲ್ಲವ ಎಂದು ಅವನೇ ತಿಳಿದು ಸಂತೋಷದಿಂದ ತನ್ನ ತಂದೆಗೆ ತಿಳಿಸಲು ಹೋಗುತ್ತಾನೆ. ಅಲ್ಲಿಂದ ತನ್ನ ಊರಿಗೆ ಬರುತ್ತಾನೆ. ಅಲ್ಲಿ ತಂದೆ ಎಲ್ಲವನ್ನು ವಿಚಾರಿಸುತ್ತಾರೆ. ಅವನೆ ಗೊಂದಲದಲ್ಲಿ ಸಿಲುಕಿ ಇಷ್ಟವೋ? ಇಲ್ಲವೋ? ಎನ್ನುವ ಸಂಶಯದಲ್ಲಿರುತ್ತಾನೆ. ಕೆಲವು ದಿನ ಕಾಗದ ಬರೆಯುತ್ತಿರುತ್ತಾರೆ ನಂತರ ಅದು ನಿಂತು ಹೋಗುತ್ತದೆ. ಊರಿಂದ ಆಳು ಕಳುಹಿಸಿ ಕ್ಷೇಮಸಮಾಚಾರ ತಿಳಿದುಕೊಂಡು ಬಂದ ಆಳಿಗೆ ಒರಟಾಗಿ ಉತ್ತರಿಸಿ ಕಳುಹಿಸುತ್ತಾನೆ.

ಅವನು ಗೊಂದಲದಲ್ಲಿ ಸಿಲುಕಿರುತ್ತಾನೆ. ನಾನು ಅವಳನ್ನು ಇಷ್ಟಪಡುತ್ತೀನಾ? ಇಲ್ಲವಾ? ಎಂದು ತಂದೆ ಒಂದು ಹಳ್ಳಿ ಹೇಗಿದೆ ಅಲ್ಲಿ ಒಂದು ಹುಡುಗಿ ಇರುವುದು ನಮಗೆ ಗೊತ್ತೆ ಇರಲಿಲ್ಲ ಎಂದಾಗ ತಬ್ಬಿಬ್ಬಾಗಿ ಹೌದು ಎಂದು ಹೇಳುತ್ತಾನೆ. ಆಗ ಅವರು ನಿನಗೆ ಇಷ್ಟನಾ ಎಂದು ಕೇಳಿದಾಗ ಅವರ ಪ್ರಶ್ನೆಗೆ ಉತ್ತರಿಸಲಾಗದೆ ಊ್ಞ? ಊ್ಞ ಎಂದು ಹೇಳಿದೆ ಆಗ ಉಗ್ರಪ್ಪ ಪತ್ರ ಬಂದಾಗ ಹೆದರಿದೆ? ಅಲ್ಲಿ ಮುದ್ದೀರನ ತಂಗಿ ಬಹಳ ಪ್ರೀತಿಯಿಂದ ಇವನನ್ನು ನೋಡಿಕೊಂಡಿದ್ದಳು. ಆಗ ಅವನು ಕುಸುಮಳ ಜೊತೆನೋಡಿ ಹೋಲಿಕೆ ಮಾಡುತ್ತಿದ್ದ ಮತ್ತೆ ಸುಮ್ಮನಾಗುತ್ತಾನೆ. ಕೆಲವರು ನೀವು ಅನುಕೂಲಸ್ಥರ ಮನೆಯಿಂದ ಹೆಣ್ಣು ತರುತ್ತೀರಾ ಎಂದಾಗ ಇವನಿಗೆ ಗಾಬರಿಯಾಗುತ್ತಿತ್ತು. ಇವನನ್ನೇ ನೋಡುತ್ತಿದ್ದರು. ಆಗ ತನ್ನ ಮನಸ್ಸಿನ ಆಸೆ ಹೇಳಿಬಿಟ್ಟ ಅನುಕೂಲಸ್ಥರ ಮನೆ ಚಂದನ ಬಿಡಪ್ಪ ಎಂದು ಹೇಳುತ್ತಾನೆ. ಇಲ್ಲಿ ಕುಸುಮ

ಅವನ ಜೊತೆ ಸಲುಗೆಯಿಂದ ನಡೆದುಕೊಳ್ಳುವುದು ಯೌವನದಲ್ಲಿ ಆಗುವ ಮನೋಸ್ಥಿತಿಯ ಬದಲಾವಣೆ ಮಕ್ಕಳ ಬಗ್ಗೆ ತಂದೆ ತಾಯಿಗಳಿಗೆ ಜವಾಬ್ದಾರಿ. ಕಾಳಜಿ ಸ್ನೇಹಿತನು ಸಂಬಂಧಿಯಾಗುವ ಆಸೆಯನ್ನು ಈ ಬೇಟೆ ಕಥೆಯಲ್ಲಿ ಕಾಣಬಹುದು.

ಒಬ್ಬ ವಿಧವೆ ಹೆಂಗಸಿನ ಜೀವನ ಪರಿ ಇಲ್ಲಿದೆ. ಅತೀ ಚಿಕ್ಕ ವಯಸ್ಸಿನಲ್ಲಿಯೇ ಮದುವೆ ಮಾಡಿ ಅತೀ ವೇಗವಾಗಿ ಜೀವನ ಮುಗಿದು ಹೋದ ಒಬ್ಬ ವಿಧವೆ ಕೆಂಪವ್ವನ ಕಥೆ ಗಂಡನನ್ನು ಕಳೆದುಕೊಂಡ ಈಕೆ ಊರಿನ ಕೆಲವು ಹೊಲ, ಗದ್ದೆಗಳಲ್ಲಿ ಕೂಲಿ ಹಾಳಾಗಿ ಕೆಲಸ ಮಾಡುತ್ತಿರುತ್ತಾರೆ. ಇವಳ ಜೊತೆ ಅನೇಕ ಹೆಂಗಸರ ಕೂಲಿ ಕೆಲಸ ಮಾಡುತ್ತಿರುತ್ತಾರೆ. ಕೆಲಸ ಮಾಡುತ್ತಿರುತ್ತಾರೆ. ಇವಳ ಜೊತೆ ಅನೇಕ ಹೆಂಗಸರ ಕೂಲಿ ಕೆಲಸ ಮಾಡುತ್ತಿರುತ್ತಾರೆ. ಒಬ್ಬಂಟಿತನದ ಜೀವನ ಮಕ್ಕಳಿಲ್ಲದ ಅವಳು ಏಕಾಂಗಿಯಾಗಿ ಜೀವಿಸುತ್ತಿರುತ್ತಾಳೆ. ಅದೇ ಊರಿನಲ್ಲಿ ತನ್ನ ತಂಗಿಯ ಮಗ ಮತ್ತು ತಂಗಿಯ ಗಂಡ ಇರುತ್ತಾನೆ. ಅವನು ಸಹ ಅತಿ ಚಿಕ್ಕ ವಯಸ್ಸಿನಲ್ಲಿ ಹೆಂಡತಿಯನ್ನು ಕಳೆದುಕೊಂಡ ಎಷ್ಟೋ ಬಾರಿ ಇವರಿಬ್ಬರು ಮಾತನಾಡುತ್ತಿರುವುದನ್ನು ನೋಡಿ ಕೆಲವರು ಇವರ ಬಗ್ಗೆ ಇಲ್ಲಸಲ್ಲದ ಸಂಬಂಧವನ್ನು ಕಟ್ಟುತ್ತಾರೆ. ಆದರೆ ಅವಳು ತಲೆಕೆಡಿಸಿಕೊಳ್ಳುವುದಿಲ್ಲ. ಒಂದು ಬಾರಿ ಮಾತ್ರ ಅವಳು ಅವನ ಬಗ್ಗೆ ಯೋಚಿಸುತ್ತಾ ಅವನ ಜೊತೆ ಕೂಡಿಕೆಗೆ ಆಸೆ ಪಡುತ್ತಾಳೆ ಮರುಕ್ಷಣವೇ ತಪ್ಪು ಎಂದು ತನ್ನನ್ನು ತಾನೇ ಬೈದುಕೊಂಡು ಸುಮ್ಮನಾಗುತ್ತಾಳೆ. ಊರಿನಲ್ಲಿ ಗಟ್ಟಿಗಿತ್ತಿ ಹೆಂಗಸು ಯಾರ ಗದ್ದೆ ಕೆಲಸಕ್ಕೆ ಮೊದಲು ಇವಳನ್ನೇ ಕರೆಯುತ್ತಾರೆ. ಅಷ್ಟು ನಂಬಿಕಸ್ಥ ಕೆಲಸದವಳು ಒಂದು ಬಾರಿ ಮಾತುಕೊಟ್ಟರೆ ಆ ಮಾತನ್ನು ಇವಳು ಮೀರುವುದಿಲ್ಲ.

ಆದರೆ ಒಂದು ಬಾರಿ ಆ ಹಳ್ಳಿಯಲ್ಲಿ ಮಳೆ ಹೆಚ್ಚಾಗಿ ಬಂದಾಗ ಗದ್ದೆ ಕೆಲಸ ಪ್ರಾರಂಭವಾಗುತ್ತದೆ. ಅದೇ ಊರಿನ ಮತ್ತೊಬ್ಬ ವಿಧವೆ ತಿಮ್ಮಿ ಆ ದಿನಗಳಲ್ಲಿ ಕೂಲಿಯನ್ನು ೧೫ ರಿಂದ ೨೦ಕ್ಕೆ ಏರಿಸುತ್ತಾಳೆ. ಆಗ ಕೆಂಪವ್ವ ತನ್ನ ಕೆಲವು ಕೂಲಿ ಹಾಳುಗಳ ಜೊತೆ ೧೫ ರೂಪಾಯಿಗೆ ನಾಟಿಕೆಲಸ ಮುಗಿಸುತ್ತಾಳೆ. ಎಲ್ಲರು ಇವಳನ್ನು ಹೊಗಳುತ್ತಾರೆ. ಅವಳಿಗೆ ಹಿಡಿಶಾಪ ಹಾಕುತ್ತಾರೆ. ತನ್ನಂತೆ ವಿಧವೆಯೆಂದು ನೆನೆದು ಮರುಗಿದರೂ ಆ ಕೆಲಸ ಅವಳು ಮಾಡಿದ್ದರಿಂದ ಅವಳ ಬಗ್ಗೆ ಅಸಡ್ಡೆ ಮೂಡುತ್ತದೆ. ತನ್ನ ತಂಗಿಯ ಮಗನಿಗೆ ಮದುವೆ ಮಾಡುವ ಪ್ರಸ್ತಾಪ ಬಂದಾಗ ಅವಳು ಅವನನ್ನು ಬೇಗ ಮದುವೆಯಾಗು ತಂದೆಯ

[illegible]

ಜವಾಬ್ದಾರಿ ಕಡಿಮೆ ಮಾಡು ಎಂದು ಹೇಳುತ್ತಾಳೆ. ತನ್ನ ಮೈದುನನ ಜೊತೆ ವಿಷಯ ತಿಳಿಸಬೇಕೆಂದು ಕೆಲಸದಿಂದ ಬರುವಾಗ ಅವನು ದಾರಿಯಲ್ಲಿ ಸಿಕ್ಕಾಗ ಅವಳ ಜೊತೆ ಇದ್ದವರೆಲ್ಲರನ್ನು ಕಳುಹಿಸಿ ಹೇಳುತ್ತಾಳೆ. ಮಗನಿಗೆ ಬೇಗ ಮದುವೆ ಮಾಡು ಮಗಾ ಎಂದಾಗ ಅವನು ನಮ್ಮಿಬ್ಬರನ್ನು ನೋಡಿಕೊಂಡು ನಮ್ಮ ಮನೆಯಲ್ಲಿಯೇ ಇದ್ದು ಬಿಡಿ ಎಂದು ಕೇಳಿಕೊಳ್ಳುತ್ತಾನೆ. ಆಗ ಅವಳು ನನ್ನ ಜೀವನ ಹೇಗೋ ನಡೆಯಿತು ನೀವಾದರೂ ನೆಮ್ಮದಿಯಿಂದ ಇರಿ ಎಂದು ಹೇಳುತ್ತಾಳೆ. ಆಗ ಅವನು ಒಪ್ಪುತ್ತಾನೆ.

ಇಲ್ಲಿ ಒಬ್ಬ ಆದರ್ಶ ವ್ಯಕ್ತಿತ್ವವಿರುವ ಒಬ್ಬ ಮಹಿಳೆಯನ್ನು ನಾವು ಕಾಣಬಹುದು. ಇಲ್ಲಿ ಯಾವ ತರಹ ಕೆಟ್ಟ ಚಾಳಿಗೂ ಬೀಳದೆ ಬೇರೆ ಯಾರಿಗೂ ನೋವನ್ನು ನೀಡದೆ ಒಬ್ಬ ನಂಬಿಕಸ್ಥ ಆಳಾಗಿ ಇರುತ್ತಾಳೆ. ಕೆಲಸದಲ್ಲಿ ಬಹಳ ಅಚ್ಚುಕಟ್ಟಾಗಿ ನಿರ್ವಹಿಸುತ್ತಿರುತ್ತಾಳೆ. ಇವಳು ಕೆಲಸ ಮಾಡುವ ಮೊದಲೇ ಇವಳಿಗೆ ಹಣವನ್ನು ನೀಡಿ ಹೋಗುವವರು ಹೆಚ್ಚು ಅಷ್ಟು ನಂಬಿಕೆ ಇಟ್ಟಿರುತ್ತಾರೆ. ಗಂಡನಿಲ್ಲದ ಬದುಕಿನಲ್ಲಿ ಒಬ್ಬಂಟಿಯಾಗಿ ಜಿವನ ನಡೆಸುತ್ತಿದ್ದಾಳೆ. ಬೇರೆಯವರಿಗೆ ಇವಳು ಆದರ್ಶ ವ್ಯಕ್ತಿತ್ವವುಳ್ಳ ಹೆಣ್ಣಾಗಿ ಪ್ರತಿಬಿಂಬಿಸುತ್ತಾಳೆ. ಒಬ್ಬ ಗಂಡಸಿನ ಹಾಗೆ ಬಹಳ ಕಷ್ಟಪಟ್ಟು ತನ್ನ ಜೀವನ ತಾನೇ ರೂಪಿಸಿಕೊಳ್ಳುತ್ತಾಳೆ. ಕೆಂಪವ್ವ ಹೊತ್ತು ಮುಳುಗುವ ಹೊತ್ತು ಕಥೆಯಲ್ಲಿ

'ಸಂಸಾರವೆಂಬುದೊಂದು ಗಾಳಿಯ ತೊಡರು

ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯ' (ಬಸವಣ್ಣನವರ ವಚನಗಳು)

ಮೂರು ಹೊತ್ತು ಸಂಸಾರ ತಾಪತ್ರಯಗಳಲ್ಲಿ ಅದಕ್ಕಾಗಿ ಹೇಗಾದರೂ ಮಾಡಿ ಸಂಗ್ರಹಿಸುವ ಗೀಳನ್ನು ಬೆಳೆಸಿಕೊಂಡು ಭಾವನೆಗಳಿಗೆ ಬೆಲೆ ಕೊಡುವುದನ್ನು ಮರೆತು ಬಿಡುತ್ತೇವೆ ಎಂಬುದನ್ನು ಬಸವಣ್ಣನವರ ವಚನ ಅಭಿವ್ಯಕ್ತಿಸುತ್ತದೆ. ಸರಳತೆ, ಸಹಬಾಳ್ವೆ, ಸಹೊದರತ್ವ, ಮುಗ್ಧತೆ, ವಿಶ್ವಾಸ, ವಿಶಾಲಮನಸ್ಥಿತಿ ಪ್ರತಿಯೊಬ್ಬ ವ್ಯಕ್ತಿಯ ಜೊತೆಯಲ್ಲಿಯೂ ಸಹ ಒಳ್ಳೆಯ ಸಂಬಂಧವನ್ನು ಮುಂದುವರೆಸಿಕೊಂಡು ಹೊಗಬಹುದು ಎಂಬುದನ್ನು ರಾಮಣ್ಣನವರ ಕೆಲವು ಕತೆಗಳಲ್ಲಿ ಕಾಣಬಹುದು.

ಚೆಲ್ಲು ಹೆಗ್ಗಣ ಕತೆಯಲ್ಲಿ ಇಬ್ಬರು ದಂಪತಿಗಳಿಗೆ ಒಬ್ಬನೇ ಅವರಿಗೆ ಒಬ್ಬನೆ ಮಗ ಅವನಿಗೆ ವ್ಯಾಪಾರಕ್ಕೆ ಎಷ್ಟು ಬೇಕೋ ಅಷ್ಟು ವಿದ್ಯಾಭ್ಯಾಸ ನೀಡಿರುತ್ತಾರೆ. ಅವನಿಗೆ ನಾಲ್ಕು ಜನ ಗಂಡು ಮಕ್ಕಳು ಆದರ್ಶ ದಂಪತಿಗಳು ಒಬ್ಬರ ಹಿಂದೆ ಒಬ್ಬರು

ಹೋಗುತ್ತಾರೆ. ಇಲ್ಲಿ ಅವರ ಮಗನನ್ನೇ ಗೌಡರು ಎಂದು ಕರೆಯುತ್ತಾರೆ. ಅವರ ಮನೆಯಲ್ಲಿಯೇ ಒಂದು ಆಶ್ಚರ್ಯ ಸಂಗತಿ ಕಾಣುತ್ತದೆ. ಅಲ್ಲಿ ಮದುವೆಯಾಗಿ ಬಂದ ಸೊಸೆಯರು ಒಬ್ಬೊಬ್ಬರು ಕಾಲಿಟ್ಟಾಗಲು ಒಂದೊಂದು ಸಮಸ್ಯೆ ಪ್ರಾರಂಭವಾಗುತ್ತದೆ. ಆಗ ಅವರ ಮನೆಯಲ್ಲಿ ಜಗಳಗಳು ನಡೆಯುತ್ತಲೇ ಇರುತ್ತದೆ. ಆಗ ಊರಿನ ಹಿರಿಯರು ಸೇರಿ ಭಾಗ ಮಾಡುವಾಗ ಅವರ ತಾತನ ಕಾಲದ ಭತ್ತ ಪೆಟ್ಟಿ ಇರುತ್ತದೆ. ಬೆಳೆದ ದವಸವೆಲ್ಲವನ್ನು ಅಲ್ಲಿಯೇ ಶೇಖರಿಸಿಡುವುದು ಆಗ ಎಲ್ಲರಿಗೂ ಸಮಾನವಾಗಿ ಭಾಗ ಮಾಡುವಾಗ ದೊಡ್ಡ ಮಗನಿಗೆ ಕಡಿಮೆ ಬರುತ್ತದೆ. ಆಗ ಅವನ ಹೆಂಡತಿ ರಂಪರದ್ಧಾಂತವನ್ನು ಮಾಡುತ್ತಾಳೆ. ಆಗ ಹಿರಿಯರೆಲ್ಲರೂ ಅವಲ ಬಾಯಿ ಮುಚ್ಚಿಸುತ್ತಾರೆ.

ಆಗ ಎಲ್ಲರಿಗೂ ಅದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಅಲ್ಲಿನ ಹಿರಿಕರೊಬ್ಬರು ಸೂಕ್ಷ್ಮವಾಗಿ ಗಮನಿಸಿ ಆಳನ್ನು ಅಲ್ಲಿ ಲಾಟೀನು ಹಿಡಿ ಎಂದು ಹೇಳಿ ಅಲ್ಲಿ ಕೈ ಹಾಕಿ ತೆಗೆಯುವಂತೆ ಹೇಳುತ್ತಾರೆ. ಆಗ ಅವನು ದಿಗ್ಭ್ರಾಂತನಾಗಿ ತೆಗೆಯುತ್ತಿದ್ದಾನೆ. ಅದು ಒಂದು ಸಣ್ಣ ಗುಡ್ಡೆಯಾಗಿಯೇ ಕಾಣುತ್ತಿದೆ. ಮತ್ತೆ ಹಿರಿಯರು ಅವರೇ ಇಳಿದಾಗ ಅವರಿಗೆ ಒಂದು ಆಶ್ಚರ್ಯವೇ ಕಾದಿತ್ತು. ಅಲ್ಲಿ ದೊಡ್ಡದಾದ ಹೆಗ್ಗಣದ ಬಿಲ ನಿರ್ಮಾಣವಾಗಿರುತ್ತದೆ. ಅಲ್ಲಿದ್ದವರೆಲ್ಲರೂ ಬಹಳ ಗಾಬರಿಯಿಂದ ನೋಡುತ್ತಿರುತ್ತಾರೆ. ಮನೆಯ ಹೆಂಗಸರೆಲ್ಲ ಮೂಗಿನ ಮೇಲೆ ಕೈ ಇಟ್ಟುಕೊಂಡ ಗಾಬರಿಯಿಂದ ನೋಡುತ್ತಿರುತ್ತಾರೆ. ಎಲ್ಲರಿಗೂ ಅವರ ತಪ್ಪಿನ ಅರಿವಾಗುತ್ತದೆ. ಮನುಷ್ಯರ ಕೈವಾಡವಿಲ್ಲದೆ ಎಲ್ಲವು ನಡೆದು ಹೊಗಿದೆ. ಆದರೆ ಇವರು ಸುಮ್ಮನೆ ಕಿತ್ತಾಡುತ್ತಿದ್ದಾರೆ. ಇಲ್ಲಿ ಪ್ರೀತಿಗಿಂತ ದ್ವೇಷಕ್ಕೆ ಹೆಚ್ಚು ಸ್ಥಾನ ನೀಡಿದ್ದಾರೆ. ಅದಕ್ಕೆ ಹಿರಿಯರು ಹೇಳುವುದು ಪ್ರತ್ಯಕ್ಷ ಕಂಡರೂ ಪ್ರಾಮಾಣಿಸಿ ನೋಡು' ಒಂದು ಮೂಕಪ್ರಾಣಿ ಮಾಡಿದ ಅವತಾರಕ್ಕೆ ಚಿಕ್ಕಂದಿನಿಂದಲೇ ಜೊತೆಯಲ್ಲಿ ಬೆಳೆ ಅಣ್ಣ ತಮ್ಮಂದಿರು ಶತ್ರುಗಳ ಹಾಗೆ ಕಾದಾಡುತ್ತಾರೆ. ಇಲ್ಲಿ ಅವರಿಗೆ ಮಾನವೀಯತೆ ಪ್ರೀತಿ, ಸಂಬಂಧ, ಯಾವುದರ ಅರಿವೇ ಇರುವುದಿಲ್ಲ ಬದಲಾಗಿ ಮುಗಿದು ಹೋಗುವ ಆಸ್ತಿಗೋಸ್ಕರ ತಮ್ಮ ತನವನ್ನೇ ಕಳೆದುಕೊಳ್ಳುತ್ತಾರೆ. ಈ ಅಣ್ಣತಮ್ಮಂದಿರು ಹೆಣ್ಣು ಮನೆಯ ಗೃಹಲಕ್ಷ್ಮಿ ಇವಳು ಮನೆಯನ್ನು ಕಟ್ಟಬೇಕೆ ಹೊರತು ಮುರಿಯಬಾರದು. ಆದರೆ ಇಲ್ಲಿ ತಮ್ಮ ತಮ್ಮ ನೆಲೆಕಂಡುಕೊಳ್ಳುವಲ್ಲಿ ತನ್ನ ಸ್ಥಾನಮಾನದ ಅರಿವಿಲ್ಲದೆ ಕಚ್ಚಾಡುತ್ತಾರೆ.

ಮೂಢನಂಬಿಕೆಗಳು ಎಲ್ಲ ಕಾಲದ ಎಲ್ಲ ದೇಶದ ಎಲ್ಲ ಜನಾಂಗಗಳಲ್ಲಿ ಕಂಡುಬಂದರೂ ಸಹ ಭಾರತೀಯರಲ್ಲಿ ಮಾತ್ರ ಹೆಚ್ಚು ಎಂದು ಹೇಳುವವರು ಉಂಟು. ಯಾವ ನಂಬಿಕೆಗಳಲ್ಲಿ ಮೌಢ್ಯತೆ ತುಂಬಿರುತ್ತದೆಯೋ ಅದನ್ನು ಮೂಢನಂಬಿಕೆ ಎನ್ನಬಹುದು ಒಂದು ದೃಷ್ಟಿಯಲ್ಲಿ ಆಳವಾಗಿ ಅಧ್ಯಯನ ಮಾಡಿದರೆ ಸಿದ್ಧಾಂತಕ್ಕೆ, ಮೂಢನಂಬಿಕೆಗೆ ನೇರ ಸಂಬಂಧವಿದೆ ಎನಿಸುತ್ತದೆ. ಮನುಷ್ಯನ ಜೀವನದ ಎಲ್ಲ ಪ್ರಸಂಗಗಳಲ್ಲಿ ಪ್ರಾಮಾಣಿಕನಾಗಿದ್ದರೂ ಹಲವು ಸಂದರ್ಭಗಳಲ್ಲಿ ಅವನು ಸೋಲುತ್ತಾನೆ. ಆದರೆ ಆ ಸಮಯದಲ್ಲಿ ಎದೆಗುಂದದೆ ಪ್ರಯತ್ನವನ್ನು ಮುಂದುವರೆಸಿದರೆ ಫಲಸಿಗುತ್ತದೆ. ಜೀವನದಲ್ಲಿ ಏನೇ ಬಂದರೂ ನಗುನಗುತ್ತಾ ಎದುರಿಸಬೇಕು. ಪುರಂದರದಾಸರು ಒಂದು ಕಡೆ ಹೀಗೆ ಹೇಳುತ್ತಾರೆ. ಈಸಬೇಕು ಇದ್ದು ಜೈಸಬೇಕು ಎಂದರು ಮನವ ಜನ್ಮ ದೊಡ್ಡದು. ಅದನ್ನು ಹಾಳು ಮಾಡಿಕೊಂಡು ನೆಮ್ಮದಿ ಕೆಡಿಸಿಕೊಳ್ಳಬೇಡಿ ಎಂದರು. ಈ ನಿಟ್ಟಿನಲ್ಲಿ ರಾಮಣ್ಣನವರ ಕತೆಗಳು ಗಮನಾರ್ಹವಾಗಿದೆ.

ಮನುಷ್ಯನಿಗೆ ಆಸೆ ಜಾಸ್ತಿ. ಅವನಿಗೆ ಆಸೆ ಹೆಚ್ಚಿದಂತೆಲ್ಲಾ ವರ್ತಮಾನದ ಸುಖಗಳಿಂದ ವಂಚಿತನಾಗಿ ಭವಿಷ್ಯದ ಬಾಗಲಿಗೆ ಆಸೆಪಟ್ಟು ದುಃಖಿಯಾಗುವ ಸಾಧ್ಯತೆಗಳು ಹೆಚ್ಚು. ಅದಕ್ಕೆ ಇರುವುದರಲ್ಲಿ ಸಂತೋಷಪಡಬೇಕು.

ಮನುಷ್ಯನಿಗೆ ಒಂದಲ್ಲಾ ಒಂದು ರೀತಿಯ ದೌರ್ಬಲ್ಯ ಇದ್ದೆ ಇರುತ್ತದೆ. ಆ ದೌರ್ಬಲ್ಯ ಮನುಷ್ಯನನ್ನು ಯಾವ ರೀತಿ ಹಾಳು ಮಾಡುತ್ತದೆ ಎಂಬುದನ್ನು ರಾಮಣ್ಣನವರ ಕಥೆಯಲ್ಲಿ ಕಾಣಬಹುದು. ಪಥಬ್ರಾಂತ ಕತೆಯಲ್ಲಿ ಕಾಣಬಹುದು. ಹಳ್ಳಿಯ ಮುಗ್ಧ ಹುಡುಗನ ಕಥೆ ಇದು ಓದುವುದಕ್ಕೆ ಪಟ್ಟಣಕ್ಕೆ ಬಂದಾಗ ಇಲ್ಲಿ ವಾತಾವರಣ, ಪಾರ್ಕ್. ಪಾರ್ಕ್‌ನಲ್ಲಿ ಪ್ರೇಮಿಗಳು ತನಗೂ ಒಬ್ಬ ಪ್ರೇಯಸಿ ಇರಬೇಕು ಎಂದು ಆಸೆ ಪಡುತ್ತಾನೆ. ಆದರೆ ಮೇಲ್ನೋಟಕ್ಕೆ ಅವನು ಮುಖವಾಡ ಧರಿಸಿಕೊಂಡು ಜೀವಿಸುತ್ತಿರುತ್ತಾನೆ. ಆಗ ಆ ಮನೆಯ ಯಜಮಾನತಿಯ ಮಗಳ ಆಗಮನವಾಗುತ್ತದೆ. ಮೊದಮೊದಲು ಇವನನ್ನು ಗಮನಿಸುತ್ತ ಇವನ ಸಮಸ್ಯೆಯನ್ನು ಮಗಳು ರೇಣುಕಾ ಅರಿಯುತ್ತಾಳೆ. ಅವನ ಮನಸ್ಸು ಸ್ತ್ರೀಸಾಮೀಪ್ಯಕ್ಕಾಗಿಯೇ ಹಾತೊರೆಯುತ್ತಿರುವುದು ತಿಳಿಯುತ್ತದೆ. ಆಗ ಅವಳು ಅವನ ಮನಸ್ಥಿತಿಯನ್ನು ತಿಳಿದು ಅವನ ಜೊತೆ ಹೆಚ್ಚು ಕಾಲ ಕಳೆಯುತ್ತಾಳೆ. ಅವನ ಓದಿನ ಬಗ್ಗೆ ವಿಚಾರಿಸಿದಾಗ ಮನಃಶಾಸ್ತ್ರ, ಪತ್ರಿಕೋದ್ಯಮ ಎಂದಾಗ ಅದರ ಬಗ್ಗೆ ಮಾತನಾಡುತ್ತ ಅವನ ಮನಸ್ಸಿನಲ್ಲಿದ್ದ ದೌರ್ಬಲ್ಯವನ್ನು ತೆಗೆಯಲು ಯತ್ನಿಸುತ್ತಾಳೆ. ಆಗ ಅವನಿಗೆ ತಾನು ಅವನ ಬಗ್ಗೆ ತಿಳಿದುಕೊಂಡು ಹೀಗೆ

ಮಾಡಿದೆ ಎಂದಾಗ ಅವನು ಸುಮ್ಮನಾಗುತ್ತಾನೆ. ಅವಳು ಹೋಗುತ್ತೇನೆ ಎಂದಾಗ ಮನಸ್ಸಿನ ದೌರ್ಬಲ್ಯಕ್ಕೆ ಸಿಕ್ಕಿ ಹಾಕಿಕೊಳ್ಳಬೇಡಿ ನಾಳೆ ಎಂಬುದು ಇನ್ನು ದೂರವಿದೆ ಎಂದು ಹೇಳಿ ಅವನನ್ನು ಕಳಿಸುತ್ತಾನೆ. ಮೂರನೆಯ ದಿನ ರೈಲ್ವೆ ನಿಲ್ದಾಣದಲ್ಲಿ ನನ್ನಿಂದ ನಿಮಗೆ ತೊಂದರೆಯಾಯಿತು ಎಂದಾಗ ಪರವಾಗಿಲ್ಲ ಆ ತೊಂದರೆ ನನಗಿಷ್ಟ ಎನ್ನುತ್ತಾನೆ. ಆಗ ಅವನು ಅವಳನ್ನು ನೀವು ಏನು ಓದುತ್ತೀರಿ ಎಂದಾಗ ಅವಳ ಹೇಳಲೇಬೇಕೆ ಎಂದಾಗ ಹೌದು ಎಂದಾಗ ಮನಃಶಾಸ್ತ್ರದಲ್ಲಿ ಎಂ.ಎ. ಎಂದಾಗ ಒಂದು ಕ್ಷಣ ತಬ್ಬಿಬ್ಬಾಗಿ ನಿಂತುಕೊಳ್ಳುತ್ತಾನೆ. ಇಲ್ಲಿ ಅವನಲ್ಲಿರುವ ದೌರ್ಬಲ್ಯವನ್ನು ಅರಿತು ಅದಕ್ಕೆ ಸರಿಯಾದ ಔಷಧಿ ಯಾವುದೆಂದು ತಿಳಿದು ಅದನ್ನು ನೀಡಿದಾಗ ಅವನ ದೌರ್ಬಲ್ಯ ದೂರವಾಗುತ್ತದೆ. ಜೊತೆಗೆ ಓದಿನಲ್ಲೂ ಮುಂದೆ ಬರುತ್ತಾನೆ ಮನುಷ್ಯ ಹಗುರವಾಗಿ ಸಂತೋಷದಿಂದಿರುತ್ತಾನೆ.

ನಮ್ಮ ಹಳ್ಳಿಯ ಹೆಂಗಸರಿಗೆ ಬಾಯಿ ಚಪಲ ತೀರಿಸಿಕೊಳ್ಳುವುದಕ್ಕೋಸ್ಕರ ಇಲ್ಲದ ಗಾಳಿಸುದ್ದಿಗಳನ್ನು ಹಬ್ಬಿಸುತ್ತಾರೆ. ಆದ್ದರಿಂದ ಆಗುವ ಅನಾಹುತದ ಅರಿವು ಅವರಿಗಿರುವುದಿಲ್ಲ. ಆದ್ದರಿಂದ ಎಷ್ಟು ಜನರ ಜೀವನ ಹಾಳಾಗುತ್ತದೆಂದು ಅವರು ಯೋಚಿಸುವುದೇ ಇಲ್ಲ. ಅವರಿಗೆ ಅವರ ಬಾಯಿ ಚಪಲ ತೀರಿದರೆ ಸಾಕು. ಇಲ್ಲಿ ಕಥಾನಾಯಕ ರೈಲು ನಿಲ್ದಾಣದಲ್ಲಿ ಇಬ್ಬರು ಹೆಂಗಸರು ಒಂದು ಮದುವೆ ಸುದ್ದಿ ಮಾತನಾಡುತ್ತಾರೆ. ಅಲ್ಲಿ ಒಬ್ಬ ಹಳ್ಳಿ ಬಡಹುಡುಗ ಉತ್ತಮ ರೀತಿ ವಿದ್ಯಾಭ್ಯಾಸ ಮುಗಿಸಿದ ಸುದ್ದಿ ತಿಳಿದ ಪಕ್ಕದ ಊರಿನ ಸಾಹುಕಾರರು ತಮ್ಮ ಮಗಳನ್ನು ಕೊಟ್ಟು ಅವನ ಜೊತೆ ಮದುವೆ ಮಾಡಿಸಬೇಕೆಂದು ಇರುತ್ತಾರೆ. ಆದರೆ ಯಾರೋ ಮೂರನೆಯವರು ಹಬ್ಬಿಸಿದ ಗಾಳಿ ಸುದ್ಧಿಯಿಂದ ಹುಡುಗನಿಗೆ ಬೇರೆ ಹುಡುಗಿ ಜೊತೆ ಸಂಬಂಧ ಇದೆ ಎಂದು ಹೇಳಿ ಮದುವೆ ನಿಲ್ಲಿಸುತ್ತಾರೆ. ಹುಡುಗನ ತಾಯಿ ತನ್ನ ಮಗನ ಮೇಲೆ ಇಲ್ಲದ ಅಪವಾದ ಹೇರಿದವರಿಗೆ ಬೈಯ್ಯುತ್ತಾಳೆಂದು ಅದು ಆ ಹುಡುಗನಿಗೆ ತಿಳಿದಿರುವುದಿಲ್ಲ ಎಂದು ಹೇಳಿದಾಗ ಪೇಪರ್‌ನಲ್ಲಿ ಮಗ್ನನಾಗಿದ್ದ ನಾಯಕ ಅವರ ಮಾತು ಕೇಳಿಸಿಕೊಳ್ಳುತ್ತಿರುವಾಗ ಅವರು ಯಾವುದೇ ಕಥೆ ಎಂದು ಹೇಳಿದಾಗ ಸುಮ್ಮನಾಗುತ್ತಾರೆ. ಈ ತರಹದ ಅದೆಷ್ಟೋ ಘಟನೆಗಳನ್ನು ಇವರು ನೋಡಿರುತ್ತಾರೆ, ಕೇಳಿರುತ್ತಾರೆ. ಅಲ್ಲಿ ಆಟವಾಡುತ್ತಿದ್ದ ಮಕ್ಕಳಲ್ಲಿ ಜಗಳ ಬಂತು ಎಂದು ದೊಡ್ಡವರು ಜಗಳವಾಡುತ್ತಾರೆ. ಅಲ್ಲಿ ಮಗುವಿಗೆ ಏನು ಆಗಿರುವುದಿಲ್ಲ. ಇವನು ಈ ತರಹ ಕಥೆ ನೋಡಿ ಯಾಕೆ ಜನಗಳು ಚಾಡಿ ಮಾತಿಗೆ ಇಷ್ಟು ಬೆಲೆಕೊಡುತ್ತಾರೆಂದು ಬೈಯ್ದುಕೊಂಡರು.

[illegible]

ನಂತರ ರೈಲು ಅವರ ಊರು ತಲುಪುತ್ತದೆ. ಹಳ್ಳಿಗೆ ನಡೆದುಕೊಂಡು ಹೋಗುವಾಗ ಹಳ್ಳಿಯ ಅವನ ಸ್ನೇಹಿತ ಬೋರ ಸಿಗುತ್ತಾನೆ. ಅವನು ಇವನನ್ನು ಮಾತನಾಡಿಸದೇ ಓಡಿ ಹೋಗುತ್ತಾನೆ. ಹಳ್ಳಿಯ ಹಲವಾರು ಜನರು ಹಾಗೆಯೇ ಮಾಡುತ್ತಾರೆ. ಆಗ ಮತ್ತೆ ಬೋರನನ್ನು ಹಿಡಿದು ಕೇಳಿದಾಗ ಅವರು ಆ ಊರಿನಲ್ಲಿ ಉಪಾಧ್ಯಾಯರ ಹೆಣ್ಣು ಮಕ್ಕಳ ಮೇಲೆ ಚಾಡಿಹೇಳಿ ಅವರ ಜೀವನವನ್ನು ಹಾಳು ಮಾಡಿ ರಾತ್ರೋ ರಾತ್ರಿ ಊರು ಬಿಟ್ಟು ಹೊರಟು ಹೋದರು. ಬಂದಾಗ ಚಾಡಿಕೋರರ ಬಗ್ಗೆ ಇವನಿಗೆ ಜುಗುಪ್ಸೆ ಬಂದ ಆ ರೀತಿ ಹೇಳಿದವರು ಯಾರು ಎಂದು ಕೇಳಿದಾಗ ಅವನು ಮತ್ತೆ ಓಡಲಾರಂಭಿಸುತ್ತಾನೆ. ಮತ್ತೆ ಗಾಬರಿಯಾದ ನಾಯಕ ಅವನ ಹಿಂದೆಯೇ ಹೋಗಿ ಕಥೆಯೆಲ್ಲವನ್ನು ಹೇಳಿದೆ ಆದರೆ ಯಾರು ಚಾಡಿ ಹೇಳಿದವರು ಎಂದಾಗ ಬೇರೆಯವರನ್ನು ಕೇಳು ಎಂದಾಗ ನೀನೆ ಹೇಳಬೇಕು ಎಂದಾಗ ಅವನು ಹೆದರಿಕೆಯಿಂದಲೇ ಸುತ್ತಲೂ ಒಮ್ಮೆ ನೋಡಿ ಆ ರೀತಿ ಹೇಳಿದವಳು ನಿನ್ನ ತಾಯಿ ಎನ್ನುತ್ತಾನೆ. ಆಗ ಕಥಾನಾಯಕನಿಗೆ ಮೊದಲಿಂದಲೂ ಅನ್ಯರ ಬಗ್ಗೆ ದೂರು ಹೊರಿಸುವ ಕಟ್ಟುಕತೆ ಕಟ್ಟಿ ಹರಡುವ ಚಾಡಿಕೋರರ ಬಗ್ಗೆ ಜುಗುಪ್ಸೆಯನ್ನು ತಾಳುತ್ತ ಬಂದ ಕಥಾನಾಯಕನಿಗೆ ತಮ್ಮೂರಿನ ಉಪಾಧ್ಯಾಯ ಹೆಣ್ಣು ಮಕ್ಕಳ ಬಗ್ಗೆ ಹಬ್ಬಿದ ಕಟ್ಟುಕತೆಗೆ ತನ್ನ ತಾಯಿಯೇ ಕಾರಣವೆಂಬ ಸತ್ಯ ತಿಳಿದಾಗ ಎದ್ದು ನಿಂತಾಗ ನಾಯಕ ಮಾತಿಲ್ಲದೆ ಮೂಕನಾಗುತ್ತಾನೆ. ತನ್ನ ತಾಯಿಯಿಂದ ಒಂದು ಮನೆಯ ದೀಪವೇ ಆರಿಹೋಯಿತು ಎಂದಾಗ ಒಂದು ಕ್ಷಣ ಭೂಮಿಯೇ ಕಂಪಸಿದಂತಾಗುತ್ತದೆ. ಈ ರೀತಿ ಅನೇಕ ಚಾಡಿಕೋರರು ಇದ್ದೇ ಇರುತ್ತಾರೆ. ಅವರಿಗೆ ಬೇರೆಯವರ ಜೀವನದಲ್ಲಿ ಆಟವಾಡುವುದನ್ನೇ ಅವರು ಅಭ್ಯಾಸ ಮಾಡಿಕೊಂಡಿರುತ್ತಾರೆ. ಆದರೆ ಅವರ ಆಸೆ ಎಷ್ಟೋ ಜನ ಬಲಿಯಾಗುತ್ತಾರೆ ಎಂಬುದು ಬದುಕಿರಬಾರದು ಅಂಥವರು ಕತೆಯಲ್ಲಿ ಕಂಡುಬರುತ್ತದೆ.

ಮಾನವನು ಜೀವನದಲ್ಲಿ ಒಂದಲ್ಲ ಒಂದು ಕಷ್ಟಗಳಿಂದ ನರಳುತ್ತಿರುತ್ತಾನೆ. ಕಷ್ಟಗಳಿಂದ ತತ್ತರಿಸಿದ ಮನುಷ್ಯ ಅದರಿಂದ ಪಾರಾಗಲು ನಾನಾ ಬಗೆಯಲ್ಲಿ ಪ್ರಯತ್ನಿಸುತ್ತಾನೆ. ಹೀಗೆ ಪ್ರಯತ್ನ ಪಡುತ್ತಿರಬೇಕಾದರೆ ಕೆಲವೊಂದು ಬಾರಿ ಆ ಪ್ರಯತ್ನಗಳಿಂದ ಆಗುವ ಬದಲಾವಣೆಗಳು ಸುಖವನ್ನು ಕೊಡುವುದರ ಬದಲಾಗಿ ಇನ್ನಷ್ಟು ದುಃಖವನ್ನೇ ಅನುಭವಿಸುವಂತಾಗುತ್ತದೆ. ಅಂತಹ ಒಂದು ಕಥೆ ಈ ವಜ್ರವರ್ತುಲ.

ಚಿಕ್ಕ ವಯಸ್ಸಿನಲ್ಲಿ ತಂದೆತಾಯಿಗಳು ಅವರ ಸುಖಕ್ಕಾಗಿ ಇವರನ್ನು ಬಿಟ್ಟು ಹೊಗಿರುತ್ತಾರೆ. ಆಗ ಅಲ್ಲಿನ ಜನರೇ ಇವರುಗಳನ್ನು ನೋಡಿಕೊಳ್ಳುತ್ತಿರುತ್ತಾರೆ. ಅವರ ಮಾವ ನೋಡಿಕೊಳ್ಳುವುದರ ಜೊತೆಗೆ ಈ ಮಕ್ಕಳಿಗೆ ಹಿಂಸೆ ಕೊಡುತ್ತಿರುತ್ತಾನೆ. ಆಗ ಆ ಮಕ್ಕಳು ಊರು ಬಿಟ್ಟು ಹೋಗಿ ಬೇರೆ ಊರಿನ ಹೋಗಿ ಕಷ್ಟಪಟ್ಟು ದುಡಿದು ತಮ್ಮದಾದ ಒಂದು ಸೂರು ಮಾಡಿಕೊಳ್ಳುತ್ತಾರೆ. ಅಣ್ಣ ಹೊರಗಡೆ ಕೆಲಸ ಮಾಡಿ ಬರುತ್ತಾನೆ. ತಂಗಿ ಬೆರಣಿ ಮಾರಿ ಸಂಪಾದಿಸುತ್ತಾಳೆ. ಪ್ರಾಯಕ್ಕೆ ಬಂದಾಗ ಸ್ಥಿತಿವಂತರಾಗಿರುತ್ತಾರೆ. ಅಣ್ಣನ ಮದುವೆಗೆ ಓಡಾಡಿ ಹೆಣ್ಣು ನೋಡುತ್ತಿದ್ದ ತಂಗಿ ಮೇಲೆ ಅಲ್ಲಿನ ಊರಿನ ಅತ್ತೆ ಎನ್ನುವ ಸಂಬಂಧ ಹೊಂದಿರುವ ಕೆಂಪಮ್ಮ ಇವಳ ಮೇಲೆ ಇಲ್ಲದ ಚಾಡಿ ಮಾತುಗಳನ್ನು ಹೇಳುತ್ತಾಳೆ. ಆದ್ದರಿಂದ ಕೋಪಗೊಂಡು ಅವಳನ್ನು ಎಲ್ಲಿಯೂ ಹೋಗಲೂ ಬಿಡುವುದಿಲ್ಲ. ಅವಳ ಉದ್ದೇಶ ಇಲ್ಲದ ಸಂಬಂಧ ಹೇಳಿಕೊಂಡು ಮಗಳನ್ನು ಅವನಿಗೆ ಕೊಟ್ಟು ಮದುವೆಮಾಡುವ ಆಸೆ ಹೊಂದಿದ್ದಳು. ನಂತರ ಕುತಂತ್ರದಿಂದ ಮದುವೆ ನಿಶ್ಚಯಿಸಿ ಬಿಡುತ್ತಾಳೆ. ತಂಗಿ ಯಾರು ಸಂಬಂಧಿಕರಿಲ್ಲದ ಕಾರಣ ಅವಳ ಊರಿನ ಜನರ ಸಹಾಯ ಬೇಡಲು ಹೋಗುತ್ತಾಳೆ. ಆಗ ಅಲ್ಲಿ ಎಲ್ಲರೂ ಇವಳಿಗೆ ಸಹಾಯ ಮಾಡಿ ಬಹಳ ವಿಜೃಂಭಣೆಯಿಂದ ಮದುವೆ ಕಾರ್ಯ ನಡೆಯುತ್ತದೆ. ಆಗ ಅಣ್ಣನಿಗೆ ತಂಗಿಯ ಮೇಲೆ ಇಲ್ಲದ ಕೋಪದಿಂದ ಅವಳನ್ನು ನೋಯಿಸಿದೆ ಎಂದು ಪಶ್ಚಾತ್ತಾಪಪಡುತ್ತಾನೆ.

ನಂತರ ಅಣ್ಣನು ತಂಗಿಗೆ ಒಳ್ಳೆಯ ಹುಡುಗನನ್ನು ಹುಡುಕಿ ಮದುವೆ ಮಾಡುತ್ತಾನೆ. ಆದರೆ ವಿಧಿ ಲಿಖಿತ ಬೇರೆ ಇತ್ತು. ಅವನ ಹೆಂಡತಿ ಗೌರಿ ವಿಧಿವಶಳಾಗುತ್ತಾಳೆ. ಮೂರು ಜನ ಗಂಡು ಮಕ್ಕಳಿರುತ್ತವೆ. ಅಲ್ಲಿಯು ಅದೇ ಪ್ರಸಂಗ ದೇವರು ಕಷ್ಟದಲ್ಲಿರುವವರನ್ನೇ ಮತ್ತೆ ಮತ್ತೆ ಪರೀಕ್ಷಿಸುತ್ತಾನೆ ಎನ್ನುವುದಕ್ಕೆ ಬೋರಿಯ ಗಂಡನು ಸಹ ವಿಧಿವಶನಾಗುತ್ತಾನೆ. ಇಲ್ಲಿ ಮತ್ತೆ ಮಕ್ಕಳಿಲ್ಲದ ಇವಳು ಅಣ್ಣನ ಮನೆಗೆ ಸೇರಿಕೊಳ್ಳುತ್ತಾಳೆ. ಅವಳ ಗಂಡನ ಆಸ್ತಿಯನ್ನು ಅಣ್ಣನೇ ಹೋಗಿ ನೋಡಿಕೊಂಡು ಬರುತ್ತಿರುತ್ತಾನೆ. ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಓಡಾಟದಿಂದಾಗಿ ಅವನಿಗೆ ಕೋಪ ಹೆಚ್ಚಾಗುತ್ತಿತ್ತು. ಅದಕ್ಕೆ ಮನೆಯಲ್ಲಿ ಎಲ್ಲಾ ಜವಾಬ್ದಾರಿನೂ ತಂಗಿ ವಹಿಸಿಕೊಂಡಿದ್ದಳು. ಯಾವ ಪ್ರತಿಫಲವನ್ನು ಬಯಸದೇ ಮಕ್ಕಳನ್ನು ಪ್ರೀತಿಯಿಂದ ಮುದ್ದಿಸಿ, ಸಾಕಿ ಸಲುಹುತ್ತಾಳೆ. ಆದರೆ ಕಾಳನಿಗೆ ನಾಯಿ ಕಚ್ಚುತ್ತದೆ. ಅವನ ಅವಳು ಹಾರೈಕೆ ಮಾಡುತ್ತಾಳೆ. ಮತ್ತೆ ಹುಚ್ಚು ಹೆಚ್ಚಾದಾಗ ಕೆಂಚಣ್ಣ ಅವನನ್ನು ಆಸ್ಪತ್ರೆಗೆ ಸೇರಿಸಿಕೊಂಡು ವಾಸಿಯಾಗುವವರೆಗೂ ಅಲ್ಲಿಯೇ ಇರುತ್ತಾನೆ. ಅಲ್ಲಿಂದ ಬರುವ

ಹೊತ್ತಿಗೆ ಕೆಂಚಣ್ಣ ಬಳಲಿ ಬೆಂಡಾಗಿರುತ್ತಾನೆ. ನಂತರ ಅಣ್ಣನ ಹಾರೈಕೆ ಮಾಡುತ್ತಾಳೆ. ನಂತರ ವಯಸ್ಸಿಗೆ ಬಂದ ಅಣ್ಣನ ಮಕ್ಕಳಿಗೆ ಮದುವೆ ಮಾಡುತ್ತಾಳೆ. ಅವರಿಗೆ ಮನೆಯ ಕೆಲಸ ವಹಿಸುತ್ತಾಳೆ. ಆದರೆ ಅವರ ಮುಂದೆ ನಿಂತು ಎಲ್ಲ ಕೆಲಸದ ಮಾರ್ಗದರ್ಶನವನ್ನು ಅವಳು ನೀಡುತ್ತಿರುತ್ತಾಳೆ. ಇವರಲ್ಲಿ ಹೊಂದಾಣಿಕೆಯಾಗದೇ ಬೇರೆ ಬೇರೆಯಾಗುತ್ತಾರೆ. ಸೀನ ದುಡ್ಡಿದ್ದಾಗ ಸುಮ್ಮನಿರುತ್ತಾನೆ. ದುಡ್ಡಿಲ್ಲದೆ ಇದ್ದಾಗ ಅತ್ತೆಗೆ ಒಡೆದು ಮನೆಯಿಂದ ಆಚೆ ನೂಕುತ್ತಾನೆ. ಆದರೆ ಅಣ್ಣನಿಗೋಸ್ಕರ ಎಲ್ಲವನ್ನು ಸಹಿಸಿಕೊಂಡಿರುತ್ತಾಳೆ. ಅದೇ ರೀತಿ ಅಣ್ಣ ತಂಗಿಗೆ ಹಿಂಸೆಕೊಡಬಾರದೆಂದು ಅವನಿಗೆ ಆಗಾಗ ಹಣ ನೀಡುತ್ತಿರುತ್ತಾನೆ. ಮೂರನೇ ಮಗ ಎಸ್.ಎಸ್.ಎಲ್.ಸಿ.ಯಲ್ಲಿ ತೇರ್ಗಡೆಯಾದಾಗ ಅವನನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಪಟ್ಟಣಕ್ಕೆ ಸೇರಿಸುತ್ತಾನೆ. ನಾವಾದರೂ ಓದಿಲ್ಲ ಮಕ್ಕಳಾದರೂ ಓದಲಿ ಎಂದು ಕಳುಹಿಸುತ್ತಾನೆ. ಆದರೆ ಹಣ ನೀಡಿದ್ದರಿಂದ ಗೊತ್ತಿಲ್ಲದ ಭಾಷೆ, ಜನಗಳ ನಡುವೆ ಕೆಟ್ಟ ಹವ್ಯಾಸಗಳನ್ನು ಇವನು ಮೈಗೂಡಿಸಿಕೊಳ್ಳುತ್ತಾನೆ. ಜಿವನದ ಉದ್ದಕ್ಕೂ ಕಷ್ಟವನ್ನೇ ಅನುಭವಿಸಿದ ಇವರು ಕೊನೆಯ ದಿನಗಳನ್ನು ಸಹ ಕಷ್ಟದಲ್ಲಿಯೇ ಕಳೆಯುತ್ತಾರೆ.

ಮನುಷ್ಯ ಸಮಾಜ ಜೀವಿ. ಆ ಸಮಾಜದಲ್ಲಿ ಬದುಕುವ ಎಲ್ಲ ಮನುಕುಲದ ಗುಣ ಒಂದೇ ಇರುವುದಿಲ್ಲ. ಅಲ್ಲಿಯ ವಾತಾವರಣ ವಂಶವಾಹಿನಿಯಿಂದ ಬದಲಾವಣೆ ಇರುತ್ತದೆ. ಈ ಸಮಾಜದಲ್ಲಿ ಒಳ್ಳೆಯದು ಕೆಟ್ಟದ್ದು. ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇದೇ ರೀತಿಯಲ್ಲಿ ಒಂದು ಕತೆ ನಡೆದುಬಂದಿದೆ. ಅದೇ ಹಳಸದ ಬುತ್ತಿ ಈ ಕಥೆಯಲ್ಲಿ ಸುತ್ತಮುತ್ತಲಿನ ಸುಂದರ ಪರಿಸರವನ್ನು ವರ್ಣಿಸುತ್ತಾ ಕತೆ ತರುತ್ತಾರೆ. ಇಲ್ಲಿ ಒಂದು ಮರ ಎಲ್ಲರಿಗೂ ಹೇಗೆ ನೆರಳು ನೀಡುತ್ತದೆ ಅದು ಸ್ವಸುಖ ಬಿಟ್ಟು ಸದಾ ಪರಸುಖ ಚಿಂತನೆಯಲ್ಲಿ ಮುಳುಗುತ್ತಿದೆ ಈ ಸಮೃದ್ಧ ವೃಕ್ಷ ಆದರೆ ಇಂದು ಅದು ಬೋಳಾಗಿ ಹೋಗಿತ್ತು. ಆದರೆ ಅದಕ್ಕೆ ಒಂದು ಕೋಮಲ ಬಳ್ಳಿ ಸುಂದರವಾಗಿ ಹಬ್ಬಿತ್ತು. 'ಕೂತುಂಡ ಕುಡಿಕೆ ಹೊನ್ನಾಯಿತು, ಆ ಕಲ್ಪತರುವಿನ ಬಾಳು' (ಹಳಸದ ಬುತ್ತಿ, ಪು.ಸ. ೧೧೩) ಇಲ್ಲಿ ಬರಗಾಲ ಬರುತ್ತದೆ. ಆಗ ಅಲ್ಲಿ ಏನೋ ಗರ್ಭದಲ್ಲಿ ಹುದುಗಿದೆಯೆಂದು ಬುಡವನ್ನೇ ಕತ್ತರಿಸಿದರು. ಸೀಳಲೇಬೇಕು–ಬರಗಾರ ಸೀಳಿದರು. ಬುಡವನ್ನೇ ಸೀಳುತ್ತಾರೆ. ಅಲ್ಲಿ ಏನು ಸಿಗುವುದಿಲ್ಲ. ಇದು ಮಾನವನ ಗುಣ. ಹೀಗೆ ಇಲ್ಲಿ ಒಬ್ಬ ಸಾಹುಕಾರ ಅವನ ಹೆಸರು ಕುಚೇಲಯ್ಯಾ. ಅವನು ಕುಚೇಲ ಕುಬೇರನಾಗಿದ್ದ. ಅವನಿಗೆ ಲಕ್ಷ್ಮಿ ಒಲಿದಿದ್ದರೂ ಸರಸ್ವತಿ ಒಲಿದಿರಲಿಲ್ಲ. ವ್ಯಾಪಾರ ಎಂದರೆ ಮೋಸ ಮಾಡಲಿ ಎಂದರೆ ವ್ಯಾಪಾರದ ಜೊತೆ ಮುಗ್ಧ ಮಕ್ಕಳಿಗೆ

[illegible]

ಬೋಧನೆ ಮಾಡುತ್ತಿರುತ್ತಾನೆ. ಅವನು ಆ ದಿನ ಅಂಗಡಿಯಲ್ಲಿದ್ದ ಅಲ್ಲಿಗೆ ಒಂದು ಹುಡುಗ ಬರುತ್ತಾನೆ. ಅವನಿಗೆ ಅಂಗಡಿಯಲ್ಲಿ ಪೊಟ್ಟಣ ತೆಗೆದುಕೊಂಡು ಹೋಗಬೇಕಾದರೆ ನಿಮ್ಮ ಅವ್ವನಿಗೆ ಹೇಳು ಕುಚೇಲಣ್ಣಿಗೆ ಏನಾದರೂ ಕೊಟ್ಟರೆ ದುಡ್ಡು ಕೊಡುತ್ತಾನೆಂದು ಹೇಳಿ ಎಂದು ಹೇಳಿದಾಗ ಅದರ ಅರ್ಥತಿಳಿದು ಬೇರೆ ತರಹ ಅರ್ಥ ಬರುತ್ತದೆ ಎಂದು ತಿಳಿದು ನೀನೆ ಮನೆಯಲ್ಲಿ ಅಕ್ಕಿ ರಾಗಿ ತಂದುಕೊಟ್ಟರೆ ದುಡ್ಡು ಕೊಡುತ್ತೇನೆಂದು ಹೇಳಿ ಆ ಹುಡುಗ ಕಳ್ಳದಾರಿ ಹಿಡಿದುಕೊಂಡು ಮನೆಯಲ್ಲಿಯೇ ಕಳ್ಳತನ ಮಾಡುವ ಹಾಗೆ ಮಾಡುತ್ತಾನೆ. ಇದಕ್ಕಿಂತ ನಾಗರೀಕರ ಅಂಗಡಿಯಲ್ಲಿದ್ದ ಅಲ್ಲಿ ಭೀಮಸೇನ ಕಾಲೇಜು ಕಲಿತವನು ಅವನು ತನ್ನ ತಂದೆಯ ನಂತರ ವಿಧಿಯಿಲ್ಲದೇ ಅದುವರೆಗೆ ನೋಡಿಕೊಳ್ಳುತ್ತಿದ್ದ ಅಂಗಡಿಗೆ ಅಂಟಿಕೊಳ್ಳಬೇಕಾಯಿತು. ಅವನು ಕಾಲೇಜಿನಲ್ಲಿ ಎಲ್ಲರನ್ನು ರೇಗಿಸಿಕೊಂಡು ಮೋಜು ಮಾಡಿಕೊಂಡಿದ್ದ ಹುಡುಗ ಈಗ ಬದಲಾವಣೆಯಾಗಿದೆ ಅವನ ಬದುಕಿನಲ್ಲಿ. ಅವನ ಅಂಗಡಿಗೆ ಯಾರಾದರೂ ಹೆಂಗಸರು, ಹುಡ್ಗುಗಿ ಯಾರು ಬಂದರೆ ಅವರ ಹಣ ಕೊಡಲಿ ಬಿಡಲಿ. ಏನಾದರೂ ತೆಗೆದುಕೊಂಡರೆ ಸಮಾಧಾನ ಎಂದು ಎರಡೂ ವಿಭಿನ್ನ ಪಾತ್ರಗಳಲ್ಲಿ ಮನುಷ್ಯನ ಸಹಜಗುಣವನ್ನು ತಿಳಿಸಿದ್ದಾನೆ. 'ದೇವರ ದೃಷ್ಟಿಯಲ್ಲಿ ಎಲ್ಲಕ್ಕೂ ಒಂದೇ ಅಂತ್ಯ'[೧] ಸೃಷ್ಟಿ ನಿಯಮದಲ್ಲಿರುವ ಏಕೈಕ ಗುರಿ ಅದು ಮಣ್ಣಿನೊಡಗೂಡಿ ಮಣ್ಣಾಗುತ್ತೀಯೆ ನೀನು ನಾನು ಅಷ್ಟೆ ಎನ್ನುವ ಸತ್ಯ. ಒಬ್ಬ ಹೆಣ್ಣು ಮಗಳು ಒಲಿದರೆ ನಾರಿಯೂ ಆಗುತ್ತಾನೆ. ಮುನಿದರೆ ಮಾರಿ ಎಂಬ ಮಾತಿನಂತೆ ಹೆಣ್ಣು ಮನೆಯ ಕಣ್ಣು. ಇಡೀ ಕುಟುಂಬದ ಸಂತೋಷ, ಲಾಲನೆ, ಪಾಲನೆಗೆ ಎಲ್ಲದಕ್ಕೂ ಹೆಣ್ಣಿನ ಪಾತ್ರ ಬಹಳ ಮುಖ್ಯ ಒಬ್ಬ ತಂದೆಗೆ ಮಗಳಾಗಿ ಅಣ್ಣನಿಗೆ ತಂಗಿಯಾಗಿ, ಗಂಡನಿಗೆ ಹೆಂಡತಿಯಾಗಿ, ಮಕ್ಕಳಿಗೆ ತಾಯಿಯಾಗಿ, ಸೊಸೆಗೆ ಅತ್ತೆಯಾಗಿ, ಮೊಮ್ಮಕ್ಕಳಿಗೆ ಅಜ್ಜಿಯಾಗಿ ವಿಭಿನ್ನ ಹಂತಗಳಲ್ಲಿ ಒಂದೊಂದು ಪಾತ್ರಧಾರಿ ಹೆಣ್ಣು ಅಂತಹ ಹೆಣ್ಣು ಅನುಮಾನ ಬಂದರೆ ಯಾವೆಲ್ಲ ರೀತಿ ಯೋಚಿಸುತ್ತಾಳೆನ್ನುವ ಒಂದು ಕಥಾ ಭಾಗವೇ ದೀಪ ಆರಿತು.

ಮದುವೆಯಾಗಿ ಒಂದು ವರ್ಷ ಕಳೆದಿದೆ. ಕೆಲಸಕ್ಕೆ ಹೋದ ಗಂಡನ ಬರುವಿಗಾಗಿ ಕಾತುರದಿಂದ ಕಾಯುತ್ತಿದ್ದಾಳೆ. ಅವನು ಹೇಳಿದ ಸಮಯವಾಗುತ್ತಿದ್ದರೂ ಅವನು ಬಂದಿರುವುದಿಲ್ಲ. ಮನೆಯಲ್ಲಿ ಒಬ್ಬಳೆ ಇದ್ದಾಳೆ ಅನ್ನುವ ಯೋಚನೆ ಇಲ್ಲ ಸ್ನೇಹಿತರ ಜೊತೆ ಹರಟೆ ಹೊಡೆಯುತ್ತಿದ್ದಾರಾ? ಇಲ್ಲಿ ಸಿನಿಮಾಕ್ಕೆ ಹೋದರೆ ನನ್ನನ್ನು

---

೧. ಹಳಸದ ಬುತ್ತಿ, ಪು.ಸಂ. ೧೨೧.

ಕರೆದುಕೊಂಡು ಹೋಗದೆ ಒಬ್ಬರೆ ಹೋದರ? ನನ್ನ ಬಗ್ಗೆ ಅಸಡ್ಡೆಯಿರಬಹುದು. ಗಂಟೆ ಹನ್ನೆರಡಾಯಿತು. ಆಗ ಇಸ್ಪೀಟ್ ಆಟವಾಡುತ್ತ ಕುಳಿತಿರಬಹುದು. ಇಲ್ಲ ಎಂದರೆ ಕುಡಿತಕ್ಕೆ ಒಳಗಾಗಿ ಕುಡಿದು ತೂರಾಡುತ್ತಿರಬಹುದು? ಇಲ್ಲದಿದ್ದರೆ ಯಾರೋ ಬೇರೆ ಹೆಂಗಸರ ಸಹವಾಸ ಮಾಡಿರಬಹುದು ಎಂದು ಹುಚ್ಚಿಯ ಹಾಗೆ ಅನೇಕ ಆಲೋಚನೆಯನ್ನು ಮಾಡುತ್ತಾ ಮಾಡುತ್ತಾ ನನ್ನದು ಕೀಳು ಮನಸ್ಸಲ್ಲ ಅದು ದುರ್ಬಲ ಮನಸ್ಸು ಎಂದುಕೊಳ್ಳುತ್ತಾಳೆ. ತಾನಾಗಿಯೇ ನಿದ್ರೆ ಬರಲು ಪ್ರಾರಂಭವಾಯಿತು ಮನಸ್ಸು ಸಂಕುಚಿತವಾಗಿ ಖಿನ್ನವಾಗುತ್ತಿತ್ತು. ಅಷ್ಟರಲ್ಲಿ ಬೆಳಗಾಗಿ ದ್ರಾಕ್ಷಾ ಎಂದು ಗಂಡ ಕೂಗಿದಾಗ ಯಾವಾಗ ಬಂದಿರಿ ಎಂದಾಗ ಈಗ ಎಂದು ಮತ್ತೆ ಮಲಗಿಕೋ ಎಂದು ಮಲಗಿಸಿ ಬೆಳಿಗ್ಗೆ ಎಲ್ಲಿ ಹೋಗಿದ್ದೀರಿ ಎಂದಾಗ ಶಂಕರರಾಯರ ಜೊತೆ ಹರಟೆ ಹೊಡೆಯುತ್ತಿದ್ದೆ ಅಷ್ಟೆ, ಯೌವ್ವನದ ಹೆಂಗಸರನ್ನು ಅದರಲ್ಲೂ ಮದುವೆಯಾಗಿ ರುವವರನ್ನು ಒಂಟಿ ಬಿಟ್ಟಾಗ ಯಾವ ತರಹ ಕೆಟ್ಟ ಆಲೋಚನೆ ಮಾಡುತ್ತಾರೋ ಹಾಗೆಲ್ಲ ಯೋಚಿಸುತ್ತಾಳೆ. ಇಲ್ಲಿ ಗಂಡನ ಬರುವಿಕೆಗೆ ಕಾದು ಕಾದು ಕುಳಿತು ಹೆಣ್ಣು ಪರಿತಪಿಸಿ ಅನುಮಾನಿಸುವ ಕತೆ ಇದಾಗಿದೆ.

ಹಳ್ಳಿಗಳಲ್ಲಿ ಹಲವಾರು ಸಮಸ್ಯೆಗಳು ಎದುರಾಗುತ್ತಲೇ ಇರುತ್ತವೆ. ಕೆಲವರು ತಮ್ಮ ಸ್ವಾರ್ಥಗಕ್ಕಾಗಿ ಬೇರೆಯವರಿಗೆ ಮೋಸ ಮಾಡಿ ಜೀವನ ನಡೆಸುತ್ತಾರೆ. ಅಂತಹವರನ್ನು ಯಾರು ಎಂದೂ ಕ್ಷಮಿಸುವುದಿಲ್ಲ. ತಾವು ಬದುಕಬೇಕು ಬೇರೆಯವರನ್ನು ಬದುಕಲು ಅವಕಾಶ ಮಾಡಿಕೊಡಬೇಕು. ಮೋಸ, ವಂಚನೆ, ದ್ರೋಹ, ಸುಳ್ಳು ಇವೇ ಜೀವನವಾಗಬಾರದು. ಬೇರೆಯವರಿಗೆ ನಮ್ಮಿಂದ ಆದಷ್ಟೂ ಸಹಾಯವಾಗವಂತಿರಬೇಕು. ಮೀಟಿಂಗ್ ಮಾಡಿದರು ಈ ಕತೆಯಲ್ಲಿ ಒಬ್ಬ ಮೋಸಗಾರ ವ್ಯಾಪಾರಿಯ ಮೇಲೆ ಬಂದಿರುವ ದೂರಿನ ವಿಚಾರಣೆಗೆ ಮಿಟಿಂಗ್ ಸೇರುವ ಏರ್ಪಾಡಾಗಿರುತ್ತದೆ. ಇಲ್ಲಿ ಒಂದು ಸಮಿತಿಯನ್ನು ರಚಿಸಿಕೊಂಡಿರುತ್ತಾರೆ. ಅಲ್ಲಿ ಐದು ಜನ ಡೈರೆಕ್ಟರ್ಗಳು ಇರುತ್ತಾರೆ. ಅಲ್ಲಿ ಹೊಂಬಣ್ಣ ಗೊಬ್ಬರದ ಶಾಖೆಗೆ ಹೋಗಿ ಗೊಬ್ಬರದ ತೂಕ ಹಾಕಿಸುವಾಗ ಅದರ ವ್ಯತ್ಯಾಸ ಕಂಡು ಅದನ್ನು ಸರಿಯಾದ ರೀತಿಯಲ್ಲಿ ತೂಕಮಾಡು ಎಂದಾಗ ವ್ಯಾಪಾರಿ ಚಿನ್ನಪ್ಪ ಸರಿಯಾಗಿ ತೂಕ ಮಾಡಿಕೊಟ್ಟಿರುತ್ತಾನೆ. ಹಾಗೆಯೇ ಎರಡು ಮೂಟೆ ಗೊಬ್ಬರ ಕೊಡು ಎಂದಾಗ ಒಬ್ಬರಿಗೆ ಒಂದೇ ಮೂಟೆ ಎಂದು ಪ್ರೆಸಿಡೆಂಟ್ ಹೇಳಿದ್ದಾರೆ. ಎಲ್ಲರಿಗೂ ಒಂದೇ ಮೂಟೆ ಎಂದನು. ಅದಕ್ಕೆ ಎಲ್ಲರಿಗೂ ಹಾಗೆಯೇ ಕೊಡುತ್ತೀಯಾ ಎಂದಾಗ ಡೈರೆಕ್ಟರ್, ಪ್ರೆಸಿಡೆಂಟ್ ಎಲ್ಲರಿಗೂ ಒಂದೇ ಮೂಟೆ ಎಂದು ಹೇಳುತ್ತಾನೆ. ಆದರೆ

[illegible]

ತನಗೆ ಬೇಕಾದವರಿಗೆ ಹೆಚ್ಚಾಗಿ ಕೊಟ್ಟಿರುತ್ತಾನೆ. ಒಂದು ಸಲ ಪುಟ್ಟಣ್ಣನ ಮಗ ಬಂದಾಗ ಮೋಸ ಮಾಡಿ ಕಡಿಮೆ ತೂಕ ಹಾಕಿ ಕಳುಹಿಸಿರುತ್ತಾನೆಂದು ಹೀಗೆ ಅನೇಕ ದೂರುಗಳು ಇವನ ಮೇಲಿರುತ್ತದೆ. ಅದಕ್ಕೆ ಅವರು ನಾವೆಲ್ಲ ನಿನಗೆ ಬುದ್ಧಿ ಕಲಿಸುತ್ತೇವೆ ಎಂದು ಹೇಳಿದಾಗ ಅವನು ಅಧ್ಯಕ್ಷರ ಮನೆ ಹತ್ತಿರ ಹೋಗಿ ನನ್ನನ್ನು ಕಾಪಾಡಿ ಎಂದು ಬೇಡಿಕೊಳ್ಳುತ್ತಾನೆ. ಮೊದಲಿಗೆ ಅವರು ಮಿಟಿಂಗ್‌ಗೆ ಬರುವುದಿಲ್ಲ ಎಂದರೂ ನಂತರ ಒಪ್ಪಿ ಬರುತ್ತೇನೆ ಎಂದು ಹೇಳುತ್ತಾರೆ. ಅಲ್ಲಿ ಎಲ್ಲರೂ ಮಿಟಿಂಗ್‌ಗೆ ಸೇರಿದ್ದಾರೆ. ಅಲ್ಲಿ ಒಂದಾದ ಮೇಲೆ ಒಂದರಂತೆ ಅನೇಕ ದೂರುಗಳನ್ನು ಇವನ ಮೆಲೆ ಒರಿಸಿ ಎಲ್ಲರೂ ಇವನನ್ನು ಕೆಲಸದಿಂದ ತೆಗೆಯಿರಿ ಎಂದಾಗ ಆಗ ಅಧ್ಯಕ್ಷರು ಏಕಾಏಕಿ ಕೆಲಸದಿಂದ ತೆಗೆದರೆ ಅವನ ಹೆಂಡತಿ ಮಕ್ಕಳ ಗತಿ ಅವರ ಜೀವನ ಹೇಗೆ ಎಂದು ಹೇಳುತ್ತಾರೆ. ಹೇಗಾದರೂ ಮಾಡಲಿ ಎಂದಾಗ ಅವನಿಗೆ ಇದನ್ನು ಬಿಟ್ಟು ಬೇರೆ ಕೆಲಸ ಬರುವುದಿಲ್ಲ ಎಂದಾಗ ಕೂಲಿ ಮಾಡಲಿ ಎಂದು ಹೇಳುತ್ತಾರೆ. ಆಗ ಅವರು ಒಬ್ಬರ ಹೊಟ್ಟೆ ಮೇಲೆ ಹೊಡೆಯಬಾರದು ಅವನಿಗೆ ಒಮದು ಅವಕಾಶ ಕೊಡೋಣವೆಮದು ಹೇಳಿ ಎಲ್ಲರನ್ನು ಸಮಾಧಾನ ಮಾಡಿ ಮಿಕ್ಕ ಡೈರೆಕ್ಟರ್‌ಗಳೆಲ್ಲರೂ ಬರಲಿ ಎಂದು ಮುಂದಿನ ಗುರುವಾರ ಮೀಟಿಂಗ್ ಎಂದು ಹೇಳುತ್ತಾರೆ. ಒಬ್ಬ ಮೋಸಗಾರನನ್ನು ಯಾರು ವಹಿಸಿಕೊಳ್ಳುವುದಿಲ್ಲ. ತಲೆತಗ್ಗಿಸಿ ಯೋಚಿಸುತ್ತಾ ನಿಲ್ಲುತ್ತಾನೆ.

ಒಬ್ಬ ಅಸಹಾಯಕ ಹೆಣ್ಣನ್ನು ಸಮಾಜ ಯಾವೆಲ್ಲ ರೀತಿಯಲ್ಲಿ ಬಲಸಿಕೊಳ್ಳುತ್ತದೆ ಎಂಬುದನ್ನು ಕಾರ್ಗತ್ತಲು ಕವಿದಿತ್ತು ಕತೆಯಲ್ಲಿ ಕಾಣಬಹುದು. ಇಲ್ಲಿ ಕಥಾ ನಾಯಕ ಗಣೇಶರಾಯರು ಜೋರಾದ ಮಳೆ ಕಾರ್ಗತ್ತಲು ಮಿಂಚು ಬಂದು ಬಂದು ಹೋಗುತ್ತಿದೆ. ಒಂದೊಂದು ಹನಿ ಆಕಾಶದಿಂದ ಉದುರುತ್ತಿತ್ತು. ಎಳೆ ಮಿಂಚು ಮಿಂಚಿದಾಗಲೆಲ್ಲಾ ಒಂದೇ ಒಂದು ವ್ಯಕ್ತಿ ರಸ್ತೆಯಲ್ಲಿ ಕಾಣುತ್ತಿತ್ತು. ಕಪ್ಪಾದ ಮೂರ್ತಿ ಬಂಗಲೆಯ ಮೆಟ್ಟಿಲು ಮೇಲೆ ಕುಳಿತುಕೊಂಡಳು. ಅರಿವಾಗದೆಯೇ ಹೊರಬರುತ್ತಿತ್ತು. ನರಳಾಟ ಐದೇ ನಿಮಿಷದಲ್ಲಿ ಬಂಗಲೆಯ ಬಾಗಿಲು ದಢಾರನೆ ತೆಗೆಯಿತು ಅಲ್ಲಿ ಹೆಣ್ಣು, ಯಾರು ನೀನು? ಎಂದಾಗ ಬೆಳಗಿನ ತನಕ ಇಲ್ಲಿರಲು ಅವಕಾಶ ಕೊಡಿ ಎಂದಾಗ ತುಂಬ ಬಳಲಿತ್ತು ನೋವು ಮಿಶ್ರವಾಗಿತ್ತು. ಆ ಧ್ವನಿಯಲ್ಲಿ, ಗಣೇಶರಾಯರ ಮನಸ್ಸು ಕರಗಲಿಲ್ಲ. ಎದ್ದೋಗು ಎಂದರೆ ಹೋಗಬೇಕು ಎಂದು ಜವಾನನ್ನು ಕರೆಸಿ ದೂಕೋ ಹೊರಗೆ ಎಂದರು. ಕತ್ತೆತ್ತಿ ನೋಡಿ ಆ ಹೆಣ್ಣು ಅವಳ ಕಣ್ಣುಗಳು ಕ್ಷಣಕಾಲ ತಿರಸ್ಕಾರವನ್ನು ಸೂಸಿದವು. ಮನಸ್ಸಿನಲ್ಲಿ ಒಣನಗೆ ನಕ್ಕಿತು ಕಯಗಳು ಕೆದರಿದ್ದ

ತಲೆಯನ್ನು ಮತ್ತೂ ಕೆದರಿದವು. ಹುಬ್ಬು ಗಂಟಿಕ್ಕಿತು. ಕ್ಷೀಣವಾಗಿದ್ದ ಮುಖಭಾವ ಕ್ಷಣಾರ್ಧದಲ್ಲಿ ರೌದ್ರತೆಯನ್ನು ತಳೆದಿತ್ತು! (ಕಾರ್ಗತ್ತಲು ಕವಿದಿತ್ತು, ಪು.ಸಂ. ೧೨೯) ಅಲ್ಲಿಂದ ಎದ್ದು ಹೊರಟಳು.

ಒಂದು ಕ್ಷಣ ಚಳಿಗಾಗಲದಲ್ಲಿ ಅವರ ಮೈ ಒಂದೇ ಸಮನೆ ಬೆವರುತ್ತಿತ್ತು. ಗಾಳಿಗಾಗಿ ಕಿಟಕಿಯ ಬಳಿ ನಿಂತು ಹೊರಗೆ ನೋಡಿದರು. ಅವರ ಮನೆಯಿಂದ ಹೊರಟ ಹೆಣ್ಣು ಎದುರು ಮನೆಯ ಜಗುಲಿಯ ಮೇಲೆ ಕೂತಿದ್ದಳು. ಗಾಳಿ ಬೀಸಿದಂತೆಲ್ಲ ಮೈ ಬೆವರತೊಡಗಿತು. ಮನಸ್ಸಿನಲ್ಲಿ ಕೋಲಾಹಲ ಎದ್ದಿತು ಹಾಸಿಗೆ ಮೇಲೆ ಬಿದ್ದು ಹೊರಳಾಡಿದರು ಅವರ ಮೈ ಉರಿಯುತ್ತಿತ್ತು. ಹಾಸಿಗೆಯಲ್ಲಿ ಮುಳ್ಳುಗಳು ಇದೆ ಎಂದು ಭಾಸವಾಗುತ್ತಿತ್ತು. ಸೋಪಾದ ಮೇಲೆ ಕೂತರು ಅಲ್ಲಿ ಅವರ ಮನಸ್ಸಿನಲ್ಲಿ ಏನೋ ಒಂದು ತರಹದ ಭಯ, ಇದ್ದಕ್ಕಿದ್ದಂತೆಯೆ ಬೆಂಕಿ ಗೀರಿದ ಶಬ್ದ, ಒಡವೆಗಳೆಲ್ಲ ತಕತಕ ಕುಣಿಯುತ್ತಿದೆ, ಗೆಜ್ಜೆಯ ಶಬ್ದ ಒಂದು ಕ್ಷಣ ಸ್ಮಶಾನ ಮೌನ. ಓ ಪ್ರಿಯ ಎಂಬ ಮಧುರ ಗಾನ ತಿರುಗಿ ನೋಡಿದರು ಯಾರು ಇಲ್ಲ. "ನನ್ನಪ್ಪುಗೆಯ ಬಯಸಿ ನೀ ಬಂದೆ"[೧] ಈಗ ನೀನು ನನ್ನನ್ನು ಬೇಡ ಎನ್ನುತ್ತೀಯಾ ಎನ್ನುವ ಶಬ್ದ ಹತ್ತಿರ ಬರಬೇಡ ಎಂದು ಕಿರುಚಿದರು. ಅವರ ಕಿವಿಯಲ್ಲಿ ಹಾಡು ಗುಯ್‌ಗುಡುತ್ತಿತ್ತು. ನಿಲ್ಲಿಸು ನಿನ್ನ ರಾಗ ಎಂದು ಕಿರುಚುತ್ತಿದ್ದರು. ಬಾಗಿಲ ಕಡೆ ನೋಡಿದರು ಜಯಂತಿ ಅವರು ನಂಬಲಾಗಲಿಲ್ಲ. ದಿಗ್ಭ್ರಮೆಯಿಂದ ಅವರೇ ತಿರುಗಿ ನೋಡಿದರು ಮೇಜಿನ ಕಡೆಯಿಂದ ನಗು ಹೀಗೆ ನಗುವಿನ ಹೊಲೆ ಹರಿಯಿತು ಇಷ್ಟು ಹೊತ್ತು ಪ್ರಶ್ನೆ ಮಾಡಿದೆಲ್ಲ ಅವರ ಆತ್ಮಸಾಕ್ಷಿ ಅವರು ಮಾಡಿದ ತಪ್ಪಿನ ಅರಿವಾಗಲು ಪ್ರಶ್ನಿಸುತ್ತಿತ್ತು. ಇವರು ಸಮಾಜದಲ್ಲಿ ಉನ್ನತ ಸ್ಥಾನಮಾನವಿರುವವರು. ಇವರು ಆಗ ಮಾಡಿದ ಅಂದರೆ ಅವರ ಕಾಮಕ್ಕೆ ಬಲಿಯಾದ ಬಡ ಹೆಣ್ಣು ಮಗಳೇ ಈ ಜಯಂತಿ ಇವರೇ ಅವಳ ಹಿಂದೆ ಬಿದ್ದು ಅವಳನ್ನು ಒಲಿಸಿಕೊಳ್ಳಲು ಮಾತನಾಡುತ್ತಿದ್ದರು. ಅವಳೊಡನೆ ಚೆಲ್ಲಾಟವಾಡುವ ಸಲುವಾಗಿ ಅವಳು ಬರುತ್ತಲೇ ಕಾರು ಬಿಟ್ಟು ಹಿಂದೆ ಹಿಂದೆ ನಡೆದು ಹೋಗಿ ಹಿಂಸಿಸುತ್ತಿದ್ದರು. ಅವರು ಮಾಡಿದ ತಪ್ಪಿನಿಂದ ಅದು ಕೇವಲ ಸಣ್ಣ ತಪ್ಪು ಇರಬಹುದು. ಒಂದು ಹೆಣ್ಣಿನ ಬಾಳೇ ಅಲ್ಲಿ ಸರ್ವನಾಶವಾಗಿತ್ತು. ಅವಳನ್ನು ಮನೆಯಿಂದ ಅಟ್ಟಿದರು. ಸಮಾಜ ಅವಳನ್ನು ದೂಷಿಸಿತು, ನಗೆ ಪಾಟಲು ಆದಳು. ಹೇಳಲು ಕೇಳುವವರಿಲ್ಲದೆ ಗಂಡುನಾಯಿಗಳು ಅವಳನ್ನು ಮುತ್ತಿದವು.

---

೧. ಕಾರ್ಗತ್ತಲು ಕವಿದಿತ್ತು, ಪು. ೧೩೦.

ಅವಳ ಸ್ಥಿತಿ ಚಿಂತಾಜನಕವಾಗಿರುತ್ತದೆ. ಅವಳನ್ನು ಕಾಡಿ ಬೇಡಿ ಸುಖವನ್ನುಂಡ ನೀನೇ ಕೈಬಿಟ್ಟಮೇಲೆ ಇನ್ನಾರು ಕೇಳಬೇಕು ಎಂದು ಅವರ ಮನಃ ಸಾಕ್ಷಿ ಅವರನ್ನೇ ಪ್ರಶ್ನಿಸುತ್ತಿತ್ತು.

ಆದರೆ ಅವರು ಅವಳನ್ನು ಕರೆದುಕೊಂಡು ಬಾ ಎಂದಾಗ ಅವಳನ್ನು ಆ ಕೊಳಕಿಯನ್ನು ಹುಚ್ಚಿಯನ್ನೇ? ಎಂದು ಹೇಳುತ್ತಾರೆ. ಅವಳನ್ನು ಕರೆದು ಔಷದೋಪಚಾರ ಮಾಡಿ ಎನ್ನುತ್ತದೆ. ಅವಳು ನಿಮ್ಮ ಮನೆ ಕೆಲಸದವಳಾಗೇ ಇರಲಿ ಎನ್ನುತ್ತದೆ. ಅವರು ನೀನು ಯಾರು? ಎಂದು ಪ್ರಶ್ನಿಸಿದಾಗ ಅವರ ಅಂತರಾತ್ಮವನ್ನೇ ನೀನು ಯಾರು? ಎಂದು ಕೇಳುತ್ತೀಯಾ ಮೂರ್ಖ ಎಂದು ಹೇಳುತ್ತದೆ. ದಥಾರನೆ ಬಂದು ಬಾಗಿಲು ತೆರೆದು ಸೂರ್ಯ ಕಿರಣಗಳು ಕಿಟಕಿಯಿಂದ ಹಾದು ಬಂದು ಅವರ ಕಣ್ಣನ್ನು ಚುಚ್ಚಿದವು. ಬಟ್ಟೆ ಹಾಕಿಕೊಂಡು ತಮ್ಮ ಜಯಂತಿಯನ್ನು ಕರೆತರಲು ಹೊರಬಾಗಿಲಿಗೆ ಬಂದು ಗಫಾರ್‌ನನ್ನು ಕಂಡು ಎದುರು ಜಗುಲಿಯ ಮೇಲಿದ್ದ ಆ ಹೆಂಗಸನ್ನು ಕರೆತರಲು ಹೇಳುವ ಮೊದಲೇ ಕೆಂಚ ಓಡೋಡಿ ಬಂದು ಎದುರು ಜಗಲಿಯ ಮೇಲೆ ಒಬ್ಬಳು ಮಲಗಿದ್ದಳಲ್ಲಾ ಅವಳೇನಾದ್ಲು ಎಂದಾಗ ಅದು ಬೇವರ್ಸಿ ಹೆಣ ಎಂದು ಬೆಳಿಗ್ಗೆ ಪೋಲಿಸ್ನೋರು ಬಂದು ತಕ್ಕೊಂಡು ಹೋದ್ರು ಎಂದಾಗ ನನ್ನ ಜಯಂತಿ ಬೀದಿ ಹೆಣವೇ ಎಂದು ಮುಖದ ಮೇಲೆ ಪಶ್ಚಾತ್ತಾಪದ ಗೆರೆಗಳು ಎದ್ದುಕಾಣುತ್ತದೆ. ಇಲ್ಲಿ ಯಾರ ಹತ್ತಿರ ಸುಳ್ಳು ಹೇಳಿದರೂ, ಮೋಸಮಾಡಿದರೂ ನಮ್ಮ ಅಂತರಾತ್ಮ ನಮ್ಮನ್ನು ಪ್ರಶ್ನಿಸದೇ ಸುಮ್ಮನಿರುವುದಿಲ್ಲ. ಆದರೂ ಮುಂದೆ ಸತ್ಯ ಒಪ್ಪಿಕೊಳ್ಳಬೇಕು. ಹಣದ ಅಹಂಕಾರದಿಂದ ಒಬ್ಬ ಅಸಹಾಯಕ ಹೆಣ್ಣಿನ ಬದುಕು ಕಮರಿಹೋಗುತ್ತದೆ. ಕೊನೆಗೆ ಕಾಮಕ್ಕೆ ಬಲಿಯಾಗಿ ಬೀದಿಗೆ ಬಿದ್ದ ಅವಳು ಹುಚ್ಚಿಯಾಗುವ ಕಥೆ ಇದಾಗಿದೆ.

ನಮ್ಮ ಸಮಾಜದಲ್ಲಿ ಮೊದಲಿನಿಂದಲೂ ತಾರತಮ್ಯದ ಅನೇಕ ಅಂಶಗಳಿಗೆ ಅಂಟಿಕೊಂಡೆ ಬಂದಿದೆ. ಅಂತಹ ಅಂಶಗಳಲ್ಲಿ ಉಳ್ಳವರು ಮತ್ತು ಬಡವರ ನಡುವಿನ ಹೋರಾಟ ಹಿಂದಿನಿಂದಲೂ ಅದು ಹಾಗೆಯೇ ಬಂದುಬಿಟ್ಟಿದೆ. ಬಡವರ ಕೋಪ ದವಡೆಗೆ ಮುಲ ಎಂಬ ಮಾತಿನಂತೆ ಬಡವರ ಮಾತನ್ನು ಆಲಿಸುವವರು ಯಾರು ಇರುವುದಿಲ್ಲ. ಮನೆಯ ಜೀತಕ್ಕೆ ಅವರನ್ನು ಬಳಸಿಕೊಳ್ಳುತ್ತಾರೆ. ಆದರೆ ಸುಖದ ಜೀವನ ನಡೆಸಲು ಅವರಿಗೆ ಅವಕಾಶವೇ ಇರುವುದಿಲ್ಲ. ಅದೇ ಹೋಲಿಕೆಯುಳ್ಳ ಒಂದು ಕಥಾಭಾಗ ಆ ಆರಾಣೆಗಳು ಕತೆಯಲ್ಲಿ ಕಂಡುಬರುತ್ತದೆ.

[illegible]

ಗ್ಯಾದೆ ಎಂಬ ಬಡ ಕ್ಷೌರಿಕ ಅವನ ಹತ್ತಿರ ಕ್ಷೌರಕ್ಕೆ ಹಣ ಕೊಡುವವರು ಬಂದರೆ ಮಾತ್ರ ಅವನಿಗೆ ಊಟಕ್ಕೆ ಕಾಸು. ಅವನು ಎಷ್ಟು ದಿನ ಬೇಕಾದರೂ ತಡೆದುಕೊಳ್ಳುತ್ತಾನೆ. ಆದರೆ ಅವನ ವಯಸ್ಸಾದ ತಾಯಿಯು ಎಷ್ಟು ದಿನ ಉಪವಾಸ ಇರಲು ಸಾಧ್ಯ. ಗ್ಯಾದೆಗೆ ಅವ್ಯಕ್ತ ಕೋಪ ಬಂದರು ಸಹಿಸಿಕೊಳ್ಳುತ್ತಾನೆ. ಆ ಊರಿನಲ್ಲಿ ನಲವತ್ತಕ್ಕೂ ಹೆಚ್ಚು ಅಡಿಗೆ ಕುಳಗಳಿವೆ. ಒಂದೊಂದು ಮನೆಯಿಂದ ಒಂದೊಂದು ತರಹ ಅಡಿಗೆ ದೊರೆಯುತ್ತಿತ್ತು. ವರ್ಷಕ್ಕೆ ಹದಿನೈದು ಪಲ್ಲ ಬರುತ್ತದೆ. ಅವನಿಗೂ ಅವನ ತಾಯಿಗೂ ಬೇಕಾದಷ್ಟಾಗುತ್ತದೆ. ಆದರೆ ಆ ವರ್ಷ ಮಳೆ ಬೆಳೆ ಕಡಿಮೆಯಾದ್ದರಿಂದ ಏಳೆಂಟು ಪಲ್ಲ ಸಿಗುತ್ತದೆ. ಅವನ ಜೊತೆಗೆ ಏಳೆಂಟು ಪುಂಡರು ಸೇರಿ ಅನೇಕ ಕೆಟ್ಟ ಚಟಗಳನ್ನು ಮೈಗೂಡಿಸುತ್ತಾರೆ. ಜೊತೆಗೆ ಅನೇಕ ತಾನಾಗಿಯೇ ಅಭ್ಯಾಸವಾಗುತ್ತದೆ. ಶೇಖರಿಸಿದ ಧಾನ್ಯವೆಲ್ಲ ಮುಗಿಯುತ್ತದೆ. ತಾಯಿ ಬುದ್ಧಿ ಹೇಳಿದರೂ ಕೇಳುತ್ತಿರುವುದಿಲ್ಲ. ಅವರು ಜಿಗಣೆ ತರಹ ಹೀರಿ ಹೋಗುತ್ತಾರೆ. ಯಾರೂ ಸಹ ಇವನಿಗೆ ಸಹಾಯ ಮಾಡುವುದಿಲ್ಲ.

ಆ ದಿನ ಯಾರು ಕ್ಷೌರಕ್ಕೆ ಬರದೇ ಇದ್ದುದರಿಂದ ಹಾಗೇ ಕುಳಿತಿರುತ್ತಾನೆ. ಅಲ್ಲಿ ಚಿಕ್ಕ ಹುಡುಗ ಬಂದೂ ತನ್ನ ತಂದೆ ಕ್ಷೌರ ಮಾಡಿಸಿಕೊಂಡು ಬರಲು ಹೇಳಿದ್ದಾರೆ. ಮಾಡಿ ಎಂದಾಗ ಹಣ ತಂದಿದ್ದೀಯಾ ಎಂದು ಕೇಳಿದಾಗ ಹೌದು ಎಂದಾಗ ಸಂತೋಷದಿಂದ ಊಟಕ್ಕೆ ದಾರಿಯಾಯಿತೆಂದೂ ಕ್ಷಣಾರ್ಧದಲ್ಲಿ ಕ್ಷೌರ ಮಾಡಿ ಆ ಪಕ್ಕದ ಅಂಗಡಿಯಲ್ಲಿ ಚಿಲ್ಲರೆ ಮಾಡಿಸಿ ಆರಾಣೆ ಇಟ್ಟುಕೊಮಡು ಎರಡಾಣೆ ಕೊಟ್ಟು ಕಳುಹಿಸುತ್ತಾನೆ. ಆಗ ಸಂತೋಷದಿಂದ ಮತ್ತೆ ಯಾರಾದರೂ ಬರಬಹುದೆಂದು ಕಾಯುತ್ತಿರುತ್ತಾನೆ. ಆಗ ದೂರದಲ್ಲಿ ಒಬ್ಬ ದಡುತಿ ವ್ಯಕ್ತಿ ಕಾಣಿಸುತ್ತಾನೆ. ಸಂತೋಷದಿಂದ ಹೋಗಿ ಎಲ್ಲವನ್ನೂ ಶುಚಿಗೊಳಿಸುತ್ತಾನೆ. ನಂತರ ಹೊರಗಡೆ ಬಂದು ನಿಲ್ಲುತ್ತಾನೆ. ಅವನು ಬಂದು ನನ್ನ ಮಗನ ಹತ್ತಿರ ಎಷ್ಟು ಹಣ ತೆಗೆದುಕೊಂಡೆ ಎಂದಾಗ ಆರಾಣೆ ಎನ್ನುತ್ತಾನೆ. ದೊಡ್ಡವರಿಗೂ, ಚಿಕ್ಕವರಿಗೂ ಒಂದೇ ತರಹ ಎಂದಾಗ ಅಂದರೆ ಎಲ್ಲ ಕ್ಷೌರ ಮಾಡಬೇಕಲವ್ವಾ? ಅಷ್ಟೆ ಎಂದಾಗ ಅವನ ಕಪಾಲಕ್ಕೆ ಒಡೆಯುತ್ತಾನೆ. ಇವನು ಗಾಬರಿಯಿಂದ ಹಿಂದೆ ಸರಿಯುತ್ತಾನೆ. ಆ ಹಣ ವಾಪಸ್ಸು ಕೊಡು ಎಂದಾಗ ಭಯದಲ್ಲಿ ಕೊಡುವುದಿಲ್ಲ ಎಂದಾಗ ಮತ್ತೆ ರಪ್ ಎಂದು ಹೊಡೆಯುತ್ತಾನೆ. ಕೊನೆಗೆ ಚೆನ್ನಾಗಿ ಅವನನ್ನು ಥಳಿಸಿ ಅವನ ಹತ್ತಿರ ಇದ್ದ ಹಣವನ್ನು ಕಿತ್ತುಕೊಂಡು ಹೊರಟುಹೋಗುತ್ತಾನೆ.

ಗ್ಯಾದೆ ತನ್ನ ಎರಡು ಕಪಾಲಗಳನ್ನು ಸವರುವುದಕ್ಕೆ ಕೈಹಾಕಿದ ಆದರೆ ಕೈಯನ್ನು ಮುಟ್ಟಲಾಗಲಿಲ್ಲ. ಎರಡು ಕೆನ್ನೆ ನೀಲಿಗಟ್ಟಿತ್ತು. ಗ್ಯಾದೆಯ ಹೃದಯ ರೋಷದಿಂದ ಕುದಿಯುತ್ತಿತ್ತು. ಎರಡು ಹೊಟ್ಟೆಯ ಮೇಲೆ ಹೊಡೆದ ಅವನು ಆರಾಣೆಯಿಂದ ಅವನ ಗಂಟೇನೂ ಮುಳುಗಿ ಹೋಗುತ್ತಿತ್ತಾ ಎಂದು ಅವನು ತನ್ನ ಅಸಹಾಯಕತೆಯನ್ನು ಮಾತಿನ ಮೂಲಕ ಹೊರಹಾಕುತ್ತಿದ್ದ. ಉಳ್ಳವರು ಬಡವರ ಮೇಲೆ ದಬ್ಬಾಳಿಕೆ ಮಾಡುತ್ತಿರುವುದು ಕಂಡುಬರುತ್ತದೆ. ಆದರೆ ಅವನ ನೋವುಗಳನ್ನು ಯಾರು ಕೇಳುವವರಿಲ್ಲ.

ಯೌವನಕ್ಕೆ ಕಾಲಿಟ್ಟ ಮುಗ್ದ ಹುಡುಗ ಯಾವ ರೀತಿಯ ಅನೇಕ ಸಮಸ್ಯೆಗಳಿಗೆ ಬಲಿಯಾಗುತ್ತಾನೆ. ಅವರ ವಯಸ್ಸಿನಲ್ಲಿ ಎಲ್ಲವು ಆಕರ್ಷಣೆ ಎಂದು ತಿಳಿಯುವ ಹೊತ್ತಿಗಾಗಲೇ ಅದು ಮುಗಿದು ಹೋದ ಕಾಲವಾಗಿರುತ್ತದೆ. ಹಳ್ಳಿಗಾಡಿನ ಮುಗ್ಧ ಹುಡುಗ ನೈಜ ಬದುಕಿನ ಚಿತ್ರಣ ಈ ಮೂರನೆಯವಳು ಕತೆಯಲ್ಲಿ ನೋಡಬಹುದು.

ಹಾಗೆಯೇ ಪ್ರಕೃತಿ ಸೌಂದರ್ಯವನ್ನು ಸವಿಯುತ ಕುಳಿತ್ತಿದ್ದ ಶಂಕರ ಆಗ ಅಲ್ಲಿ ಕಾಲುವೆಯ ಆಚೆ ಏರಿಯ ಮೇಲೆ ಒಂದು ಹರೆಯದ ಹೆಣ್ಣೂ ಮತ್ತು ಅದೇ ವಯಸ್ಸಿನ ಗಂಡೂ ಏನೇನೂ ಮಾತನಾಡುತ್ತಾ ಹೋಗುತ್ತಿರುತ್ತಾರೆ. ಅದನ್ನು ನೋಡಿದ ಶಂಕರನಿಗೆ ಕಾಲೇಜು ದಿನಗಳು ನೆನಾಗುತ್ತದೆ. ತಾನೂ ರೀಟಾಳೊಡನೆ ಅದಕ್ಕಿಂತ ಹತ್ತಿರದಲ್ಲಿ ಅವಳ ಹೆಗಲ ಮೇಲೆ ಕೈಹಾಕಿ ಆರಾಮವಾಗಿ ಎಷ್ಟೋ ಸಾರಿ ನಡೆದುಹೋಗುತ್ತಿದ್ದ ನೆನಪಾಗುತ್ತದೆ. ಅವರ ಬೇಟೆ ಕ್ಷಣಾರ್ಧದಲ್ಲಿ ಸೈಕಲ್ ಡಿಕ್ಕಿಯಲ್ಲಿ ಆದಕೂಡಲೇ ಕಾಫಿಗೆ ಹೋಗಿಬರುತ್ತಾರೆ. ನಂತರ ಮೇಜಿನ ಮೇಲಿದ್ದ ೫ ರೂಪಾಯಿ ತಂದುಕೊಡುತ್ತಾಳೆ. ಆಗ ಇವನು ಅವಳನ್ನು ಪ್ರಾಮಾಣಿಕಳು ಎಂದು ನಂಬಿರುತ್ತಾಳೆ. ಆದರೆ ಇವನ ರೂಮಿನಲ್ಲಿ ಕಳೆದ ಮೊದಲ ದಿನ ಅವನ ಜೀವನದ ಸಂತೋಷ ದಿನ ಅದೇ ಸುಖದ ಮತ್ತಿನಲ್ಲಿದ್ದಾಗ ಅವನ ಕೈಗಡಿಯಾರ ಹಾಗೂ ಉಂಗುರ ತೆಗೆದುಕೊಮಡು ಹೋಗಿದ್ದಳು. ಆದರೂ ಅವನಿಗೆ ಅದರ ಬಗ್ಗೆ ತಲೆ ಕೆಡಿಸಿಕೊಂಡಿರಲಿಲ್ಲ. ಉಂಗುರ, ವಾಚು ಹೋದರೆ ತೆಗೆದುಕೊಳ್ಳಬಹುದು. ಆದರೆ ಹೆಣ್ಣನ್ನು ಯಾರು ತಂದು ಕೊಡುತ್ತಾರೆಂದು ಜೇಬಿನಿಂದ ಎಷ್ಟು ಹಣ ತೆಗೆದಳು ಎಂಬುದು ಅವನಿಗೆ ತಿಳಿದಿರುವುದಿಲ್ಲ. ಮರುದಿನ ಅವಳ ರೂಮಿಗೆ ಹೋದಾಗ ಬಾಗಿಲು ಹಾಕಿತ್ತು. ಕಿಟಕಿಯಿಂದ ನಗುವಿನ ಶಬ್ದ ಕೇಳಿದಾಗ ಇಣುಕಿ ನೋಡಿ ಆ ದೃಶ್ಯ ಎಂದು ಅವನು ಮರೆಯುವಂತಿರಲಿಲ್ಲ. ಅದನ್ನು ನೆನೆದಾಗಲೆಲ್ಲಾ ಅವನಿಗೆ ಕೋಪ ಉಕ್ಕುತ್ತಿತ್ತು.

ಇದೇ ರೀತಿಯ ಇನ್ನೊಂದು ಘಟನೆ ನಡೆದಿರುತ್ತದೆ. ಅವನ ಜೀವನದಲ್ಲಿ ಅದೇ ಊರಿನ ಶಾಂತಳನ್ನು ಪ್ರೀತಿಸಿರುತ್ತಿರುತ್ತಾರೆ. ಅವಳು ನೀರಿನ ನೆಪಹೇಳಿ ಇವನನ್ನು ನೋಡಲು ಬರುತ್ತಿದ್ದಳು. ಆ ದಿನ ಬರಲು ತಡವಾಯಿತು. ಅವರ ಮನೆಯಲ್ಲಿ ಕಳಿಸುತ್ತಾರೋ ಇಲ್ಲವೋ ಅವಳಿಗೂ ನನ್ನಂತೆ ಸಂಕಟವಾಗುತ್ತಿರಬಹುದೆಂದು ಅವಳು ಆಗಾಗ ಇವನ ಹತ್ತಿರ ಹಣ ಕೇಳುತ್ತಿರುತ್ತಾಳೆ. ಅದಕ್ಕೆ ಇವಳು ಹಣಕೋಸ್ಕರ ನನ್ನ ಜೊತೆ ಹೀಗೆ ನಡೆದುಕೊಂಡಿರಬಹುದು. ಏನೇನೋ ಯೋಚಿಸುತ್ತಾ ರೀಟಾಳಿಗೂ ಇವಳಿಗೂ ಹೋಲಿಕೆ ಮಾಡಿ ನೋಡಿ ತಪ್ಪು ಎಂದು ತಿಳಿದು ಸುಮ್ಮನಾಗುತ್ತಾನೆ. ನೀರಿನ ಶಬ್ದ ಕೇಳಿ ಶಾಂತ ಬಂದಲು ಎಂದು ಅವಳ ಕಡೆ ಹೋದಾಗ ಅವಳು ಅವರ ತಂದೆ ತಾಯಿ ತೋರಿದ ಹುಡುಗನನ್ನು ಮದುವೆಯಾಗುತ್ತಿದ್ದೇನೆ ಎಂದು ಹೇಳಿದಳು. ಮನೆಯಲ್ಲಿ ದೊಡ್ಡ ರಾದ್ಧಾಂತವೇ ಆಗಿತ್ತು. ಕಪಾಲಗಳು ಕೆಂಪಾಗಿದ್ದವು. ಅದನ್ನು ಕೇಳಿದ ಕ್ಷಣ ಅವನ ತಲೆ ತಿರುಗಿದಂತಾಯಿತು. ಆಗ ಇವನೇ ಧೈರ್ಯ ತಂದುಕೊಂಡು ಶಾಂತಳು ಹಿರಿಯರನ್ನು ಆಶ್ರಯಿಸಿದ್ದಾಳೆ. ಅವರನ್ನು ಬಿಟ್ಟರೆ ಅವಳಿಗೆ ಜೀವನವಿಲ್ಲ ಎಂದು ಯೋಚಿಸಿ ಸುಮ್ಮನಾಗುತ್ತಾನೆ.

ಮನೆಗೆ ಬಂದ ಶಂಕರನಿಗೆ ಆಶ್ಚರ್ಯ ಕಾದಿತ್ತು. ಅಲ್ಲಿ ಅವನ ತಂದೆ ತಾಯಿ ಇವನಿಗೆ ಗೌರ ಎಂಬ ಹೆಣ್ಣು ನೋಡಿ ಮದುವೆಗೆ ನಿಶ್ಚಯ ಮಾಡಿದರು. ಇಲ್ಲಿ ಎಲ್ಲರೂ ಅವರ ದಾರಿ ನೋಡಿಕೊಂಡರು. ತಾನು ತನ್ನ ತಂದೆಗೆ ತಾಯಿಗೆ ಮೋಸಮಾಡಬಾರದೆಂದು ಒಪ್ಪಿಕೊಂಡು ಈ ಕತೆಯಲ್ಲಿ ಆ ವಯಸ್ಸಿನ ಆಕರ್ಷಣೆ ಪ್ರೇಮ ಎನಿಸುತ್ತದೆ. ರೀಟಾ ಇಂತಹ ಪೆದ್ದರಿಗೆ ಟೋಪಿ ಹಾಕಿ ಜೀವನ ಸಾಗಿಸುತ್ತಾಳೆ. ಹಣವುಳ್ಳವರು ಕರುಡರು ಎನ್ನುವುದು ಶಾಂತ ವಿಚಾರದಲ್ಲಿ ನಿಜವಾಗುತ್ತದೆ. ಆ ವಯಸ್ಸಿನಲ್ಲಿ ಮನಸ್ಸು ಮಂಗನ ತರಹದ ಒಂದು ಕೊಂಬೆಯಿಂದ ಇನ್ನೊಂದು ಕೊಂಬೆಗೆ ಹಾರುತ್ತದೆ. ಹಾಗೆಯೇ ಶಂಕರನ ಮನಸ್ಸಿನ ಪರಿಸ್ಥಿತಿಯಾಗಿದೆ.

ಹಳ್ಳಿಯ ಮುಗ್ಧಜನರಿಗೆ ಬೆಳಗಿನಿಂದ ಸಂಜೆಯವರೆಗೂ ದುಡಿದು ದಣಿದು ತಮ್ಮ ಕರ್ತವ್ಯದಲ್ಲಿ ಅವರು ನಿರತರಾಗಿರುತ್ತಾರೆ. ಇದನ್ನೇ ತಿಳಿದ ಕೆಲವು ಕಿಡಿಗೇಡಿ ತಮ್ಮ ಕೆಟ್ಟಕಾರ್ಯಗಳನ್ನು ಹಣಕ್ಕಾಗಿ ಪ್ರಾರಂಭಿಸುತ್ತಾರೆ. ಅಂತಹ ಒಂದು ಅನಿಷ್ಟ ಸಾಗಾಣಿಕೆ ಎಂದರೆ ಕಳ್ಳಭಟ್ಟಿ ಸಾಗಾಣಿಕೆ. ಇದನ್ನು ಫಸಲು ಎಂಬ ಕತೆಯಲ್ಲಿ ನಾವು ಕಾಣಬಹುದು. ಹಳ್ಳಿಯ ಮುಗ್ಧ ಹುಡುಗ ಹಳ್ಳಿಯಲ್ಲಿ ನಡೆಯುತ್ತಿದ್ದ ಈ ಕಳ್ಳಭಟ್ಟಿ ಸಾಗಾಣಿಕೆಯನ್ನು ಹೇಗಾದರೂ ನಿಲ್ಲಿಸಬೇಕೆಂದು ಅಂದುಕೊಳ್ಳುತ್ತಾನೆ. ಅದರಿಂದ

ಅನೇಕ ಸಂಸಾರಗಳು ಬೀದಿಪಾಲಾಗಿಬಿಟ್ಟಿದೆ. ಮಕ್ಕಳು ಅನಾಥರಾಗುತ್ತಾರೆ. ಇದನ್ನೆಲ್ಲ ತಿಳಿದ ಆ ಹುಡುಗ ಈ ಕಳ್ಳಸಾಗಾಣಿಕೆಯನ್ನು ಹೇಗಾದರೂ ಮಾಡಿ ನಿಲ್ಲಿಸಬೇಕೆಂದು ಪಣ ತೊಡುತ್ತಾನೆ. ಅದಕ್ಕೆ ಆ ಊರಿನ ಪೊಲೀಸರಿಗೆ ತಿಳಿಸುತ್ತಾನೆ. ಆದರೆ ಅವರು ಬರುವುದು ಗೊತ್ತಾದರೆ ಅವರೆಲ್ಲಾ ಹುಷಾರಾಗಿ ಬಿಡುತ್ತಾರೆ. ಅವರನ್ನು ಸಾಕ್ಷಿ ಸಮೇತ ಹಿಡಿಯಬೇಕೆಂದು ಯೋಚಿಸಿ ಅವರಿಗೆ ನಾನೇ ಒಂದು ದಿನ ಗೊತ್ತು ಮಾಡುತ್ತೇನೆ ಆ ದಿನ ನೀವು ಬಂದರೆ ಸಾಕು ಎಂದು ಹೇಳುತ್ತಾನೆ.

ಆ ರಾತ್ರಿ ಪೊಲೀಸರು ಸಾಮಾನ್ಯ ಬಟ್ಟೆಯನ್ನು ಧರಿಸಿ ಇವರೆಲ್ಲಾ ಊಟ ಮುಗಿಸಿ ಅವರನ್ನು ಹಿಡಿಯಲು ಹೊಂಚು ಹಾಕುತ್ತಿರುತ್ತಾರೆ. ಆಗ ಅಲ್ಲಿ ಹೆಣ್ಣಿನ ಶಬ್ದ ಕೇಳಿ ಅದನ್ನು ಹಾಕಿ ತಿರುಗಿಸಿ ಎಂದು ಹೇಳುವುದನ್ನು ಕೇಳಿದಾಗ ಅವರು ತಕ್ಷಣ ಅಲ್ಲಿಗೆ ಹೋಗುತ್ತಾರೆ. ಮಿಕ್ಕವರೆಲ್ಲರೂ ಸುತ್ತಮುತ್ತ ಇರುತ್ತಾರೆ. ಆ ಹುಡುಗನು ಅಲ್ಲಿಯೇ ಇರುತ್ತಾನೆ. ಪೊಲೀಸರು ಒಳಗಡೆ ನುಗ್ಗುತ್ತಾರೆ. ತಕ್ಷಣ ಆ ಹೆಂಗಸು ಯಾರು ಎಂದು ಕೇಳಿದಾಗ ಪೊಲೀಸರು ಇಲ್ಲಿ ಕಳ್ಳಭಟ್ಟಿ ಇಳಿಸುತ್ತಿದ್ದರಂತಲ್ಲ ಅವರೆಲ್ಲರನ್ನೂ ಕರೆ ಎಂದು ಹೇಳಿದಾಗ ಒಂದು ನಿಮಿಷ ಎಂದು ಒಳಗೆ ಹೋದ ಆಕೆ ಕುಡಿಯಲು ಹಣ್ಣಿನ ರಸವನ್ನು ತಂದು ಇವರ ಮುಂದಿಡುತ್ತಾಳೆ. ಅವರು ಬೇಡ ಎಂದಾಗ ತಾನೇ ಸಮೀಪದಲ್ಲಿ ಕುಳಿತು ಕುಡಿಸಲು ಹೋಗುತ್ತಾಳೆ. ಆಗ ಅವನು ತುಂಬ ಸಲುಗೆಯಿಂದ ಹತ್ತಿರದಲ್ಲಿ ಕುಳಿತು ಅವನಿಗೆ ಹಣ್ಣಿನ ರಸ ಕುಡಿಸುತ್ತಾಳೆ. ಅವನಿಗೆ ಏನೋ ಮತ್ತು ಬಂದಂತಾದಾಗ ಅವಳು ಉಪಾಯವಾಗಿ ನೀವು ಎಷ್ಟು ಜನ ಇದ್ದೀರಾ? ಯಾರು ನಿಮ್ಮನ್ನು ಇಲ್ಲಿಗೆ ಕರೆದುಕೊಂಡು ಬಂದರು ಎಂದು ಕೇಳುತ್ತಾಳೆ. ಅವನು ಹೊರಗಡೆ ಇದ್ದಾನೆ ಎಂದು ತಿಳಿಸುತ್ತಾನೆ. ಅದಕ್ಕೆ ಅವಳು ಅವನನ್ನು ನಿಮ್ಮವರಿಂದ ಹಿಡಿಸಿ ಎನ್ನುತ್ತಾಳೆ. ಅದನ್ನೆಲ್ಲಾ ಕಿಂಡಿಯಿಂದ ನೋಡುತ್ತಿದ್ದ ಈ ಹುಡುಗ ಎಚ್ಚರಗೊಂಡು ಪೊಲೀಸರು ಅವನನ್ನು ಹಿಡಿದುಕೊಳ್ಳಿ ಎಂದು ಹೇಳಿ ಇವನ ಹತ್ತಿರ ಬಂದಾಗ ಅವನು ನಾನಲ್ಲ ಅಲ್ಲಿ ಬೇರೆಯವರು ನೋಡಿ ಎಂದು ಅಲ್ಲಿಂದ ಓಡಲು ಪ್ರಾರಂಭಿಸುತ್ತಾನೆ. ಮನೆ ಮುಂಭಾಗ ಓಡಿಬರುತ್ತಿರುವಾಗ ಕಲ್ಲಿಗೆ ಕಾಲು ತಾಕಿ ರಕ್ತ ಸುರಿಯಲಾರಂಭಿಸುತ್ತದೆ. ಅದಕ್ಕೆ ಜೋರಾಗಿ ಕೂಗಿದಾಗ ಅವನ ತಂದೆ ಬಂದು ಅವನನ್ನು ಒಳಗೆ ಕರೆದುಕೊಂಡರು. ಬದುಕಿತು ಬಡ ಜೀವ ಎಂದುಕೊಂಡು ಉಸಿರುಬಿಟ್ಟ.

ಇಲ್ಲಿ ಒಬ್ಬ ಹೆಣ್ಣು ತಮ್ಮ ಮೋಸ ಜಾಲ ಪತ್ತೆ ಹಚ್ಚಲು ಬಂದಿದ್ದ ಪೊಲೀಸರಿಗೆ ಮತ್ತಿನ ಯಾವುದೋ ರಸವನ್ನು ಕುಡಿಸುತ್ತಾಳೆ. ಆಗ ಅವನ ಬಾಯಿಂದ ಸತ್ಯ

ತಿಳಿದುಕೊಳ್ಳಲು ಮುಂದಾಗುತ್ತಾಳೆ. ಅವಳು ಸಂದರ್ಭಕ್ಕೆ ತಕ್ಕಂತೆ ಬಣ್ಣ ಬದಲಿಸುತ್ತಾ ತನ್ನವರೆಲ್ಲರನ್ನೂ ರಕ್ಷಿಸಿಕೊಳ್ಳುತ್ತಾಳೆ. ಆ ಪೊಲೀಸರಿಗೆ ಮರಳು ಮಾಡಿ ಅವರು ಸಹ ಆ ಹೆಣ್ಣಿನ ಆಕರ್ಷಣೆಯಿಂದ ತಮ್ಮ ಕರ್ತವ್ಯವನ್ನು ಮರೆಯುತ್ತಾರೆ. ಕಳ್ಳರಿಗೆ ಸಹಾಯವಾಗುವ ರೀತಿಯಲ್ಲಿ ನಡೆದುಕೊಳ್ಳುತ್ತಾರೆ. ನಿರಾಪರಾಧಿಯ ಆ ಹುಡುಗನನ್ನು ಬಂಧಿಸಲು ಮುಂದಾಗುತ್ತಾರೆ. ಇದನ್ನು ತಿಳಿದ ಹುಡುಗ ಅಲ್ಲಿಂದ ಪಾರಾಗುವ ಉಪಾಯ ಹುಡುಕಿ ಅಲ್ಲಿಂದ ತಪ್ಪಿಸಿಕೊಳ್ಳುತ್ತಾನೆ. ಬರೀ ಒಬ್ಬರಿಂದ ಮಾತ್ರ ಊರು ಉದ್ಧಾರವಾಗಲೂ ಸಾಧ್ಯವಿಲ್ಲ. ಊರಿನವರೆಲ್ಲ ಸೇರಿ ಹೋರಾಡಿ ಅದನ್ನು ನಿಲ್ಲಿಸಬೇಕು.

ಒಂದು ಸಂಸಾರ ಸರಾಗವಾಗಿ ನಡೆಯಲು ಮನೆಯವರ ಪ್ರತಿಯೊಬ್ಬರ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಹೊಂದಾಣಿಕೆ ಎಂಬುದು ಬಂದಾಗ ಸಂಸಾರ ಸುಖದ ಸಾಗರವಾಗುತ್ತದೆ. ಕೂಡಿ ಬಾಳಿದರೆ ಸ್ವರ್ಗ ಸುಖ ಎಂದು ನಮ್ಮ ಹಿರಿಯರು ಹೇಳಿದ್ದಾರೆ. ಅನೇಕ ಹಳ್ಳಿಗಳಲ್ಲಿ ಅನೇಕ ಅವಿಭಕ್ತ ಕುಟುಂಬಗಳು ಅನೇಕ ಸಮಸ್ಯೆಗಳಿಂದ ಬಿರುಕುಬಿಟ್ಟು ವಿಭಕ್ತ ಕುಟುಂಬ ಆಗಿರುವುದನ್ನು ನಾವು ಕಾಣಬಹುದು. ಇಲ್ಲಿ ಗುಡ್ಡಯ್ಯನಿಗೆ ಇಬ್ಬರು ಹೆಂಡಿರು ಮಕ್ಕಳಾಗುವ ಮೊದಲೇ ಸಾವನ್ನಾಪಿರುತ್ತಾರೆ. ಮೂರನೆಯವಳು ಒಂದು ಮಗುವನ್ನು ಹೆತ್ತಿ ಸಾಯುತ್ತಾನೆ. ಆ ಮಗು ನೋಡಿಕೊಳ್ಳಲು ತೆಂಕ ಸೀಮೆಯ ಬಡ ಹೆಣ್ಣನ್ನು ನೋಡಿ ಇವನ ವಯಸ್ಸನ್ನು ನೋಡದೆ ಗುಡ್ಡಯ್ಯನಿಗೆ ಗೋಳೂರ ದ್ಯಾವಕ್ಕನನ್ನು ತಂದು ಮದುವೆ ಮಾಡುತ್ತಾರೆ. ಮೊದಮೊದಲು ಮದುವೆಯಾದ ಹೆಣ್ಣಿಗೆ ಆಸೆ ಆಕಾಂಕ್ಷೆಗಳಿರುವ ಹಾಗೆ ಇವಳಿಗೂ ಇರುತ್ತದೆ. ಆದರೆ ಅವಳ ಗಂಡ ಯಾವ ಆಸೆಗೂ ಸ್ಪಂದಿಸುವುದಿಲ್ಲ. ಆಗ ಅವಳು ಜಡವಾಗುತ್ತಾಳೆ. ಗುಡ್ಡಯ್ಯನಿಗೆ ಇಸ್ಪೀಟಾಡುವ ಚಟವಿರುವುದು ತಿಳಿದಿರುತ್ತದೆ. ಒಂದು ದಿನ ಚೆನ್ನಾಗಿ ಅವನನ್ನು ಹಿಡಿದು ಒಡೆಯುತ್ತಾಳೆ. ಅಂದಿನಿಂದ ಅವಳನ್ನು ಕಂಡರೆ ಇವನಿಗೆ ಭಯ ಆವರಿಸಿತ್ತು.

ಮಗ ವಯಸ್ಸಿಗೆ ಬಂದಾಗ ಅವನಿಗೆ ಚಿನ್ನ ಒಡವೆ ಮಾಡಿಸಿ ಹಾಕುತ್ತಿದ್ದಳು. ಮತ್ತೆ ಗೋಳೂರಕ್ಕನ ಪೆಟ್ಟಿಗೆಯನ್ನು ಅವು ಸೇರುತ್ತಿದ್ದವು. ಅವನಿಗೆ ಮದುವೆ ಮಾಡುತ್ತಾಳೆ. ಮದುವೆಯ ದಿನವೇ ಗಂಡ-ಹೆಂಡತಿಯರನ್ನು ದೂರ ಮಾಡುತ್ತಾಳೆ. ಗೋಳೂರಕ್ಕ ಆ ದಿನವೇ ಮದುವೆಯ ದಿಬ್ಬಣದಲ್ಲಿ ಹೆಂಗಸರು, ಗಂಡಸರು ಬೇರೆ ಬೇರೆ ಎತ್ತಿನಗಾಡಿಯಲ್ಲಿ ಬರುವ ಹಾಗೇ ಮಾಡುತ್ತಾಳೆ. ಮತ್ತೆ ಆ ದಿನ ಅವಳ ಜೊತೆಯಲ್ಲಿಯೇ ಸೊಸೆಯನ್ನು ಮಲಗಿಸಿಕೊಳ್ಳುತ್ತಾಳೆ. ಮಾರನೆಯ ದಿನ ವಸ್ತು ವಸ್ತು

ಅಂತ ಬುಟ್ಕಂಡ್ರೆ ಹಳೇದಾಗ್ದೆ ಇದ್ದಾತ?[೧] ಎಂದು ಮೊದಲ ದಿನವೇ ಸೊಸೆಗೆ ಕೆಲಸಕ್ಕೆ ಹಾಕುತ್ತಾಳೆ.

ಹೀಗೆ ಮಗನ ಸ್ನೇಹಿತರು ಅವನನ್ನು ಹೆಂಡತಿಯಿಂದ ದೂರ ಇದ್ದುದ್ದಕ್ಕೆ ಅವನಿಗೆ ಬುದ್ದಿ ಹೇಳಿ, ಅವನಿಗೆ ವಾಸ್ತವ ಸ್ಥಿತಿ ತಿಳಿಸಿದಾಗ ಆ ದಿನ ಬೇಗ ಹೋಗಿದಾಗ ತಾಯಿ ಇಷ್ಟು ಬೇಗ ಏಕೆ ಬಂದೆ ಅಂದಿದ್ದಕ್ಕೆ ಏಕೆ ಬಾರಬಾರದ ಎಂದು ಗಡುಸಾಗಿಯೇ ಉತ್ತರ ನೀಡುತ್ತಾನೆ. ಮಾತು ಮಾತು ಬೆಳೆದು ನಿರಿಗೆಗಳನ್ನು ಪಟಪಟನೆ ಒದರುತ್ತ ತೊಟ್ಟಿಯ ಬಿಸಿಲಿಗೆ ಒಣಹಾಕಿದ್ದ ಸೀಳು ಸೌದೆಯೊಂದು ಎತ್ತಿಕೊಂಡು ಮಗ ಬಾ ಹೊಡಿ ಎಂದು ಎದೆ ಉಬ್ಬಿಸಿ ನಿಂತಾಗ ಅವಳು ಭಯಂಕರ ದೃಶ್ಯ ಕಂಡು ಅಪ್ಪನಿಗೆ ಹೇಳಿ ಬುದ್ದಿ ಕಲಿಸುತ್ತೇನೆಂದು ಗದ್ದೆಗೆ ಬಿರುಗಾಳಿಯಂತೆ ಹೋಗುತ್ತಾಳೆ. ಅವಳ ಕೂಗಾಟ ಬೀದಿಯುದ್ದಕ್ಕೂ ಸಾಗಿದುದ್ದು ಕೇಳಿಸುತ್ತಾ ಕಡೆಗೆ ಪರಿಸರ ನೀರವವಾಗುತ್ತದೆ. ಗಂಡನ ಹತ್ತಿರ ಎಲ್ಲವನ್ನೂ ಹೇಳುತ್ತಾಳೆ. ಗಂಡ ಅದಕ್ಕೆ ಯಾವುದೇ ರೀತಿಯಲ್ಲೂ ಪ್ರತಿಕ್ರಿಯಿಸದೇ ಹಾಗೆಯೇ ನಿಂತುಕೊಳ್ಳುತ್ತಾನೆ. ತಲೆ ತಲೆ ಚಚ್ಚಿಕೊಂಡು ಅಳುತ್ತಾ ಕುಳಿತುಕೊಳ್ಳುತ್ತಾಳೆ. ಆದರೆ ಅವಳಿಗೆ ಸೊಸೆಯ ಎದುರಿಗೆ ಅವಮಾನವಾಯಿತೆಂದು ಅದನ್ನೆ ನೆನೆದು ನೆನೆದು ಅಳುತ್ತಿದ್ದಳು. ಸೊಸೆ ತುಂಬಿದ ಗರ್ಭಿಣಿಯಾಗುತ್ತಾಳೆ. ಅವಳ ಹೊಟ್ಟೆ ನೋಡಿದಾಗಲೆಲ್ಲ ಅವಳಿಗೆ ಕೋಪ ಬರುತ್ತಿತ್ತು. ಇಲ್ಲಿ ಮಗನ ಮೇಲೆ ಮಲತಾಯಿ ಧೋರಣೆ ಕಾಣಬಹುದು. ಗಂಡನಿಂದ ನಿರಾಸೆಯ ಬದುಕು ಅವಳು ಇವತ್ತಿನ ಈ ಸ್ಥಿತಿಗೆ ಕಾರಣ. ಯಜಮಾನಿಕೆಯ ಬೂತ ಅವಳಿಗೆ ಸೊಸೆಯ ಮೇಲೆ ಇವಳು ಅಧಿಕಾರ ಚಲಾಯಿಸುತ್ತಿದ್ದ. ಹೆಣ್ಣಿಗೆ ಹೆಣ್ಣೆ ಶತ್ರುವಾಗಿ ಕಾಣುತ್ತಾಳೆ.

ಮನುಷ್ಯನು ಹೇಗೆ ತನ್ನೆಲ್ಲ ಆಸೆಆಕಾಂಕ್ಷೆಗಳನ್ನು ಮನಸ್ಸಿನಲ್ಲಿದ್ದು ಅದು ರಾತ್ರಿ ನಿದ್ದೆಮಾಡುವಾಗ ಕನಸಾಗಿ ಬರುತ್ತದೆ. ಕನಸಿನಲ್ಲಾದರೂ ಅವನ ಆಸೆ ಈಡೇರಿಸಿಕೊಳ್ಳುವ ಭಾಗ್ಯ ನಮ್ಮದಾಗುತ್ತದೆ. ಅದೇ ಹಿನ್ನೆಲೆಯನ್ನು ಹೊಂದಿರುವ ಕಥೆಯೇ "ರಾಗ ಬೀದಿಯಲ್ಲಿ ರಥವಿಲ್ಲ"

ಅವನು ಜೀವನದ ಕಥೆ ನಾಲ್ಕು ವರ್ಷದಲ್ಲಿ ಆರು ಮಕ್ಕಳು ಇವನಿಗೆ ಸಂಸಾರದಲ್ಲಿ ಜುಗುಪ್ಸೆ ಬಂದು ಎಲ್ಲವೂ ತುಂಬಿಕೊಂಡಿರುವ ಸಂಸಾರದಿಂದ ಎಂದಿಗೆ

---

೧. ಎಂದೂ ಬಂದಿತೋ ಮಳೆ, ಪು. ೫೨.

ಮುಕ್ತಿ?[೧] ಎಂದು ಬೇಸತ್ತು ಅವನಿಗೆ ಸುತ್ತಲಿನ ಪರಿಸರವು ಮಲಿನವಾದಂತೆ ಅನಿಸುತ್ತಿರುತ್ತದೆ. ಈ ಸಮಸ್ಯೆ ಹಿಂದಿನದಲ್ಲ. ಅವನು ದಿನನಿತ್ಯ ತನ್ನ ಕರಿಯ ಮಕ್ಕಳು ಬೀದಿ ನಲ್ಲಿಯ ನೀರನ್ನು ಹಿಡಿದು ತಂದು ಸೊಗಸಾಗಿ ಸ್ನಾನ ಮಾಡಿಸುವ ದೃಶ್ಯ ಸುತ್ತ ಹರಕು ಗೋಣಿ ಬಿಗಿದು ಬೆತ್ತಲೆ ಕುಳಿತ ಕಣ್ಣು ಮುಚ್ಚಿ ತಣ್ಣೀರು ಸ್ನಾನ ಮಾಡುವ ತಾಯಂದಿರು ಆ ಮಕ್ಕಳ ಸುತ್ತ ನೊಣಗಳ ರಾಶಿ ಇರುತ್ತದೆ. ಅದೇ ರೀತಿ ಅಲ್ಲಿಯೇ ಹ್ಯಾಟುಬೂಟಿನ ಜನ ಗರಿಗರಿಯ ರೇಷ್ಮೆ ಜರತಾರಿಗಳ ಜನ ಬೂಟುಗಾಲಿನಲ್ಲಿ ಮದುವೆಯಾಗಲು ಸಿದ್ದ ಇರುವ ಮದುಮಕ್ಕಳು. ಹೀಗೆ ಹಲವಾರು ನೋಟ ನೋಡುತ್ತಾ ತನ್ನ ಪರಿಸ್ಥಿತಿ ಅವರ ಸ್ಥಿತಿ ನೋಡಿ ಮನಸ್ಸಿನಲ್ಲಿಯೇ ಮರುಗುತ್ತಿದ್ದಾನೆ.

ಆ ದಿನ ಚಳಿ ಜಾಸ್ತಿಯಾಯಿತು. ಹರಿದಿದ್ದ ಕಂಬಳಿ ಹೊದಿಸುತ್ತಾ ಹರಿದ ದಿಂಬನ್ನು ಹರಕು ಚಾಪೆ. ಇದೆಲ್ಲವನ್ನು ಹರಕು ನೆಲದ ಮೇಲೆ ಹಾಕಿಕೊಂಡು ನಿದ್ದೆಗೆ ಜಾರಿದೆ. ಕನಸಿನಲ್ಲಿ ಒಂದು ಕಾಡು. ನನ್ನನ್ನು ಕರೆತಂದವರ್ಯಾರು? ನನ್ನ ಮನೆಯೆಲ್ಲಿ? ಮಡದಿ ಮಕ್ಕಳೆಲ್ಲಿ? ಎಂದು ಆಶ್ಚರ್ಯ. ತಣ್ಣನೆಯ ಗಾಳಿ ಹಿತವಾಗಿ ಬೀಸುತ್ತಿದೆ. ಆ ಗಾಳಿಯಿಂದ ಮನಸ್ಸಿಗೆ ಸಂತೋಷವಾಗುತ್ತಿದೆ. ಸೊಳ್ಳೆಗಳ ಶಬ್ದ ಇರಲಿಲ್ಲ. ಎಂಜಲೆಲೆಗಳ ರಾಶಿಯಲ್ಲಿ[೨] ಕಾಡಿರಬೇಕು. ಪ್ರಶಾಂತ ವಾತಾವರಣ ಸುತ್ತಲೂ ಕಗ್ಗತ್ತಲು. ಕುತೂಹಲದಿಂದ ಹೆಜ್ಜೆ ಇಟ್ಟ ಮೃದುವಾದ ನೆಲ. ಹುಲ್ಲೋ ಹೂವೊ? ಏನಾದರಿರಲಿ ಹಿತವಾಗಿದೆ. ಮತ್ತೆ ಮತ್ತೆ ಹೆಜ್ಜೆ ಹೆಜ್ಜೆಯಿಡುವ ಆಸೆ. ಆಗ ಒಂದು ತಣ್ಣನೆಯ ವಸ್ತು ತಗಲಿದಂತೆ ಭಾಸವಾಗುತ್ತದೆ. ಹಿಂದಕ್ಕೆ ಬಂದ ಪಾದ ಮತ್ತೆ ಮತ್ತೆ ಆ ವಸ್ತುವನ್ನೇ ಸ್ಪರ್ಶಿಸುತ್ತದೆ. ಮೈಯೆಲ್ಲ ರೋಮಾಂಚನವಾಗುತ್ತದೆ. ಅದು ಅಷ್ಟು ತಣ್ಣಗಿದ್ದರೆ ಅದು ಹಣವೇ? ಜಾಗವೇ? ರುದ್ರಭೂಮಿಯೆ?

ಮೆಲ್ಲನೇ ಕುಕ್ಕರಗಾಲಿನಲ್ಲಿ ಕುಳಿತುಕೊಳ್ಳುತ್ತಾನೆ. ಅಂಜಿ ಅಂಜಿ ಕೈ ನೀಡುತ್ತಾನೆ. ಅದು ಮಣ್ಣು ಯಾಕೆ ಇಷ್ಟು ತಣ್ಣಗಿದೆ? ಯಾರಾದರೂ ಅಗೆದಿರಬಹುದೇ? ಏನಾದರೂ ಹುಗಿದಿರಬಹುದೇ? ಹೆಣವನ್ನೋ? ಹಣವನ್ನೋ? ಬೆರಳುಗಳು ಕೋಳಿಯ ಕಾಲಿನಂತೆ ಪರಪರನೆ ಪರಚತೊಡಗಿತು. ಗುಡ್ಡೆ ಕರಗಿ ಕೊರಕಲಾಗ-ತೊಡಗಿತು. ಮಣ್ಣಿನ ಮೃದುವಾದ ಸ್ಪರ್ಶದ ನಡುವೆ ಇದ್ದಕ್ಕಿದ್ದಂತೆ ಗಟ್ಟಿಯಾದದ್ದೇನೋ ಕೈಗೆ ತಗುಲಿದಂತಾಯಿತು ಪರಚಿದೆ. ಮೆತ್ತಗಿನ ಮಣ್ಣು ಮುಗಿಯಿತು. ಸಾಲಾಗಿ

---

೧. ರಾಗಬೀದಿಯಲ್ಲಿ ರಥವಿಲ್ಲ, ಪು. ೮೩.
೨. ಎಂದು ಬಂದಿತೋ ಮಳೆ, ಪು. ೮೪.

ಮೂರು ಹಂಡೆಗಳು ಮೊದಲನೆ ಹಂಡೆಯಲ್ಲಿ ಮಿಂಚು ಬಂತು ಕತ್ತಲೆಗೆ ಕಣ್ಣು ಕೋರೈಸುವ ಬೆಳಕು ಕಣ್ಣು ಮುಚ್ಚಿಕೊಂಡ ನಂತರ ನೋಡಿದ ಅದೊಂದು ಸುಂದರ ಉದ್ಯಾನವನ ಪನ್ನೀರಿನ ಪುಷ್ಕರಿಣಿ, ಎರಡನೇ ಹಂಡೆ ವಜ್ರ ವೈಢೂರ್ಯ, ಕಂಠಿಹಾರ ಎಲ್ಲ ಇರುತ್ತದೆ. ಅದನ್ನು ಮತ್ತೆ ಮಣ್ಣಿನಲ್ಲಿ ಹಾಕಿ ಮುಚ್ಚಿ ಗುರುತು ಮಾಡಿ ಮನೆಯಿಂದ ಚೀಲ ಒಯ್ದು ಅದನ್ನು ತುಂಬಿ ಮನೆಗೆ ತಂದು ಮತ್ತೆರಡು ಚೀಲ ತೆಗೆದುಕೊಂಡು ಹೋಗಲು ಮುಂದಾದೆ ಗಾಡಾಂಧಕಾರವಾಗಿತ್ತು ಕತ್ತಲು. ಆ ಚೀಲ ಎತ್ತಲಾಗಲಿಲ್ಲ. ಎಂಥೆಂಥದೋ ವಿಚಿತ್ರ ಶಬ್ದಗಳು ಕೇಳಿಸುತ್ತಿದ್ದವು. ಏನೋ ಕೊರ ಕೊರ ಶಬ್ದ ಗೊರಗೊರ ಸದ್ದು ಗಂಡಾಂತರ ಸಮೀಪವಾಗುತ್ತಿದೆ ಎಂದೆನಿಸಿತು. ಥಟ್ಟನೆ ಬಗ್ಗಿದೆ. ಚೀಲವನ್ನು ತಡಕಿದೆ. ಚೀಲದ ಜಾಗದಲ್ಲಿ ಮತ್ತೇನೋ ಬೆಚ್ಚಗಿನ ವಸ್ತು ಸಿಕ್ಕಿತು. ಇದೇನು ಮಾಯೆ ಎಂದು ಬೆಚ್ಚಿದೆ. ಕೈ ನೀಡಿ ತಡಕಿದೆ. ಅರೆ ಎಚ್ಚರ. ಕತ್ತಲೆ, ಬೆವರಿನ ಧಾರೆ. ಕಡೆಗೆ ತಿಳಿಯಿತು. ಆ ಬೆಚ್ಚಗಿನ ವಸ್ತು ಮತ್ತೇನೂ ಅಲ್ಲ ತನ್ನ ಐದನೆ ಮಗು ಎಂದು ಮನುಷ್ಯನ ಇಲ್ಲದಿರುವಿಕೆಯನ್ನು ಮನಸ್ಸಿನಲ್ಲಿ ಸಿಕ್ಕರೆ ಎಂದುಕೊಂಡು ಅದೇ ಯೋಚನೆಯಲ್ಲಿ ಮಲಗುತ್ತಾನೆ. ಅದೇ ಕನಸಾಗಿ ಕನಸ್ಸಿನಲ್ಲಿ ಅವನ ಮನಸ್ಸಿನ ಆಸೆ ಪೂರೈಸುತ್ತದೆ. ಬಡತನದ ಜೀವನದಲ್ಲಿ ಬೇಸತ್ತ ಅವನಿಗೆ ಕನಸಿನಲ್ಲಿ ಸಂತೋಷಪಡುತ್ತಾನೆ. ಅಂದರೆ ತನ್ನ ಮಕ್ಕಳೇ ಆಸ್ತಿಯಾಗಿರುತ್ತಾರೆ.

'ಎಂದು ಬಂದಿತೋ ಮಳೆ' ಕಥೆಯಲ್ಲಿ ಒಬ್ಬ ಮುಗ್ಧ ಹುಡುಗ ಯಾವ ರೀತಿಯಲ್ಲಿ ಎಲ್ಲವನ್ನು ಸತ್ಯ ಎಂದು ನಂಬುವ ಪ್ರಸಂಗ ಗಿರಿಯ ತಾನು ಮದುವೆಯಾಗಲು ಅನೇಕ ಹುಡುಗಿಯರನ್ನು ನೋಡಿಬರುತ್ತಿದ್ದ. ಆದರೆ ಯಾರು ಅವನಿಗೆ ಇಷ್ಟವಾಗುತ್ತಿರಲಿಲ್ಲ. ಹಳ್ಳಿಯ ಬಹುಪಾಲು ಮಧ್ಯಮ ವರ್ಗದ ಮನೆಗಳಂತೆಯೇ ದ್ಯಾವಯ್ಯನ ಮನೆಯೂ ಇತ್ತು. ಅವನ ಮನೆಗೆ ಹುಡುಗಿ ನೋಡಲು ಹೋದಾಗ ಮೀನಾಕ್ಷಿ ಇಣುಕಿ ಇಣುಕಿ ನೋಡಿ ಇವನ ಮನಸೂರೆಗೊಂಡಳು. ಲಕ್ಷಣವಾಗಿ ಅಲಂಕರಿಸಿಕೊಂಡು ಸುಂದರವಾಗಿ ಕಾಣಿಸುತ್ತಿದ್ದಳು. ಮೀನಾಕ್ಷಿಯ ಮುಖದ ಮೇಲೆ ಕಿಟಕಿಯ ಹೊನಲು ಬೀಳುತ್ತಿದ್ದುದರಿಂದ ಅಕ್ಕಿರೊಟ್ಟಿ ಹಾಗೂ ಅವನ ಗೆಳೆಯರಿಗೆ ಹೆಣ್ಣನ್ನು ಚೆನ್ನಾಗಿ ನೋಡಲು ಸಾಧ್ಯವಾಗಿತ್ತು.

ಒಪ್ಪುಮಾತು ಆದಮೇಲೆ ಒಂದು ಬಾರಿ ಅವಳ ಮನೆಗೆ ಹೋಗುತ್ತಾನೆ. ಬೀದಿಯಲ್ಲಿ ಯಾರು ಇರಲಿಲ್ಲ. ಅಲ್ಲೊಬ್ಬ ಇಲ್ಲೊಬ್ಬ ಕಾಣಿಸುತ್ತಿದ್ದ ಮನೆಯಲ್ಲಿ ಯಾರು ಇರಲಿಲ್ಲ. ಮೀನಾಕ್ಷಿ ಒಬ್ಬಳೆ ಇದ್ದಳು ಎನಿಸುತ್ತದೆ. ಇವನನ್ನು ನೋಡಿ ಪ್ರೀತಿಯಿಂದ ಬರಮಾಡಿಕೊಂಡು ಕುಡಿಯಲು ನೀರುಕೊಟ್ಟು ಉಪಚರಿಸಿ ಪಕ್ಕದಲ್ಲಿ

ಕುಳಿತು ಒಬ್ಬರನೊಬ್ಬರು ನೋಡುತ್ತಾ ಮಗ್ನರಾಗುತ್ತಾರೆ. ಆ ಹೊತ್ತಿಗೆ ಅವಳ ತಾಯಿ ಬಂದುಬಿಡುತ್ತಾಳೆ. ಅಪ್ಪ ಎಲ್ಲರೂ ಬರುತ್ತಾರೆ. ಆ ದಿನ ಅವನಿಗೆ ಭರ್ಜರಿಯಾಗಿಯೇ ಅತಿಥಿ ಸತ್ಕಾರ ನಡೆದಿರುತ್ತದೆ.

ನಂತರ ಮದುವೆ ಕಾರ್ಯ ಸುಗಮವಾಗಿ ನಡೆದು ಬಹಳ ಸುಖವಾಗಿ ಗಂಡ ಹೆಂಡತಿ ಬಹಳ ಅನೋನ್ಯವಾಗಿ ಇರುತ್ತಾರೆ. ಅವಳು ತವರು ಮನೆಗೆ ಹೋದಾಗ ಅವಳ ಹಿಂದೆಯೇ ಇವನು ಹೋಗುತ್ತಾನೆ. ಗಂಡನ ಬರುವಿಕೆಯನ್ನು ನಿರೀಕ್ಷಿಸದ ಹೆಂಡತಿ ತಬ್ಬಿಬ್ಬಾಗಿ ತನ್ನ ತಾಯಿಗೆ ಊಟಕೊಟ್ಟು ಬನ್ನಿ ಎಂದಾಗ ಮನಸ್ಸಿಲ್ಲದ ಮನಸ್ಸಿನಲ್ಲಿ ಹೋಗುತ್ತಾನೆ.

ದ್ಯಾವಯ್ಯ ಇವನ ಮಾವ ಅತ್ತೆಯ ಮಾತಿಗೆ ಹೆದರುತ್ತಿದ್ದರು. ಮದುವೆಯಾದ ಹೊಸದರಲ್ಲಿ ತುಂಬ ಅನೋನ್ಯವಾಗಿದ್ದರು. ಊರಿನ ಜನರು ಇದನ್ನು ನೋಡಿ ಗಂಡ ಹೆಂಡಿರು ಎಂದರೆ ಹೀಗೆ ಇರಬೇಕು ಅಂದುಕೊಳ್ಳುತ್ತಿದ್ದರು. ಆದರೆ ಬರಬರುತ್ತಾ ಅವಳು ಎಲ್ಲ ಅಧಿಕಾರವನ್ನು ಇವಳೇ ವಹಿಸಿಕೊಂಡಳು. ಗಂಡ ಹೆಸರಿಂದ ತನ್ನ ಹೆಸರಿಗೆ ಎಲ್ಲ ಆಸ್ತಿಯನ್ನು ಬರೆಸಿಕೊಂಡು ಸಂಪೂರ್ಣ ಜವಾಬ್ದಾರಿ ಅವಳದ್ದಾಗಿತ್ತು. ಬರಬರುತ್ತ ಯಾರಿಗೂ ತಿಳಿಯದ ಸಂಬಂಧದಲ್ಲಿ ಅವನ ಹೆಂಡತಿ ಮುಳುಗಿದಳು. ಅವನ ಅತ್ತೆಯ ನಡವಳಿಕೆಯ ಬಗ್ಗೆ ಊರಿನ ಜನರು ಆಡಿಕೊಳ್ಳುತ್ತಿದ್ದು ಇವನ ಕಿವಿಗೆ ಬೀಳುತ್ತಿತ್ತು. ಆ ದಿನ ಊಟ ತೆಗೆದುಕೊಂಡು ಗದ್ದೆಗೆ ಹೋಗುತ್ತಾನೆ. ಅಲ್ಲಿ ಅತ್ತೆ ಕಣ್ಣಿಗೆ ಬೀಳದೇ ಇರುವುದರಿಂದ ಎಲ್ಲೋ ಹಿತ್ತಲಿಗೆ ಹೋಗಿರಬೇಕು ಎಂದುಕೊಂಡು ಕಾದು ಕುಳಿತ. ನಗು ಬಂದರೂ ಹೆಚ್ಚು ಹೊತ್ತು ಉಳಿಯಲಿಲ್ಲ. ಗಂಡಸು ಕಾಣಿಸಿದ್ದರಿಂದ ಆ ದಿನ ಎದೆ ಬಡಿದಂತಾಗಿ ಅತ್ತೆಯ ಕೆಟ್ಟ ನಡವಳಿಕೆಯನ್ನು ನೋಡಿ ಅವಳ ಬಗ್ಗೆ ಅಸಹ್ಯ ಭಾವನೆ ಮೂಡುತ್ತದೆ. ಹೆಂಡತಿಯನ್ನು ಊರಿಗೆ ಕರೆದುಕೊಂಡು ಹೋದ ಮತ್ತೆ ಹೆರಿಗೆಗೆ ಅಲ್ಲಿಗೆ ಕರೆದುಕೊಂಡು ಹೋದ. ಆಗ ಅವನು ಸಂಪೂರ್ಣವಾಗಿ ಒಬ್ಬಂಟಿಯಾದ ಜಾತ್ರೆಗೆ ಹೋದಾಗ ಅತ್ತೆಯ ಶಬ್ದಕೇಳಿ ಹೆದರಿ ಓಡಿ ಅವಿತು ಕುಳಿತುಕೊಂಡ ನಂತರ ಇವನನ್ನೇ ಹಿಂಬಾಲಿಸಿ ಬಂದು ಅವಳು ಹೆಂಡತಿ ನೋಡಲು ಊರಿಗೆ ಬಂದ್ಹೋಗಿ ಎಂದು ಕಷ್ಟಪಟ್ಟು ಹೇಳುತ್ತಾಳೆ. ಅದಕ್ಕೆ ಇವನು ಏನನ್ನೂ ಉತ್ತರಿಸಲಾಗದೆ. ಎಲ್ಲದಕ್ಕೂ ಕಾಲ ಕೂಡಿ ಬರಲಿ ಎಂದು ಹೇಳಿ ಹೊರಟ.

ಅವನು ಹೋಗುತ್ತ ತನ್ನ ಜೀವನದಲ್ಲಿ ನಡೆದ ಘಟನೆಗಳನ್ನು ಮೆಲಕು ಹಾಕುತ್ತ ಹೋಗುತ್ತಾನೆ. ಇಲ್ಲಿ ಅತ್ತೆಯ ನಡವಳಿಕೆಯಿಂದ ಬೇಜಾರಾಗಿ ಮಗಳನ್ನು ತಿರಸ್ಕಾರದ ಭಾವದಿಂದ ನೋಡುವ ಪರಿಸ್ಥಿತಿಯುಂಟಾಯಿತು. ತನ್ನ ಗಂಡ ದ್ಯಾವನಿಗೆ ತನ್ನ ಕೆಟ್ಟ

[illegible]

[illegible]

[illegible]

[illegible]

ಚಾಳಿಯಿಂದ ಅವನಿಗೆ ಮೋಸ ಮಾಡುತ್ತಾಳೆ. ಇಲ್ಲಿ ಮುಗ್ದನಾಗಿ ದ್ಯಾವಯ್ಯ ಮೋಸ ಹೋಗುತ್ತಾನೆ.

ಹೀಗೆ ಅನೇಕ ವಿಭಿನ್ನ ಶೈಲಿಯಲ್ಲಿ ಬೆಳೆದು ಬಂದ ಕತೆಯನ್ನು ನಾವಿಲ್ಲಿ ಗಮನಿಸಬಹುದು. ಒಂದೊಂದು ಕತೆಯು ಒಂದೊಂದು ವಿಧದ ವಿಷಯವನ್ನು ಚರ್ಚಿಸುತ್ತದೆ ಮತ್ತು ಜೊತೆಗೆ ಅನೇಕ ವಿಷಯಗಳು ತಿಳಿದುಕೊಳ್ಳುವ ಅವಕಾಶ ಸಿಗುತ್ತದೆ. ಮನುಷ್ಯ ಸಮಾಜ ಜೀವಿ. ಆ ಸಮಾಜದಲ್ಲಿ ವಾಸಮಾಡುವ ಮನುಷ್ಯ ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಮನುಷ್ಯನ ಅನೇಕ ದೌರ್ಬಲ್ಯಗಳು ತಿಳಿದು ಅದನ್ನು ಸರಿಪಡಿಸುವಂತಹ ಕೆಲಸವು ಒಡೆದಿದೆ. ಹಳ್ಳಿಗಳಲ್ಲಿ ಕಂಡುಬರುವಂತಹ ಅನೇಕ ಆಚರಣೆಗಳು ಬಿರುಕುಬಿಟ್ಟ ಅನೇಕ ಸಂಬಂಧಗಳು ಬೆಸೆಯುವ ಅವಕಾಶ ಸಿಗುತ್ತದೆ. ಬಾಡೂಟ ಎಂದರೆ ಎಲ್ಲರೂ ಎಲ್ಲವನ್ನೂ ಮರೆತು ಖುಷಿಯಿಂದ ಆಚರಿಸುತ್ತಾರೆ. ಒಬ್ಬ ಆದರ್ಶ ಮುಗ್ದ ಹುಡುಗನ ಸಮಸ್ಯೆಯನ್ನು ಮನಃಶಾಸ್ತ್ರದ ತತ್ತ್ವಗಳ ಆಧಾರದ ಮೇಲೆ ಒಳಮನಸ್ಸನ್ನು ಹೊಕ್ಕು ಹೆಕ್ಕಿ ನೋಡುವ ಆತ್ಮಶೋಧನೆ, ಸಭ್ಯವರ್ತನೆಯ ಹಿಂದಿರುವ ನಿಜರೂಪ ನರ್ತನವನ್ನು ಕಾಣುವ ಪ್ರಯತ್ನ ಮೆಚ್ಚುವಂತಹದು.

ಅನಿರೀಕ್ಷಿತ ಆಘಾತವನ್ನುಂಟು ಮಾಡುವ ಅನೇಕರು ಅನ್ಯರ ಬಗ್ಗೆ ದೂರು ಹೊರಿಸುವ, ಕಟ್ಟುಕತೆ ಕಟ್ಟಿ ಹರಡುವ ಚಾಡಿಕೋರರ ಬಗ್ಗೆ ಜುಗುಪ್ಸೆ ತಾಳುತ್ತಾ ಬರುವ ಕಥಾನಾಯಕನಿಗೆ ತಮ್ಮೂರಿನ ಉಪಾಧ್ಯಾಯರ ಹೆಣ್ಣುಮಕ್ಕಳ ಬಗ್ಗೆ ಹಬ್ಬಿದ್ದ ಕಟ್ಟುಕತೆಗೆ ತನ್ನ ತಾಯಿಯೇ ಕಾರಣವೆಂಬ ಸತ್ಯ ಎಂದು ತಿಳಿದಾಗ ಮಾತಿಲ್ಲದ ಮೂಕನಾಗುತ್ತಾನೆ. ಹೀಗೆ ಹಲವಾರು ಹಿನ್ನೆಲೆಯುಳ್ಳ ಕಥೆಗಳನ್ನು ನಾವು ರಾಮಣ್ಣನವರ ಕಥೆಗಳಲ್ಲಿ ಕಾಣಬಹುದು.

[illegible]

ಅಧ್ಯಾಯ ಆರು
ಉಪಸಂಹಾರ

ಒಟ್ಟಾರೆ ಈ ದೇಶದ ಭವ್ಯ ಇತಿಹಾಸಕ್ಕೆ ಭದ್ರಬುನಾದಿ ಹಾಕಿರುವ, ದೇಶದ ಬೆನ್ನೆಲುಬು ರೈತನ ವಾಸಸ್ಥಾನವಾದ ಹಳ್ಳಿಗಾಡಿನ ಕಥಾವಿವರಗಳೇ ಪ್ರಧಾನವಾಗಿರುವ ಕ್ಯಾತನಹಳ್ಳಿ ರಾಮಣ್ಣನವರ ಒಟ್ಟು ಕತೆಗಳಲ್ಲಿ ಗ್ರಾಮೀಣ ಪರಿಸರದ ದಟ್ಟ ಅನುಭವಗಳನ್ನು ನೋಡಬಹುದು. ಕೆಲವೊಮ್ಮೆ ಕತೆಗಳ ವಿವರ ಸ್ವಲ್ಪ ಜಾಳು ಎಂದು ಕೆಲವು ಕಡೆ ಅನ್ನಿಸಿದರೂ ಕೆಲವು ಕಡೆ ದಟ್ಟ ಹಾಸ್ಯಪ್ರಜ್ಞೆ 'ಸಾಯ್ತಿ' ಕತೆಯಲ್ಲಿ ಬರುತ್ತದೆ.

ಈ ಕತೆಗಳ ಒಟ್ಟು ಅಧ್ಯಯನದಿಂದ ಕಂಡುಕೊಂಡದ್ದೇನೆಂದರೆ ಗ್ರಾಮೀಣ ಪರಿಸರ ಮುಂಚೆಯಷ್ಟು ಗಟ್ಟಿತನವನ್ನು, ಬಾಂಧವ್ಯ ಪರಿಸರವನ್ನು ಉಳಿಸಿಕೊಂಡಿಲ್ಲ ಎಂಬುದು. ಹಿಂದೆ ತಾತ, ಅಜ್ಜಿ, ಮಗ, ಸೊಸೆ ಅವರ ಅಣ್ಣತಮ್ಮಂದಿರು ಅವರ ಮಕ್ಕಳು ಎಲ್ಲಾ ಕೂಡು ಕುಟುಂಬದಲ್ಲಿ ವಾಸಿಸುತ್ತಿದ್ದರು. ಇಂದು ಹಳ್ಳಿಯ ಕೌಟುಂಬಿಕ ಘಟನೆ ಪ್ರಧಾನವಾಗಿ ಎದ್ದು ಕಾಣುತ್ತಿರುವುದನ್ನು ಗಮನಿಸಬಹುದು. ಆಧುನಿಕ ಮಹಿಳೆಯ ಚಿತ್ರಣ ಕೆಲವು ಕತೆಗಳಲ್ಲಿ ಮಾತ್ರ ಕಂಡುಬರುತ್ತದೆ. ಬಹುತೇಕ ಇಲ್ಲಿನ ಸ್ತ್ರೀಪಾತ್ರಗಳು ತಮ್ಮ ಸ್ವಂತ ಆಸ್ಥೆಯ ಈಡೇರಿಕೆಗಾಗಿ ತುಡಿಯುವ, ಮಿಡಿಯುವ ಆ ಕಾರಣಕ್ಕಾಗಿ ವ್ಯಾಕುಲಗೊಳ್ಳುವ ಪ್ರಸಂಗಗಳನ್ನು ಕತೆಗಳಲ್ಲಿ ನೋಡಬಹುದು.

ಹಳ್ಳಿಗಳು ಇಂದು ಮಾಹಿತಿ ತಂತ್ರಜ್ಞಾನದಿಂದ ಹಿಂದಿನ ಸಾಂಸ್ಕೃತಿಕ ಜನಪದೀಯ ಗುಣಗಳನ್ನು ಮೊದಲಿನಷ್ಟು ಹೊಂದಿಲ್ಲ ಎಂಬುದು ವಾಸ್ತವ ಸತ್ಯ. ವಿದ್ಯಾಭ್ಯಾಸ ಹೆಚ್ಚಾದರೂ ಮಾನವೀಯ ಮೌಲ್ಯಗಳು, ಅಂತಃಕರಣ ಇನ್ನೂ ಕಾಣಲಾಗುತ್ತಿಲ್ಲ. ಜಾನಪದ ವಿದ್ವಾಂಸರಾದ ಕ್ಯಾತನಹಳ್ಳಿ ರಾಮಣ್ಣರವರು "ಕೂಡಿ ಬಾಳಿದರೆ ಸ್ವರ್ಗ ಸುಖ" ಎಂದು ನಂಬಿ ನಡೆಯುತ್ತಿದ್ದ ಗ್ರಾಮೀಣರು ಇಂದು ಕ್ಷುಲ್ಲಕ ಕಾರಣಗಳಿಗಾಗಿ ಹೇಗೆ ಅಸಹನೆ ಹೊಂದಿ ಪಾಲಾಗಿ ಸಣ್ಣ ಕುಟುಂಬಗಳಾಗಿ ಹಾಳಾಗುತ್ತಿದ್ದಾರೆ ಎಂಬ ಸೂಕ್ಷ್ಮ ಚಿತ್ರಣವನ್ನು ಇಲ್ಲಿ ಅಭಿವ್ಯಕ್ತಿಸಿದ್ದಾರೆ. ಸರ್ಕಾರ ಏನೇ ಸೌಲಭ್ಯ, ಸಹಕಾರ, ಸವಲತ್ತು ನೀಡಿದರೂ ಹಳ್ಳಿಗರು ಸಮಾಜದಲ್ಲಿ ಒಟ್ಟಾಗಿ ನೆಮ್ಮದಿಯಿಂದ ಯಾವುದೇ ಸಂಘರ್ಷಗಳಿಗೆ, ಪಿತೂರಿಗಳಿಗೆ ಒಳಗಾಗದೆ ಬಾಳಿದರೆ ಹಳ್ಳಿಗಳು ನಿಜಕ್ಕೂ ಸ್ವರ್ಗವೇ ಆಗುತ್ತದೆ. ಒಟ್ಟಾರೆ ಕ್ಯಾತನಹಳ್ಳಿ ರಾಮಣ್ಣನವರ ಒಟ್ಟು

[illegible]

ಕತೆಗಳ ಅಧ್ಯಯನವು ಕೇವಲ ಕಾಲಹರಣ ಮಾಡುವ ಓದುವಿಕೆ ಆಗದೆ ಒಂದು ಸಮಾಜದಲ್ಲಿ ಬದಲಾಗುತ್ತಿರುವ ಸಂದರ್ಭಗಳ ಶೈಕ್ಷಣಿಕ ಅಧ್ಯಯನದಂತೆ ಕಂಡುಬರುತ್ತದೆ. ಸಾಮಾಜಿಕ ಅಸಮತೋಲನ, ಸ್ತ್ರೀಯರ ವೈವಿಧ್ಯಮಯ ಪಾತ್ರಪರಿಚಯ, ವಿಧವಾ ಸಮಸ್ಯೆಗಳ ವಿವರಗಳನ್ನು ಒಟ್ಟಾರೆ ಇವರ ಕತೆಗಳ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಪರಾಮರ್ಶನ ಗ್ರಂಥಗಳು

೧. ಕ್ಯಾತನಹಳ್ಳಿ ರಾಮಣ್ಣ ಅವರ ಕೃತಿಗಳು

೧) ತಿಳಿಜಲ

೨) ವಜ್ರವರ್ತುಲ (೧೯೬೭)

೩) ಎಂದು ಬಂದಿತೊ ಮಳೆ (೨೦೦೦)

೨. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಡಾ. ಬಿ.ಸಿ.ನಿಂಗಣ್ಣ

೩. ಕನ್ನಡ ಸಾಹಿತ್ಯ ಕೋಶ, ರಾಜಪ್ಪ ದಳವಾಯಿ

೪. ಆಧುನಿಕ ಮಹಿಳಾ ಸಣ್ಣಕತೆಗಳಲ್ಲಿ ಪ್ರತಿಭಟನೆಯ ವಿನ್ಯಾಸಗಳು, ಡಾ. ಡಿ. ಸುಮಂಗಳ

೫. ಬೀಚನಹಳ್ಳಿ ಅವರ ೧೯೮ಲ ಸಣ್ಣಕತೆಗಳು : ಡಾ. ಕರೀಗೌಡ ಬೀಚನಹಳ್ಳಿ, ಪ್ರಕಾಶನ: ಟಿ.ಎಸ್. ದಕ್ಷಿಣಮೂರ್ತಿ, ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ.

೬. ನೇಮಿಚಂದ್ರರವರ ಸಣ್ಣಕತೆಗಳ ಒಂದು ಅಧ್ಯಯನ, ಕೆಂಡಗಣ್ಣಸ್ವಾಮಿ.ಬಿ.ಎನ್.

೭. ಪ್ರಸಾರಾಂಗ ಮತ್ತು ಕುವೆಂಪು, ಸಣ್ಣಕಥೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೨೦೦೦.

೮. ಕನ್ನಡ ಸಾಹಿತ್ಯ ಸಂಗಾತಿ, ಕೀರ್ತಿನಾಥ ಕುರ್ತಕೋಟಿ

೯. ಅನಕೃ, ಸಾಹಿತ್ಯ ಮತ್ತು ಜೀವನ, ಶಾರದ ಪ್ರಕಟನಾಲಯ, ೧೯೬೧.

*****